ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 12 | ಸಂಚಿಕೆ 15 | ಏಪ್ರಿಲ್ 9–15, 2018 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com

ಬಂಡಾಯ ಕವಿ ಸಂಗಾತಿ ಶೇಷಗಿರಿ ಹವಾಲ್ದಾರ್ ಇನ್ನಿಲ್ಲ





ಕ್ಷೇತ್ರ ಸಮೀಕ್ಷೆ



ಕೆ.ಆರ್.ಪುರಂ



ರೋಣ



ಬಿಜೆಪಿಯ ಧರ್ಮ-ಕಾರಣದ ಸಂಕಟ




ದಲಿತ ಆಕ್ರೋಶಕ್ಕೆ ಕಿವಿಕೊಡಿ




ಬಂಗಾಳ ಗ್ರಾಮ ಪಂಚಾಯತ್ ರಣಾಂಗಣ















ದೌರ್ಜನ್ಯ ತಡೆ ಕಾಯ್ದೆಯನ್ನು ದುರ್ಬಲಗೊಳಿಸುವ ತೀರ್ಪಿನ ವಿರುದ್ಧ ವ್ಯಾಪಕ ಆಕ್ರೋಶ: ಪ್ರತಿಭಟನಾಕಾರರ ಮೇಲೆ ಬಿಜೆಪಿ ಸರಕಾರಗಳ ಗೋಳೀಬಾರ್‌ಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡನೆ

ವಿವಿಧ ದಲಿತ ಸಂಘಟನೆಗಳು ನೀಡಿದ 'ಭಾರತ್ ಬಂದ್' ಕರೆಗೆ ಪಂಜಾಬ್, ರಾಜಸ್ತಾನ, ಮಧ್ಯಪ್ರದೇಶ, ಬಿಹಾರ, ಝಾರ್ಖಂಡ್, ಒಡಿಶಾ ಮತ್ತು ಉತ್ತರಪ್ರದೇಶದಲ್ಲಿ ವ್ಯಾಪಕ ಸ್ಪಂದನೆ ದೊರೆತಿದೆ. ಇದು ಪರಿಶಿಷ್ಟ ಜಾತಿಗಳು/ಪರಿಶಿಷ್ಟ ಬುಡಕಟ್ಟುಗಳ ದೌರ್ಜನ್ಯ ತಡೆ ಕಾಯ್ದೆಯನ್ನು ದುರ್ಬಲಗೊಳಿಸುವ ಸುಪ್ರಿಂ ಕೋರ್ಟ್ ತೀರ್ಪಿನ ವಿರುದ್ಧ ಉಂಟಾಗಿರುವ ಆಕ್ರೋಶವನ್ನು ತೋರಿಸುತ್ತದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಬಿಜೆಪಿ ಆಳ್ವಿಕೆಯ ಮಧ್ಯಪ್ರದೇಶದ ಗ್ವಾಲಿಯರ್, ಭಿಂಡ್ ಮತ್ತು ಮೊರೆನಾದಲ್ಲಿ ನಾಲ್ವರ ಸಾವಿಗೆ ಕಾರಣವಾಗಿರುವ ಅಮಾನುಷ ಪೋಲೀಸ್ ಗೋಳೀಬಾರನ್ನು ಪೊಲಿಟ್‌ಬ್ಯುರೊ ಖಂಡಿಸಿದೆ. ಇತರ ಹಲವು ಸ್ಥಳಗಳಲ್ಲಿ ಪೋಲೀಸರು ಪ್ರತಿಭಟನಾಕಾರರ ಮೇಲೆ ಹಲ್ಲೆ ಮಾಡಿದ್ದಾರೆ. ರಾಜಸ್ತಾನದ ಆಳ್ವರ್‌ನಲ್ಲಿಯೂ ಒಬ್ಬನ ಸಾವುಂಟಾಗಿದೆ.

ಇಂತಹ ಒಂದು ಸನ್ನಿವೇಶ ಮೋದಿ ಸರಕಾರ ದೌರ್ಜನ್ಯ ತಡೆ ಕಾಯ್ದೆಯನ್ನು ದುರ್ಬಲಗೊಳಿಸುವುದರ ವಿರುದ್ಧ ಒಂದು ಪರಿಣಾಮಕಾರಿ ವಾದವನ್ನು ಮಂಡಿಸುವಲ್ಲಿ ವಿಫಲವಾಗಿರುವುದರಿಂದಾಗಿ ಉಂಟಾಗಿದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ, ಸರಕಾರದ ವಕೀಲರು ಸುಪ್ರಿಂ ಕೋರ್ಟಿನಲ್ಲಿ ಮರುವಿಮರ್ಶೆ ಅರ್ಜಿಯಲ್ಲಿ ಪರಿಣಾಮಕಾರಿಯಾಗಿ ವಾದ ಮಂಡಿಸಬೇಕಾಗಿದೆ ಎಂದು ಹೇಳಿದೆ.

ಸಾಮಾಜಿಕ ನ್ಯಾಯಕ್ಕೆ ಬಂದಿರುವ ಈ ಬೆದರಿಕೆ ವಿರುದ್ಧ ಐಕ್ಯ ಹೋರಾಟ: ಡಿಎಸ್‌ಎಂಎಂ ಕರೆ

ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಬುಡಕಟ್ಟುಗಳ ವಿರುದ್ಧ ದೌರ್ಜನ್ಯ ತಡೆ ಕಾಯ್ದೆಯನ್ನು ದುರ್ಬಲಗೊಳಿಸುವ ಸುಪ್ರಿಂ ಕೋರ್ಟ್ ತೀರ್ಪಿನ ವಿರುದ್ಧ ಪ್ರತಿಭಟನೆಯಾಗಿ ಭಾರತ್ ಬಂದ್‌ನಲ್ಲಿ ದೇಶಾದ್ಯಂತ ಭಾಗವಹಿಸುತ್ತಿದ್ದ ದಲಿತರ ಮೇಲೆ ಅಮಾನುಷ ದಮನ ನಡೆಸಿರುವುದನ್ನು ದಲಿತ್‌ಶೋಷಣ್ ಮುಕ್ತಿ ಮಂಚ್(ಡಿಎಸ್‌ಎಂಎಂ) ರಾಷ್ಟ್ರೀಯ ಕಾರ್ಯಕಾರಿ ಸಮಿತಿ ಖಂಡಿಸಿದೆ.

ಇದುವರೆಗೆ ಬಂದಿರುವ ವರದಿಗಳ ಪ್ರಕಾರ ಈ ಪ್ರತಿಭಟನೆಗಳಲ್ಲಿ ಮಧ್ಯಪ್ರದೇಶದಲ್ಲಿ ಎಂಟು ಮಂದಿ, ಉತ್ತರಪ್ರದೇಶದಲ್ಲಿ ಇಬ್ಬರು ಹಾಗೂ ರಾಜಸ್ತಾನದಲ್ಲಿ ಒಬ್ಬರು, ಒಟ್ಟು 11 ಮಂದಿ ಪ್ರಾಣ ಕಳಕೊಂಡಿದ್ದಾರೆ. ಸಾಮಾಜಿಕ ನ್ಯಾಯಕ್ಕಾಗಿ ಹೋರಾಡುತ್ತಿರುವ ಜನಗಳನ್ನು ಮನುವಾದಿ ಸರಕಾರಗಳು ಕೊಲೆ, ಅಮಾನುಷ ದಾಳಿಗಳಿಗೆ ಈಡು ಮಾಡುತ್ತಿವೆ ಎಂದಿರುವ ಅದು ಈ ಪ್ರತಿಭಟನೆಗಳಲ್ಲಿ ಬಲಿಯಾದವರ ಕುಟುಂಬಗಳಿಗೆ ಹಾರ್ದಿಕ ಸಂತಾಪಗಳನ್ನು ವ್ಯಕ್ತಪಡಿಸುತ್ತ ಈ ದಮನದ ವಿರುದ್ಧ ದೇಶವ್ಯಾಪಿ ಪ್ರತಿಭಟನೆಗಳಿಗೆ ಕರೆ ನೀಡಿದೆ.

ದೇಶಾದ್ಯಂತ ಜನಗಳು ಈ ಪ್ರತಿಭಟನೆಗಳಲ್ಲಿ ಭಾಗವಹಿಸಿ ಬಂದ್ ಕರೆಯನ್ನು ಯಶಸ್ವಿಗೊಳಿಸಿದ್ದಾರೆ. ಈ ಕಾಯ್ದೆಯನ್ನು ಸಂವಿಧಾನದ ಒಂಭತ್ತನೇ ಶೆಡ್ಯೂಲಿನಲ್ಲಿ ಸೇರಿಸಬೇಕೆಂಬ ಬೇಡಿಕೆ ಈಡೇರುವ ವರೆಗೆ ಈ ಹೋರಾಟವನ್ನು ಮುಂದುವರೆಸಬೇಕು ಎಂದು ಡಿಎಸ್‌ಎಂಎಂ ಕರೆ ನೀಡಿದೆ. ಇದರಿಂದ ಈ ಕಾನೂನನ್ನು ದುರ್ಬಲಗೊಳಿಸದಂತೆ ತಡೆಯಬಹುದು.

ಕೇಂದ್ರದ ಮೋದಿ ಸರಕಾರ ವಿಳಂಬದ ನಂತರ ಕಾರ್ಯಪ್ರವೃತ್ತಗೊಂಡಿರುವುದು ಒಂದು ಸಾಂಕೇತಿಕ ಕ್ರಮವಷ್ಟೇ. ಕಾಯ್ದೆಯನ್ನು ದುರ್ಬಲಗೊಳಿಸಿರುವುದರ ಬಗ್ಗೆ ಅದು ಗಂಭೀರವಾಗಿದ್ದರೆ ತಕ್ಷಣವೇ ಪ್ರತಿಕ್ರಿಯಿಸಿ ಮರುವಿಮರ್ಶೆ ಅರ್ಜಿಯನ್ನು ಸಲ್ಲಿಸಬೇಕಾಗಿತ್ತು. ಈ ವಿಷಯದಲ್ಲಿ ಅದರ ಮೌನ ಕರ್ಕಶವಾದದ್ದು ಎಂದಿರುವ ಡಿಎಸ್‌ಎಂಎಂ ಸಾಮಾಜಿಕ ನ್ಯಾಯಕ್ಕೆ ಈ ಬೆದರಿಕೆಯನ್ನು ನಿವಾರಿಸುವ ವರೆಗೆ ಐಕ್ಯ ಹೋರಾಟ ನಡೆಸಬೇಕು ಎಂದು ಕರೆ ನೀಡಿದೆ.

ಎಐಕೆಎಸ್–ಎಐಎಡಬ್ಲ್ಯುಯು–ಸಿಐಟಿಯು ಖಂಡನೆ

ದೌರ್ಜನ್ಯ ತಡೆ ಕಾಯ್ದೆಯನ್ನು ದುರ್ಬಲಗೊಳಿಸುವುದ ವಿರುದ್ಧ ಭಾರತ್ ಬಂದ್ ಕರೆಗೆ ಪಂಜಾಬ್, ರಾಜಸ್ತಾನ, ಮಧ್ಯಪ್ರದೇಶ, ಬಿಹಾರ, ಝಾರ್ಖಂಡ್, ಒಡಿಶಾ, ಉತ್ತರಪ್ರದೇಶದ ಮುಂತಾದೆಡೆಗಳಲ್ಲಿ ದಲಿತ ಜನಸಮೂಹಗಳಿಂದ ಭಾರೀ ಸಪಂದನ ದೊರೆತಿರುಉವದನ್ನು ಗಮನಿಸಿದ ಅಖಿಲ ಭಾರತ ಕಿಸಾನ್ ಸಭಾ ಮತ್ತು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ ಪ್ರತಿಭಟನಾಕಾರರ ಮೇಲೆ ಗೋಲೀಬಾರನ್ನು ಮತ್ತು ಇತರ ದಮನಕ್ರಮಗಳನ್ನು ಬಲವಾಗಿ ಖಂಡಿಸಿವೆ.

ಸಿಐಟಿಯು ಕೂಡ ಪ್ರತಿಭಟನಾಕಾರರ ಮೇಲೆ ಗೋಳೀಬಾರು ಮತ್ತು ದಮನಗಳನ್ನು ಖಂಡಿಸುತ್ತ ಇದರ ವಿರುದ್ಧ ಐಕ್ಯ ದನಿ ಎತ್ತಬೇಕು ಎಂದು ಕಾರ್ಮಿಕ ವರ್ಗಕ್ಕೆ ಕರೆ ನೀಡಿದೆ. ಕಳೆದ ನಾಲ್ಕು ವರ್ಷಗಳಿಂದ ತನ್ನ ವಿವಿಧ ಸಂಘಟನೆಗಳಿಗೆ ಪೋಷಣೆ ನೀಡುವ ಮೂಲಕ, ಅವುಗಳ ದುಷ್ಕೃತ್ಯಗಳನ್ನು ಸಹಿಸಿಕೊಳ್ಳುವ ಮೂಲಕ ದಲಿತರ ಮೇಲೆ ಅತ್ಯಾಚಾರಗಳು ಮುಂದುವರೆಯುವಂತೆ ಅವಕಾಶ ಮಾಡಿಕೊಟ್ಟಿರುವ ಬಿಜೆಪಿ ಸರಕಾರ ಈಗ ಅದಕ್ಕೆ ದಲಿತ ಸಂಘಟನೆಗಳಿ ವಿರೋಧವನ್ನು ಹತ್ತಿಕ್ಕಲು ಪ್ರಯತ್ನಿಸಿದೆ ಎಂದಿರುವ ಅದು ದಲಿತರ ಹೋರಾಟಗಳಿಗೆ ಸೌಹಾರ್ದವನ್ನು ವ್ಯಕ್ತಪಡಿಸಿದೆ ಹಾಗೂ ಸರಕಾರ ದಲಿತ ವಿಭಾಗಗಳ ಪರವಾಗಿ ಗಟ್ಟಿಯಾಗಿ ಮಧ್ಯಪ್ರವೇಶಿಸಬೇಕು ಎಂದು ಆಗ್ರಹಿಸಿದೆ.

ಗಲಭೆಗಳನ್ನು ಸೃಷ್ಟಿಸುವಲ್ಲಿ ಕೇಂದ್ರ ಮಂತ್ರಿಗಳ ಸಕ್ರಿಯ ಪಾತ್ರ–ಸಿಪಿಐ(ಎಂ) ಕೇಂದ್ರ ಸಮಿತಿ

ಬಿಹಾರದ ಹೆಚ್ಚಿನ ಜಿಲ್ಲೆಗಳಲ್ಲಿ ಕೋಮುವಾದಿ ಗಲಭೆಗಳು ಮತ್ತು ಇತರ ಘಟನೆಗಳು ವ್ಯಾಪಕವಾಗಿ ನಡೆಯುತ್ತಿವೆ. ನಿತಿಶ್ ಕುಮಾರ್'ಮಹಾಗಟ್‌ಬಂಧನ್'ಗೆ ವಿಶ್ವಾಸದ್ರೋಹ ಮಾಡಿ ಬಿಜೆಪಿ ರಾಜ್ಯ ಸರಕಾರದೊಳಕ್ಕೆ ಬಂದಂದಿನಿಂದ ಇಂತಹ ಕೋಮುವಾದಿ ಧ್ರುವೀಕರಣಕ್ಕೆ ಅಧಿಕೃತ ಕೃಪಾಪೋಷಣೆ ಸಿಗುತ್ತಿದೆ. ಕೇಂದ್ರೀಯ ಮಂತ್ರಿಗಳು ದೇಶದೆಲ್ಲೆಡೆಗಳಲ್ಲಿ– ಬಿಹಾರ, ಬಂಗಾಲ, ಕರ್ನಾಟಕ, ಉತ್ತರಪ್ರದೇಶ ಮುಂತಾದೆಡೆಗಳಲ್ಲಿ– ಗಲಭೆಗಳನ್ನು ಸೃಷ್ಟಿಸುವಲ್ಲಿ ಸಕ್ರಿಯ ಪಾತ್ರ ವಹಿಸುತ್ತಿದ್ದಾರೆ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಹೇಳಿದೆ.

ಮಾರ್ಚ್ 28ರಿಂದ 30 ರವರೆಗೆ ಸಭೆ ಸೇರಿದ ಕೇಂದ್ರ ಸಮಿತಿ ಮೂರುದಿನಗಳ ಚರ್ಚೆಗಳ ನಂತರ ಪ್ರಕಟಿಸಿದ ಹೇಳಿಕೆಯಲ್ಲಿ ಈ ಅಭಿಪ್ರಾಯ ವ್ಯಕ್ತವಾಗಿದೆ. ಮುಂದುವರೆದು, ಬಿಜೆಪಿ ಇತ್ತೀಚಿನ ಉಪಚುನಾವಣೆಗಳಲ್ಲಿ ತೀವ್ರ ಹೊಡೆತ ತಿಂದ ನಂತರ ಧಾರ್ಮಿಕ ಅಲ್ಪಸಂಖ್ಯಾತರು ಮತ್ತು ದಲಿತರ ಮೇಲೆ ಇಂತಹ ದಾಳಿಗಳನ್ನು ನಡೆಸಿ ಕೋಮುವಾದಿ ಧ್ರುವೀಕರಣವನ್ನು ತೀಕ್ಷ್ಣಗೊಳಿಸುತ್ತಿದೆ ಎಂಬುದು ಸ್ಪಷ್ಟ ಎಂದಿದೆ.

ಪಶ್ಚಿಮ ಬಂಗಾಲದಲ್ಲಿ ಆರೆಸ್ಸೆಸ್ ನೇತೃತ್ವದ ಸಂಘಟನೆಗಳು ಮತ್ತು ಬಿಜೆಪಿ ರಾಮನವಮಿಯನ್ನು ಹಿಂಸಾತ್ಮಕ ರೀತಿಯಲ್ಲಿ ಆಚರಿಸಿದ ರೀತಿಯಿಂದಾಗಿ ಆ ರಾಜ್ಯದ ಹಲವು ಭಾಗಗಳಲ್ಲಿ ಕೋಮುವಾದಿ ಗಲಭೆಗಳು ಆರಂಭವಾಗಿವೆ. ಕಳೆದ ವರ್ಷದಿಂದ ಈ ಆಚರಣೆಯ ಒಂದು ಹೊಸ ಲಕ್ಷಣವೆಂದರೆ ಶಸ್ತ್ರಾಸ್ತ್ರಗಳ ಬಹಿರಂಗ ಪ್ರದರ್ಶನ. ಇದು ದೇಶದ ಇತರೆಡೆಗಳಲ್ಲಿ ಹಿಂದುತ್ವ ಶಕ್ತಿಗಳು ಹರಿಯಬಿಟ್ಟಿರುವ ಕೋಮುವಾದಿ ಧ್ರುವೀಕರಣದ ದುಷ್ಟ ಪ್ರಯತ್ನಗಳ ಭಾಗ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ವಿಶ್ಲೇಷಿಸಿದೆ.

ಉತ್ತರ ಪ್ರದೇಶದಲ್ಲಿ ಬಿಜೆಪಿ ಸರಕಾರ 131 ದೊಂಬಿ ಕೇಸುಗಳನ್ನು ಹಿಂತೆಗೆದುಕೊಳ್ಳ ನಿರ್ಧರಿಸಿದೆ. ಇದು ಈ ದೊಂಬಿಗಳಿಂದ ಸಂಕಷ್ಟಕ್ಕೀಡಾದವರನ್ನು ಹೆಚ್ಚಿನ ಅಪಾಯಗಳಿಗೆ ಮತ್ತು ಅನಿಶ್ಚಿತತೆಗಳಿಗೆ ತೆರೆದು ಕೊಟ್ಟಿದೆ. ಕಾನೂನನ್ನು ಉಲ್ಲಂಘಿಸುವವರನ್ನು ಶಿಕ್ಷಿಸುವ ಬದಲು ರಾಜ್ಯ ಸರಕಾರ ಇಂತಹ ಕ್ರಿಮಿನಲ್‌ಗಳಿಗೆ ಕೋಮುವಾದಿ ಧ್ರುವೀಕರಣವನ್ನು ತೀಕ್ಷ್ಣಗೊಳಿಸಿದ್ದಕ್ಕಾಗಿ ಇನಾಮು ಕೊಡುತ್ತಿದೆ ಎಂದು ಖೇದ ವ್ಯಕ್ತಪಡಿಸಿರುವ ಸಿಪಿಐ(ಎಂ) ಕೇಂದ್ರ ಸಮಿತಿ ಬಿಜೆಪಿಯ ಇಂತಹ ಪ್ರಯತ್ನಗಳನ್ನು ಬಲವಾಗಿ ಖಂಡಿಸುತ್ತ, ಸರಕಾರಗಳು ಮತ್ತು ಸಂಬಂಧಪಟ್ಟ ಅಧಿಕಾರಿಗಳು ಕಾನೂನನ್ನು ಎತ್ತಿ ಹಿಡಿಯಬೇಕು ಮತ್ತು ತಪ್ಪಿತಸ್ಥರನ್ನು, ದ್ವೇಷ ಹರಡುತ್ತಿರುವ ಕೇಂದ್ರ ಮಂತ್ರಿಗಳನ್ನು ಶಿಕ್ಷಿಸಬೇಕು ಎಂದು ಆಗ್ರಹಿಸಿದೆ.

ತ್ರಿಪುರಾ ಹಿಂಸಾಚಾರ–ಅವಿರತವಾಗಿ ಸಾಗಿದೆ

ತ್ರಿಪುರಾದಲ್ಲಿ ಸಿಪಿಐ(ಎಂ) ಮತ್ತು ಎಡರಂಗದ ವಿರುದ್ಧ ಆರೆಸ್ಸೆಸ್–ಬಿಜೆಪಿ ಚುನಾವಣೋತ್ತರ ಹಿಂಸಾಚಾರ ನಿಲ್ಲದೆ ಮುಂದುವರೆಯುತ್ತಿದೆ. ಸುಮಾರು ಒಂದು ಸಾವಿರ ಎಡ ಕಾರ್ಯಕರ್ತರ ಮೇಲೆ ದೈಹಿಕವಾಗಿ ಗುರಿಯಿಡಲಾಗಿದೆ. 1699 ಮನೆಗಳನ್ನು ಲೂಟಿ ಮಾಡಲಾಗಿದೆ, 450ಕ್ಕೂ ಹೆಚ್ಚು ಅಂಗಡಿಗಳನ್ನು ಸುಟ್ಟು ಹಾಕಲಾಗಿದೆ, 800ಕ್ಕೂ ಹೆಚ್ಚು ಪಕ್ಷದ ಕಚೇರಿಗಳ ಮೇಲೆ ದಾಳಿ, ಲೂಟಿ ಮಾಡಲಾಗಿದೆ, ಸುಟ್ಟು ಹಾಕಲಾಗಿದೆ ಮತ್ತು 134 ಎಡ ಸಾಮೂಹಿಕ ಸಂಘಟನೆಗಳ ಕಚೇರಿಗಳನ್ನು ಬಿಜೆಪಿ ಆಕ್ರಮಿಸಿಕೊಂಡಿದೆ. ಎಡ ಕಾರ್ಯಕರ್ತರನ್ನು ಮನಬಂದಂತೆ ಬಂಧಿಸುವುದು ಮತ್ತು ಸುಳ್ಳು ಕೇಸುಗಳನ್ನು ಹೇರುವುದು ಮುಂದುವರೆದಿದೆ.

ಸಿಪಿಐ(ಎಂ) ಕೇಂದ್ರ ಸಮಿತಿ ತ್ರಿಪುರಾದ ಘಟಕದೊಂದಿಗೆ ಮತ್ತು ಈ ದಾಳಿಗಳನ್ನು ವೀರೋಚಿತವಾಗಿ ಎದುರಿಸುತ್ತಿರುವ ಸಂಗಾತಿಗಳೊಂದಿಗೆ ಸೌಹಾರ್ದವನ್ನು ವ್ಯಕ್ತಪಡಿಸಿದೆ ಮತ್ತು ಈ ರಾಜ್ಯದಲ್ಲಿ ಸಿಪಿಐ(ಎಂ) ಮತ್ತು ಎಡ ಬೆಂಬಲಿಗರ ಮೇಲೆ ಆರೆಸ್ಸೆಸ್/ಬಿಜೆಪಿ ದಾಳಿಗಳ ವಿರುದ್ಧ ದೇಶವ್ಯಾಪಿ ಸೌಹಾರ್ದಕ್ಕೆ ಕರೆ ನೀಡಿದೆ. ಸಂಬಂಧಪಟ್ಟ ಅಧಿಕಾರಿಗಳು ಎಡ ಬೆಂಬಲಿಗರಿಗೆ ಕಿರುಕುಳ ಕೊಡುವುದು, ಬೆದರಿಸುವ ಬದಲು ದೇಶದ ಕಾನೂನನ್ನು ಎತ್ತಿ ಹಿಡಿಯಬೇಕು ಎಂದು ಅದು ಕರೆ ನೀಡಿದೆ.

ರೈತಹೋರಾಟಗಳು–ಬಿಜೆಪಿಯ ವಿಶ್ವಾಸದ್ರೋಹ

ಮಹಾರಾಷ್ಟ್ರ: ಅಖಿಲ ಭಾರತ ಕಿಸಾನ್ ಸಭಾ ಸಂಘಟಿಸಿದ್ದ ಕಿಸಾನ್ ಲಾಂಗ್ ಮಾರ್ಚ್ ರಾಷ್ಟ್ರವ್ಯಾಪಿ ಪ್ರಭಾವ ಬೀರಿದೆ. ಮಹಾರಾಷ್ಟ್ರ ರಾಜ್ಯ ಸರಕಾರ ಈ ಹೋರಾಟದಲ್ಲಿ ಎತ್ತಿದ ಫಲದಾಯಕ ಬೆಲೆಗಳು, ಪೆನ್ಶನ್, ಅರಣ್ಯ ಹಕ್ಕುಗಳ ಕಾಯ್ದೆಯ ಜಾರಿ, ಸಾಲಗ್ರಸ್ತ ರೈತರಿಗೆ ಸಾಲಮನ್ನಾ ಮುಂತಾದ ಬೇಡಿಕೆಗಳ ಮೇಲೆ ಮಹಾರಾಷ್ಟ್ರ ಸರಕಾರ ಒಂದು ಲಿಖಿತ ಒಪ್ಪಂದಕ್ಕೆ ಬರುವಂತೆ ಮಾಡಲಾಯಿತು.

ಈ ಲಾಂಗ್ ಮಾರ್ಚ್ ಸುಮಾರು 25000 ರೈತರೊಂದಿಗೆ ಮಾರ್ಚ್ 6ರಂದು ಆರಂಭವಾಯಿತು. ಅದು ಮಾರ್ಚ್ 12ರಂದು ಮುಂಬೈ ತಲುಪುವ ವೇಳೆಗೆ 50,000ನ್ನೂ ಮೀರಿತ್ತು. ಈ ಹೋರಾಟದ ಒಂದು ಸಕಾರಾತ್ಮಕ ಸಂಗತಿಯೆಂದರೆ ಮಹಾರಾಷ್ಟ್ರದ ಎಲ್ಲ ಜನವಿಭಾಗಗಳಿಂದ, ಮುಂಬೈಯ ಮೇಲ್ವರ್ಗಗಳಿಂದಲೂ ಸಹಾನುಭೂತಿಪರ ಸ್ಪಂದನೆಯನ್ನು ಪಡೆಯಿತು. ಹಲವು ಸಂಘಟನೆಗಳು ತಾವೇ ಮುಂದೆ ಬಂದು ಆಹಾರ, ನೀರು, ಚಪ್ಪಲಿಗಳು ಮತ್ತು ವೈದ್ಯಕೀಯ ನೆರವು ನೀಡಿದವು. ಈ ಲಾಂಗ್ ಮಾರ್ಚ್‌ಗೆ ದೊರೆತ ವ್ಯಾಪಕ ಮಾಧ್ಯಮ ಕವರೇಜ್ ಕೂಡ ಸಹಾನುಭೂತಿಪರ ಸ್ಪಂದನೆ ಗಳಿಸುವಲ್ಲಿ ಒಂದು ಪಾತ್ರವನ್ನು ವಹಿಸಿತು.

ರಾಜಸ್ತಾನ: ರಾಜಸ್ತಾನದಲ್ಲಿ ರೈತ ಹೋರಾಟ ಬಿಜೆಪಿ ಸರಕಾರದಿಂದ ತೀವ್ರ ದಮನವನ್ನು ಎದುರಿಸಿತು. ದೊಡ್ಡ ಪ್ರಮಾಣದಲ್ಲಿ ಬಂಧನಗಳು ನಡೆದವು, ನಮ್ಮ ಮುಖಂಡರ ಮೇಲೆ ಸುಳ್ಳು ಕೇಸುಗಳನ್ನು ಹಾಕಲಾಯಿತು. ಸಪ್ಟಂಬರ್ 2017ರಲ್ಲಿ ನಡೆಸಿದ ಹೋರಾಟದಿಂದಾಗಿ ನೀಡಿದ ಭರವಸೆಯನ್ನು ಈಡೇರಿಸದೆ ರಾಜ್ಯಸರಕಾರ ವಿಶ್ವಾಸದ್ರೋಹ ಬಗೆಯಿತು. ಈ ವರ್ಷ ಫೆಬ್ರುವರಿಯಲ್ಲಿ ಕೊನೆಗೂ ಸರಕಾರ ರಾಜಸ್ತಾನದ ಶೇಖಾವತಿ ಪ್ರದೇಶವನ್ನು ಅಸ್ತವ್ಯಸ್ತಗೊಳಿಸಿದ ಮತ್ತು ಇಡೀ ರಾಜ್ಯವನ್ನು ತಟ್ಟಿದ ದೀರ್ಘ ಹೋರಾಟದ ನಂತರ ಒಪ್ಪಬೇಕಾಗಿ ಬಂತು.

ಸಿಬಿಎಸ್‌ಇ ಪ್ರಶ್ನೆಪತ್ರಿಕೆ ಸೋರಿಕೆ –ಮತ್ತೊಂದು ಹಗರಣ

ಬಿಜೆಪಿ ಆಳ್ವಿಕೆಯಲ್ಲಿ ಪರೀಕ್ಷೆಗಳಿಗೆ ಸಂಬಂಧಪಟ್ಟ ವಿವಿಧ ಹಗರಣಗಳು ಆಗಾಗ ಬಯಲಾಗುತ್ತಿವೆ. ವ್ಯಾಪಂ ಮತ್ತು ಎಸ್‌ಎಸ್‌ಸಿ ಹಗರಣಗಳ ನಂತರ ಈಗ 10ನೇ ಮತ್ತು 12ನೇ ತರಗತಿಯ ಸಿಬಿಎಸ್‌ಇ(ಕೇಂದ್ರೀಯ ಮಾಧ್ಯಮಿಕ ಪರೀಕ್ಷಾ ಮಂಡಳಿ) ಪರೀಕ್ಷೆಗಳ ಇನ್ನೊಂದು ಹಗರಣ ಬೆಳಕಿಗೆ ಬಂದಿದೆ. ಇದು ಈ ಪರೀಕ್ಷೆಗಳಿಗೆ ತಯಾರಿ ಮಾಡಿಕೊಂಡಿರುವ ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯವನ್ನು ತಟ್ಟುವ ಹಗರಣ. ಪ್ರಶ್ನೆಪತ್ರಿಕೆಗಳು ಸೋರಿವೆ ಎಂಬುದನ್ನು ಸಿಬಿಎಸ್‌ಇ ಒಪ್ಪಿಕೊಂಡಿದೆ. ಇದು ಹತ್ತನೇ ತರಗತಿಯ 16.38 ಲಕ್ಷ ವಿದ್ಯಾರ್ಥಿಗಳು ಮತ್ತು ಹನ್ನೆರಡನೇ ತರಗತಿಯ 8 ಲಕ್ಷ ವಿದ್ಯಾರ್ಥಿಗಳ ಭವಿಷ್ಯವನ್ನು ತಟ್ಟಿದೆ.

ಸಿಬಿಎಸ್‌ಇ ಸುಮಾರು ಎರಡು ವರ್ಷಗಳ ವರೆಗೂ ಮುಖ್ಯಸ್ಥರಿಲ್ಲದೆ ಇತ್ತು. ಈ ಮಹತ್ವದ ಸಂಸ್ಥೆಗೆ 2017ರಲ್ಲಷ್ಟೇ ಗುಜರಾತಿನಿಂದ ಒಬ್ಬರನ್ನು ಸಿಇಒ(ಮುಖ್ಯ ಕಾರ್ಯಕಾರಿ ಅಧಿಕಾರಿ)ರನ್ನು ನೇಮಿಸಲಾಯಿತು.

ಈ ವಿದ್ಯಾರ್ಥಿಗಳಿಗೆ ಸಂಕಟ ತರುವುದಕ್ಕೆ ಹೊಣೆಯಾದ ಎಲ್ಲರನ್ನೂ ಗುರುತಿಸಿ ಶಿಕ್ಷೆಗೆ ಗುರಿಪಡಿಸಬೇಕು ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಆಗ್ರಹಿಸಿದೆ.

ಅವಿಶ್ವಾಸ ಠರಾವು–ಬಿಜೆಪಿ ಇಬ್ಬಂದಿತನ ಬಯಲು

ಎರಡು ವಾರಗಳು ಕಳೆದರೂ ಲೋಕಸಭೆ ವೈಎಸ್‌ಆರ್ ಕಾಂಗ್ರೆಸ್ ಮತ್ತು ತೆಲುಗು ದೇಶಂ ಪಕ್ಷ ಮಂಡಿಸಿರುವ ಅವಿಶ್ವಾಸ ಠರಾವುಗಳನ್ನು ಪರಿಶೀಲಿಸದಂತೆ ತಡೆಯಲಾಗಿದೆ. ತೆಲುಗು ದೇಶಂ ಪಕ್ಷ ಆಂದ್ರಪ್ರದೇಶಕ್ಕೆ ಆಶ್ವಾಸನೆ ನೀಡಿದ ವಿಶೇಷ ಸ್ಥಾನಮಾನವನ್ನು ನೀಡಲು ಬಿಜೆಪಿ ನಿರಾಕರಿಸಿದ್ದರಿಂದ ಎನ್‌ಡಿಎ ಮೈತ್ರಿಕೂಟದಿಯದ ಹೊರಗೆ ಬಂದಿತು. ಈ ವಿಷಯದ ಮೇಲೆ ವೈಎಸ್‌ಆರ್ ಕಾಂಗ್ರೆಸ್ ಬಿಜೆಪಿಯಿಂದ ತನ್ನನ್ನು ದೂರವಿರಿಸಿಕೊಂಡಿತು. ಇತರ ಪ್ರತಿಪಕ್ಷಗಳೂ ಸ್ವತಂತ್ರವಾಗಿ ಅವಿಶ್ವಾಸ ಠರಾವುಗಳನ್ನು ಮಂಡಿಸಿವೆ. ಸಿಪಿಐ(ಎಂ) ಈ ಕುರಿತ ಚರ್ಚೆಯಲ್ಲಿ ಸರಕಾರದ ಸರ್ವತೋಮುಖ ವಿಫಲತೆ ಮತ್ತು ಸಂಸದೀಯ ಜವಾಬುದಾರಿಕೆಯಿಂದ ತಪ್ಪಿಸಿಕೊಳ್ಳುವುದನ್ನು ಎತ್ತಿ ತೋರುವುದಾಗಿ ಹೇಳಿದೆ.

ಸಂಸತ್ತಿನ ಕಲಾಪಗಳನ್ನು ನಡೆಸುವಲ್ಲಿ ಬಿಜೆಪಿಯ

ಪುಟ 7 ಕ್ಕೆ

ಸಿಪಿಐ(ಎಂ)ನ 22ನೇ ಮಹಾಧಿವೇಶನ

ಪೊಲಿಟ್‌ಬ್ಯುರೊ ಸಲ್ಲಿಸಿದ ರಾಜಕೀಯ–ಸಂಘಟನಾತ್ಮಕ ವರದಿಯ ಕರಡನ್ನು ಕೇಂದ್ರ ಸಮಿತಿ ಚರ್ಚಿಸಿತು. ಇದನ್ನು ಹೈದರಾಬಾದಿನಲ್ಲಿ ಎಪ್ರಿಲ್ 18ರಿಂದ22 ರ ವರೆಗೆ ನಡೆಯಲಿರುವ 22ನೇ ಮಹಾಧಿವೇಶನದಲ್ಲಿ ಮಂಡಿಸಲಾಗುವುದು.

ಕೇಂದ್ರ ಸಮಿತಿ ಮಹಾಧಿವೇಶನದ ಸಿದ್ಧತೆಗಳ ಬಗ್ಗೆ ತೆಲಂಗಾಣ ರಾಜ್ಯ ಸಮಿತಿಯ ವರದಿಗಳನ್ನು ಆಲಿಸಿತು.

ಕರ್ನಾಟಕದಲ್ಲಿ ಚುನಾವಣೆ

ಕರ್ನಾಟಕದಲ್ಲಿ ವಿಧಾನಸಭೆಗೆ ಚುನಾವಣೆಗಳನ್ನು ಪ್ರಕಟಿಸಿದ್ದು, ಈ ರಾಜ್ಯದಲ್ಲಿನ ರಾಜಕೀಯ ಸನ್ನಿವೇಶವನ್ನು ಕೇಂದ್ರ ಸಮಿತಿ ಚರ್ಚಿಸಿತು. ಈ ಚುನಾವಣೆಗಳಲ್ಲಿ ಸ್ಪರ್ಧಿಸುವ ಸಿಪಿಐ(ಎಂ) ಅಭ್ಯರ್ಥಿಗಳ ಪಟ್ಟಿಗೆ ಕೇಂದ್ರ ಸಮಿತಿ ಮಂಜೂರಾತಿ ನೀಡಿತು.

ಸಂಪಾದಕೀಯ

ಬಿಜೆಪಿಯ ಧರ್ಮ–ಕಾರಣದ ಸಂಕಟ, ಮಠ – ಬೇಟೆಯಲ್ಲಿ ಕಾಂಗ್ರೆಸ್ ಪೈಪೋಟಿ

ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಧರ್ಮದ ಸ್ಥಾನಮಾನ ಕೊಡುವ ಪ್ರಶ್ನೆ ಬಿಜೆಪಿಯ 'ಚಾಣಕ್ಯ' ಅಮಿತ್ ಷಾ ಗೂ ಬಿಸಿತುಪ್ಪವಾಗಿದೆ. ಬಿಜೆಪಿ ಮತ್ತು ಕೇಂದ್ರ ಸರಕಾರಗಳಿಗೆ ಈ ಬಗ್ಗೆ ಯಾವುದೇ ನಿಲುವು ತೆಗೆದುಕೊಳ್ಳಲಾಗದೆ ಫಜೀತಿ ಉಂಟು ಮಾಡಿದೆ. ಮೊದಲು "ಚುನಾವಣೆ ಹತ್ತಿರವಿರುವಾಗ ಇಂತಹ ಸಂವೇದನಾಶೀಲ ವಿಷಯದ ಬಗ್ಗೆ ಮಾತನಾಡುವುದಿಲ್ಲ" ಮತ್ತು "ಇದು ಯೆಡಿಯೂರಪ್ಪನವರನ್ನು ಮುಖ್ಯಮಂತ್ರಿಯಾಗದಂತೆ ತಡೆಯುವ ಸಿದ್ಧರಾಮಯ್ಯ ಪಿತೂರಿಯಷ್ಟೇ" ಎಂದು ಜಾರಿಕೊಳ್ಳಲು ನೋಡಿದರು. ಆದರೆ ಪತ್ರಿಕಾಗೋಷ್ಠಿಗಳಲ್ಲೂ ಈ ಬಗ್ಗೆ ಪದೇ ಪದೇ ಪ್ರಶ್ನೆಗಳು ಬರಲಾರಂಭಿಸಿದಾಗ ಮತ್ತು ಸಾರ್ವಜನಿಕರಲ್ಲೂ ಪಕ್ಷದ ಕಾರ್ಯಕರ್ತರಲ್ಲೂ ಈ ಬಗ್ಗೆ ಸಾಕಷ್ಟು ಗೊಂದಲಗಳು ಉಂಟಾಗುವುದು ಪಕ್ಷಕ್ಕೆ ಹಾನಿಯುಂಟಾಗುವುದು ಎಂದು ಮನಗಂಡ ಷಾ ತಮ್ಮ ತಂತ್ರ ಬದಲಾಯಿಸಿದರು.

"ಚುನಾವಣೆಗಳ ನಂತರ ಕೇಂದ್ರ ಸರಕಾರ ತೀರ್ಮಾನ ಕೈಗೊಳ್ಳಲಿದೆ. ರಾಜ್ಯ ಸರಕಾರದ ಶಿಫಾರಸು ಇನ್ನೂ ಕೇಂದ್ರ ಸರಕಾರಕ್ಕೆ ತಲುಪಿಲ್ಲ" ವೆಂದು ಹೇಳಲಾರಂಭಿಸಿದರು. ಮೈಸೂರಿನಲ್ಲಿ ಮಾ. 31ರಂದು ಅವರು ಹೇಳುವ ಹೊತ್ತಿಗೆ ಇದು ಇನ್ನೊಂದು ಹಸಿಸುಳ್ಳು ಎಂಬುದರ ಬಗ್ಗೆ ಪುರಾವೆ ಸಮೇತ ಬೆಳಕಿಗೆ ಬಂತು. ಮಾರ್ಚ್ 28ರಂದು ಬಿಜೆಪಿಯ ಸಂಸದರೇ ಆದ ನಳಿನ್ ಕುಮಾರ್ ಕಟೀಲ್ ಅವರು ಲೋಕಸಭೆಯಲ್ಲಿ ಈ ಬಗ್ಗೆ ಕೇಳಿದ ಪ್ರಶ್ನೆಗೆ ಅಲ್ಪಸಂಖ್ಯಾತ ಇಲಾಖೆಯ ಮಂತ್ರಿ ಮುಕ್ತಾರ್ ಅಬ್ಬಾಸ್ ನಖ್ವಿ ಯವರು ಮಾರ್ಚ್ 28ಕ್ಕೆ ಉತ್ತರ ನೀಡಿ, ಈ ಬಗ್ಗೆ ಕರ್ನಾಟಕ ಸರ್ಕಾರದ ಶಿಫಾರಸ್ಸು ಕೇಂದ್ರಕ್ಕೆ ಮಾರ್ಚ್ 26ಕ್ಕೆ ತಲುಪಿದೆಯೆಂದು ಉತ್ತರ ನೀಡಿದ್ದಾರೆ ಎಂಬ ಪುರಾವೆ ಸಾರ್ವಜನಿಕವಾಗಿ ಲಭ್ಯವಾಗುತ್ತಿದ್ದಂತೆ, ಷಾ ಪುನಃ ತಂತ್ರ ಬದಲಾಯಿಸಿದರು.

ಮಾ. 27ರಂದು ಅವರು ಚಿತ್ರದುರ್ಗದ ಮುರುಘಾ ಮಠಕ್ಕೆ ಷಾ ಭೇಟಿ ನೀಡಿದ್ದಾಗ, ಮುರುಘಾ ಶರಣರು ಲಿಂಗಾಯತ ಧರ್ಮಕ್ಕೆ ಅಲ್ಪಸಂಖ್ಯಾತ ಮಾನ್ಯತೆ ನೀಡುವ ನಿಟ್ಟಿನಲ್ಲಿ ಕೆಲಸ ಮಾಡಬೇಕೆಂದಕ್ಕೂ ಗೋಣು ಅಲ್ಲಾಡಿಸಿದ್ದರು. ಆದರೆ ಆ ನಂತರ ಅದರ ವಿರುದ್ಧ ನಿಲುವು ತೆಗೆದುಕೊಳ್ಳಲು ಆರಂಭಿಸಿದ್ದರು. ಏ.3 ರಂದು "ರಾಷ್ಟ್ರೀಯ ವೀರಶೈವ ಮಠಾಧೀಶರ ಪರಿಷತ್" ಬಾದಾಮಿಯ ಶಿವಯೋಗ ಮಂದಿರದಲ್ಲಿ ಆಯೋಜಿಸಿದ್ದ ಸಭೆಯಲ್ಲಿ ಅಮಿತ್ ಶಾ ಮಾತನಾಡಿ "ಧರ್ಮ ವಿಭಜನೆಯಲ್ಲಿ ನಮಗೆ ನಂಬಿಕೆ ಇಲ್ಲ. ಕರ್ನಾಟಕದಲ್ಲಿ ಧರ್ಮ ವಿಭಜನೆ ಮಾಡುವುದರಲ್ಲಿ ಯಾರೂ ಸಫಲರಾಗುವುದಿಲ್ಲ. ನಾವು ಅದಕ್ಕೆ ಅವಕಾಶ ನೀಡುವುದಿಲ್ಲ' ಎಂದು ಹೇಳಿದರು. ಇದಕ್ಕೆ ಸ್ವಾಭಾವಿಕವಾಗಿಯೇ ಲಿಂಗಾಯತ ಮಠಗಳಿಂದ ಮತ್ತು ಜನತೆಯಿಂದ ತೀವ್ರ ಆಕ್ರೋಶ ವ್ಯಕ್ತವಾಗಿದೆ. ಷಾ ಕೇಂದ್ರ ಸರಕಾರದ ಅಭಿಪ್ರಾಯ ವ್ಯಕ್ತ ಪಡಿಸುತ್ತಿದ್ದಾರಾ ಅಥವಾ ಬಿಜೆಪಿ ಪಕ್ಷದ್ದಾ ಎಂದು ಸ್ಪಷ್ಟ ಪಡಿಸಲಿಲ್ಲ. ಜನರನ್ನು ಧರ್ಮದ ಆಧಾರದ ಮೇಲೆ ಒಡೆಯುವುದನ್ನೇ ತಮ್ಮ ರಾಜಕಾರಣದ ನೆಲೆಯಾಗಿಸಿಕೊಂಡ ಬಿಜೆಪಿ "ಧರ್ಮ ವಿಭಜನೆ" ಬಗ್ಗೆ ಮಾತನಾಡುವುದು ಹಾಸ್ಯಾಸ್ಪದ. ಬೇರೆ ಕಡೆ ಷಾ ಹಿಂದೂಗಳನ್ನು ಒಡೆಯಲು ಬಿಡುವುದಿಲ್ಲ ಎಂದೂ ಹೇಳಿದ್ದಾರೆ. ವರ್ಣಭೇಧ, ಜಾತಿ ಬೇಧ, ಅಸ್ಪೃಶ್ಯತೆಗಳು ಮುಖ್ಯ ಗುಣಲಕ್ಷಣಗಳಾಗಿ ಇರುವಂತಹ ಬ್ರಾಹ್ಮಣಶಾಹಿ ಆಧಾರಿತ ಹಿಂದೂ ಧರ್ಮ ಬಗ್ಗೆ ಅವರು ಹೇಳುತ್ತಿರುವುದು ಎಂಬುದು ಸ್ಪಷ್ಟ. ಅವರ ಪಕ್ಷದ ಹಿಂದುತ್ವದ 'ಹಿಂದೂ' ನಿರ್ವಚನೆಯನ್ನು ಹಲವರು ಒಪ್ಪುವುದಿಲ್ಲ ಎಂಬುದೂ ಅವರಿಗೆ ಗೊತ್ತಿರಬೇಕು.

ಆದರೆ ಕೇಂದ್ರ ಸರಕಾರ ಈ ಬಗ್ಗೆ ನಿರ್ಣಯಿಸುವಾಗ ಬಿಜೆಪಿಯ ನಿಲುವಿನ ಆಧಾರದ ಮೇಲೆ ಹೋಗಲು ಬರುವುದಿಲ್ಲ. ಅದು ಸಂವಿಧಾನ ಬದ್ಧ ಪ್ರಕ್ರಿಯೆಗಳು, ನಿಯಮಗಳು ಹಾಗೂ ಮಾನದಂಡಗಳ ಮೇಲೆ ಆಧಾರಿತವಾಗಿರಬೇಕಾಗುತ್ತದೆ. ಎಂದು ಅವರಿಗೆ ಗೊತ್ತಿರಬೇಕು. ಜೈನ ಧರ್ಮಕ್ಕೆ ಕೇಂದ್ರ ಸರಕಾರ ಮಾನ್ಯತೆ ಕೊಟ್ಟಾಗ ಅನುಸರಿಸಿದ ಮಾನದಂಡಗಳ ಪ್ರಕಾರ ಲಿಂಗಾಯತ ಸಹ ಪ್ರತ್ಯೇಕ ಧರ್ಮ ಎಂದು ಪರಿಣತ ಸಮಿತಿಯ ವರದಿಯನ್ನು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ಈ ನಡುವೆ 'ಲಿಂಗಾಯತ, ವೀರಶೈವ ಲಿಂಗಾಯತರಿಗೆ (ಬಸವತತ್ವ ಒಪ್ಪುವವರು) ಧಾರ್ಮಿಕ ಅಲ್ಪಸಂಖ್ಯಾತ ಸ್ಥಾನಮಾನ ನೀಡುವಂತೆ ರಾಜ್ಯ ಸರ್ಕಾರ ಕಳುಹಿಸಿರುವ ಶಿಫಾರಸಿನ ಬಗ್ಗೆ ನಿಮ್ಮ ನಿಲುವು ಏನೆಂಬುದನ್ನು ಸ್ಪಷ್ಟಪಡಿಸಿ' ಎಂದು ಕೇಂದ್ರ ಸರ್ಕಾರಕ್ಕೆ ಹೈಕೋರ್ಟ್ ತಾಕೀತು ಮಾಡಿದೆ. ಬಿಜೆಪಿಯನ್ನು ಇನ್ನಷ್ಟು ಧರ್ಮಸಂಕಟಕ್ಕೆ ಸಿಕ್ಕಿಸಿದೆ. ಒಂದು ಕಡೆ ರಾಜ್ಯದಲ್ಲಿ ಅದರ ಪ್ರಧಾನ ರಾಜಕೀಯ ನೆಲೆಯಾಗಿದ್ದ ಲಿಂಗಾಯತ ಸಮುದಾಯದ ಬಹುಸಂಖ್ಯಾತರ ಬೆಂಬಲ ಗಳಿಸಿರುವ ಸ್ವತಂತ್ರ ಧರ್ಮದ ಮಾನ್ಯತೆಗೆ ಒತ್ತಾಯವನ್ನು ವಿರೋಧಿಸಲೂ ಆಗದು. ಇನ್ನೊಂದು ಕಡೆ ಅದು ಕಷ್ಟ ಪಟ್ಟು ಅದರ ರಾಜಕಾರಣದ ಬೆನ್ನೆಲುಬಾದ ಬ್ರಾಹ್ಮಣಶಾಹಿ ಆಧಾರಿತ ಹಿಂದೂ ಐಕ್ಯತೆಯನ್ನು ಬಿಟ್ಟುಕೊಡಲೂ ಆಗದ ಧರ್ಮ–ಸಂಕಟದಲ್ಲಿ ಬಿಜೆಪಿ ಇದೆ.

ಬಿಜೆಪಿಯ "ಧರ್ಮಸಂಕಟ" ಮತ್ತು "ಧರ್ಮ–ಕಾರಣ"ದ ಇನ್ನೊಂದು ಮಗ್ಗುಲ ಬಗ್ಗೆ ಹೇಳಲೇಬೇಕು. ಬಿಜೆಪಿ ಲಿಂಗಾಯತ ಸ್ವತಂತ್ರ ಧರ್ಮದ ಬಗ್ಗೆ ಏನಾದರೂ ನಿಲುವು ತೆಗೆದುಕೊಳ್ಳಬಹುದು. ತನ್ನ ನಿಲುವನ್ನು ಚುನಾವಣಾ ಸಭೆಗಳಲ್ಲಿ ಹೇಳಬಹುದು. ಆದರೆ ಹಲವು ಚುನಾವಣಾ ನೀತಿ ಸಂಹಿತೆ ಜಾರಿಯಾದ ನಂತರವೂ, ಲಿಂಗಾಯತ–ವೀರಶೈವ ಮಠಗಳ ಭೇಟಿ ಮಾಡಿ ಬಿಜೆಪಿ ಪರವಾಗಿ ಲಿಂಗಾಯತರ ಮತ–ಬೇಟೆ ಮಾಡುವ ಪ್ರಕ್ರಿಯೆ ಚುನಾವಣಾ ನೀತಿ ಸಂಹಿತೆಯ ಉಲ್ಲಂಘನೆ ಆಗುವುದಿಲ್ಲವೇ? "ರಾಷ್ಟ್ರೀಯ ವೀರಶೈವ ಮಠಾಧೀಶರ ಪರಿಷತ್" ಸಭೆಯಲ್ಲಿ ಪಾಲುಗೊಂಡಿದ್ದು ಅಥವಾ ಇತರ ಹಲವು ಮಠಗಳಿಗೆ ಅಮಿತ್ ಶಾ ಭೇಟಿ ಖಾಸಗಿಯೂ ಅಲ್ಲ, ಆಧ್ಯಾತ್ಮಿಕವೂ ಅಲ್ಲ. ಈ ಬಗ್ಗೆ ಷಾ, ಬಿಜೆಪಿಯ ರಾಜ್ಯ ನಾಯಕರೂ, ಮಠದ ಸ್ವಾಮಿಗಳು ಸಾರ್ವಜನಿಕ ಹೇಳಿಕೆಗಳೇ ಸಾಕ್ಷಿ. ಕಳೆದ ಹಲವು ವಾರಗಳಿಂದ ಷಾ ಅವರ ಮತ–ಬೇಟೆಯ ಭಾಗವಾಗಿ ಮಠ–ಭೇಟಿ "ಧರ್ಮದ ಆಧಾರದ ಮೇಲೆ ಮತದಾನದ ಮೇಲೆ ಪ್ರಭಾವ ಬೀರಲು ಪ್ರಯತ್ನಿಸುವ" ಮತ್ತು "ಧಾರ್ಮಿಕ ಸಂಸ್ಥೆಗಳನ್ನು ಚುನಾವಣಾ ಪ್ರಚಾರಕ್ಕೆ ಬಳಸುವ" ಚುನಾವಣಾ ಅಪರಾಧಗಳಾಗುವುದಿಲ್ಲವೇ? ಈ ಬಗ್ಗೆ ಚುನಾವಣಾ ಕಮಿಶನ್ ಏಕೆ ಕ್ರಮ ಕೈಗೊಳ್ಳುತ್ತಿಲ್ಲ?

"ಲಿಂಗಾಯತಕ್ಕೆ ಸ್ವತಂತ್ರ ಧರ್ಮದ ಮಾನ್ಯತೆ ನೀಡಬೇಕೆನ್ನುವುದು ಆ ಸಮುದಾಯದವರ ಹಲವು ದಶಕಗಳ ಬೇಡಿಕೆಯಾಗಿತ್ತು. ಅವರ ಬೇಡಿಕೆಯನ್ನು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆಯೇ ಹೊರತು, ಧರ್ಮ ಒಡೆಯುವ ಕೆಲಸವನ್ನು ಕಾಂಗ್ರೆಸ್ ಮಾಡಿಲ್ಲ. ಲಿಂಗಾಯತ ಧರ್ಮದ ವಿಷಯವು ಬಿಜೆಪಿಗೆ ಚುನಾವಣಾ ವಿಷಯವಾಗಿದೆ ಹೊರತು, ಕಾಂಗ್ರೆಸ್ಗೆ ಅಲ್ಲ. ನಾವು ರಾಜ್ಯದಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳನ್ನು ಮುಂದಿಟ್ಟುಕೊಂಡು ಚುನಾವಣೆ ಎದುರಿಸುತ್ತಿದ್ದೇವೆ' ಎಂಬ ಎಐಸಿಸಿ ಕಾರ್ಯದರ್ಶಿ ಮಾಣಿಕ್ಕಂ ಠಾಕೂರ್ ಹೇಳಿಕೆ ಬಹುಮಟ್ಟಿಗೆ ಒಪ್ಪಬಹುದು. ಆದರೆ ಕಾಂಗ್ರೆಸ್ ಅಧ್ಯಕ್ಷ ರಾಹುಲ್ ಗಾಂಧಿಯವರು ಸಹ, ಅಮಿತ್ ಷಾ ರಂತೆ ಮಠಗಳ ಭೇಟಿ ಮಾಡಿ ಲಿಂಗಾಯತರ ಮತ–ಬೇಟೆ ಮಾಡುವ ಪ್ರಕ್ರಿಯೆಯಲ್ಲಿ ತೊಡಗಿದ್ದಾರೆ. ಮತ–ಬೇಟೆಯಲ್ಲಿ ಕಾಂಗ್ರೆಸ್ ಬಿಜೆಪಿಗೆ ಜತೆ ಪೈಪೋಟಿಗೆ ಬಿದ್ದಿದೆ. "ಲಿಂಗಾಯತಕ್ಕೆ ಸ್ವತಂತ್ರ ಧರ್ಮ ಮಾನ್ಯತೆ ಕುರಿತು ನಿರ್ಧಾರ ತೆಗೆದುಕೊಳ್ಳುವ ಧೈರ್ಯವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮಾಡಿದ್ದಾರೆ. ಕಾಂಗ್ರೆಸ್ ಪಕ್ಷವನ್ನು ಸಮಾಜ ಬೆಂಬಲಿಸಲಿದೆ. ವಿಧಾನಸಭಾ ಚುನಾವಣೆಯಲ್ಲಿ, 40 ಕ್ಷೇತ್ರಗಳಲ್ಲಿ ಲಿಂಗಾಯತರಿಗೆ ಟಿಕೆಟ್ ನೀಡಬೇಕು ಎಂದು ಹೈಕಮಾಂಡ್ಗೆ ಮನವಿ ಸಲ್ಲಿಸಲಾಗುವುದು" ಎಂದು ಕಾಂಗ್ರೆಸ್ ಸಚಿವ ವಿನಯ ಕುಲಕರ್ಣಿ ಮಂಗಳವಾರ ಹೇಳಿದ್ದಾರೆಂದು ವರದಿಯಾಗಿದೆ. ಇದೂ "ಧರ್ಮದ ಆಧಾರದ ಮೇಲೆ ಮತದಾನದ ಮೇಲೆ ಪ್ರಭಾವ ಬೀರಲು ಪ್ರಯತ್ನಿಸುವ" ಅಪರಾಧದ ಪರಿಧಿಯಲ್ಲಿ ಬರುವುದಿಲ್ಲವೇ?



ಜನ–ವಿರೋಧಿ ನವ–ಉದಾರವಾದಿ ಆರ್ಥಿಕ ನೀತಿಗಳ ಬಗ್ಗೆ ಇದ್ದ ಹಾಗೆ, ಮತ–ಬೇಟೆ ಯಲ್ಲೂ ಕಾಂಗ್ರೆಸ್–ಬಿಜೆಪಿಗಳಿಗೆ 'ಉಭಯ ಸಹಮತ' ಇದ್ದಂತೆ ಕಾಣುತ್ತದೆ. ಆದ್ದರಿಂದ ಅವರಿಬ್ಬರೂ ಪರಸ್ಪರ ಈ ಬಗ್ಗೆ ದೂರು ನೀಡುವುದಿಲ್ಲ. ಆದರೆ ಇವು ಚುನಾವಣಾ ಅಕ್ರಮಗಳೇ, ಅಪರಾಧಗಳೇ. ಈ ಬಗ್ಗೆ ಚುನಾವಣಾ ಕಮಿಶನ್ ಕ್ರಮ ಕೈಗೊಳ್ಳಬೇಕು. ●

ವಿಜ್ಞಾನ ಮತ್ತು ವೈಚಾರಿತಕೆಯ ಮೇಲಿನ ದಾಳಿ ವಿರುದ್ಧ ಏಪ್ರಿಲ್ 14 ರಂದು 'ಜಾಗತಿಕ ವಿಜ್ಞಾನ ನಡಿಗೆ'

ಅಖಿಲ ಭಾರತ ಜನವಿಜ್ಞಾನ ಜಾಲ (ಆಲ್ ಇಂಡಿಯಾ ಪೀಪಲ್ಸ್ ಸೈನ್ಸ್ ನೆಟ್ವರ್ಕ್ – ಎ.ಐ.ಪಿ.ಎಸ್.ಎನ್.) ದ ಕಾರ್ಯಕಾರಿ ಸಭೆಯು 17–18 ನೇ ಮಾರ್ಚ್, ಚೆನೈನಲ್ಲಿ ಜರುಗಿತು. ಈ ಸಭೆಯಲ್ಲಿ ಏಪ್ರಿಲ್ 14, 2018 ರಂದು ನಡೆಯಲಿರುವ "ಜಾಗತಿಕ ವಿಜ್ಞಾನ ನಡಿಗೆ"ಯಲ್ಲಿ ಭಾಗಿಯಾಗಲು ಅದು ನಿರ್ಧರಿಸಿದೆ. ಭಾರತ ಜ್ಞಾನ ವಿಜ್ಞಾನ ಸಮಿತಿಯ ಕರ್ನಾಟಕ ಘಟಕ ಈ ಜಾಲದ ಸದಸ್ಯ ಸಂಘಟನೆಯಾಗಿದ್ದು ರಾಜ್ಯದಲ್ಲಿ ಇತರ ವಿಜ್ಞಾನ ಸಂಘಟನೆಗಳೊಂದಿಗೆ ಜತೆಗೂಡಿ 'ವಿಜ್ಞಾನ ನಡಿಗೆ' ಸಂಘಟಿಸಲಿದೆ.

ಎ.ಐ.ಪಿ.ಎಸ್.ಎನ್. ಪ್ರಪಂಚದಾದ್ಯಂತ ವಿಜ್ಞಾನ ಮತ್ತು ವೈಜ್ಞಾನಿಕ ವಿಚಾರಗಳ ಮೇಲೆ ಸತತವಾಗಿ ನಡೆಯುತ್ತಿರುವ ದಾಳಿಯಲ್ಲಿ ಒಂದು ತರನಾದ ಮಾದರಿಯನ್ನು ಗಮನಿಸಿದೆ. ಅಮೇರಿಕಾದ ಅಧ್ಯಕ್ಷ ಟ್ರಂಪ್ಸ್ ಹವಾಮಾನ ವಿಜ್ಞಾನದ ಒಪ್ಪಂದವನ್ನು ನಿರಾಕರಿಸಿದ್ದು ಮತ್ತು ಅದರಿಂದ ಹಿಂದೆ ಸರಿದಿದ್ದು, ಪ್ರಸಕ್ತ ಭಾರತೀಯ ಕೇಂದ್ರ ಸರ್ಕಾರದ ಮಂತ್ರಿಯೊಬ್ಬರು ವಿಕಾಸವಾದವನ್ನು ತಿರಸ್ಕರಿಸಿದ್ದು ಮತ್ತು ಇನ್ನೂ ಅನೇಕ ಬೆಳವಣಿಗೆಗಳು ಇದಕ್ಕೆ ಜ್ವಲಂತ ಉದಾಹರಣೆಗಳಾಗಿವೆ.

ಭಾರತದಲ್ಲಿ, ವಿಜ್ಞಾನದ ಮೇಲಿನ ಅಂತಹ ದಾಳಿಗಳಲ್ಲಿ ಡಾ. ದಾಬೋಲ್ಕರ್, ಗೋವಿಂದ ಪನ್ಸಾರೆ, ಘನ ವಿದ್ವಾಂಸ ಪ್ರೊ. ಕಲ್ಬುರ್ಗಿ ಮತ್ತು ಗೌರಿ ಲಂಕೇಶ್‌ರಂಥ ವಿಚಾರವಾದಿಗಳು ಮತ್ತು ಪತ್ರಕರ್ತರ ಹತ್ಯೆಗಳು ಸೇರಿವೆ. ವೈಜ್ಞಾನಿಕ ಮನೋಭಾವ ಮತ್ತು ವಿಜ್ಞಾನದ ಮೇಲೆ ನಂಬಿಕೆ ಇರುವ ಎಲ್ಲ ಸಮಾನ ಮನಸ್ಕರು ಅಂತಹ ದಾಳಿಗಳನ್ನು ಒಟ್ಟಿಗೆ ಎದುರಿಸಬೇಕೆಂದು ಎ.ಐ.ಪಿ.ಎಸ್.ಎನ್. ಬಯಸುತ್ತದೆ. ಅದಲ್ಲದೆ ವೈಜ್ಞಾನಿಕ ಮತ್ತು ಶಿಕ್ಷಣ ಸಂಸ್ಥೆಗಳ ಮೇಲಿನ ದಾಳಿಯನ್ನು, ಅನುದಾನ ಕಡಿತಗೊಳಿಸಿರುವುದನ್ನು ವಿರೋಧಿಸುವಂತೆ ಎ.ಐ.ಪಿ.ಎಸ್.ಎನ್. ಕರೆ ನೀಡುತ್ತದೆ.

ಜಾಗತಿಕ ವಿಜ್ಞಾನ ನಡೆಯ ಎಪ್ರಿಲ್ 14, ಡಾ. ಬಿ.ಆರ್. ಅಂಬೇಡ್ಕರ್ ದಿನವೂ ಆಗಿರುತ್ತದೆ. ನಮ್ಮ ಸಮಾಜದಲ್ಲಿರುವ, ನಮೆಲ್ಲರ ಮಧ್ಯದಲ್ಲಿರುವ ಎಲ್ಲ ರೀತಿಯ ತಾರತಮ್ಯವನ್ನು ವಿಶೇಷವಾಗಿ ಜಾತಿ ಮತ್ತು ಲಿಂಗ ತಾರತಮ್ಯದ ವಿರುದ್ಧ ಹೋರಾಡುವಂತೆ ಎ.ಐ.ಪಿ.ಎಸ್.ಎನ್. ಕರೆ ನೀಡುತ್ತದೆ. ಕೇವಲ ಹುಟ್ಟು ಮತ್ತು ಜಾತಿಯ ಆಧಾರದ ಮೇಲೆ ನಮ್ಮಲ್ಲಿರುವ ಮತ್ತೊಬ್ಬ 'ರೋಹಿತ್ ವೇಮುಲಾ' ನಕ್ಷತ್ರಗಳನ್ನು ಮುಟ್ಟುವ ಕನಸಿನಿಂದ ವಂಚಿತನಾಗದಿರಲಿ.

ಜಾಗತಿಕ ವಿಜ್ಞಾನ ನಡೆಯಲ್ಲಿ ಭಾಗವಹಿಸುವ ಎಲ್ಲ ಸಮಾನ ಮನಸ್ಕ ಸಂಸ್ಥೆಗಳೊಂದಿಗೆ ಕೈಜೋಡಿಸಲು ಮತ್ತು ಅನೇಕ ನಗರಗಳಲ್ಲಿ ಜಂಟಿ ರ‍್ಯಾಲಿಗಳನ್ನು ಬೆಂಬಲಿಸಿ ಪಾಲ್ಗೊಳ್ಳಲು ತೀರ್ಮಾನಿಸಿದೆ. ವೈಜ್ಞಾನಿಕ ಸಮುದಾಯ, ಎಲ್ಲ ಪ್ರಗತಿಪರ ಚಿಂತಕರು ಮತ್ತು ಸಮಾನ ಮನಸ್ಕರು ಏಪ್ರಿಲ್ 14ರ ರ‍್ಯಾಲಿಗಳಲ್ಲಿ ಪಾಲ್ಗೊಳ್ಳುವಂತೆ ಎ.ಐ.ಪಿ.ಎಸ್.ಎನ್. ಮನವಿ ಮಾಡುತ್ತದೆ. ●

ಮೂಡಬಿದ್ರೆ ಕ್ಷೇತ್ರದ ಸಿಪಿಐ(ಎಂ) ಅಭ್ಯರ್ಥಿ ಕೆ. ಯಾದವ ಶೆಟ್ಟಿ

ವಾಸುದೇವ ಉಚ್ಚಿಲ್

ಸಿಪಿಐ(ಎಂ) ದ.ಕ. ಜಿಲ್ಲಾ ಕಾರ್ಯದರ್ಶಿಮಂಡಳಿ ಸದಸ್ಯರೂ, ಕರ್ನಾಟಕ ಪ್ರಾಂತ ರೈತ ಸಂಘದ ದ.ಕ. ಜಿಲ್ಲಾ ಸಮಿತಿ ಪ್ರಧಾನ ಕಾರ್ಯದರ್ಶಿಯಾಗಿರುವ ಕೆ. ಯಾದವಶೆಟ್ಟಿ. ಇವರು ಕಳೆದ 30 ವರ್ಷಗಳಿಂದ ದ.ಕ. ಜಿಲ್ಲೆಯಲ್ಲಿ ಯುವಜನ ಚಳುವಳಿ, ರೈತ ಚಳುವಳಿ ಹಾಗೂ ರಾಜಕೀಯ ಚಳುವಳಿಯಲ್ಲಿಯೂ ಸಾರ್ವಜನಿಕವಾಗಿ ಹೆಚ್ಚಿಗೆ ಪರಿಚಯವುಳ್ಳ ವ್ಯಕ್ತಿಯಾಗಿದ್ದಾರೆ.

ಕಾಸರಗೋಡು ತಾಲೂಕು ಮೂಲದ ಕೃಷಿಕ ಕುಟುಂಬದ ದಿ। ರಾಮಣ್ಣ ಶೆಟ್ಟಿ, ದಿ। ಕಮಲಶೆಟ್ಟಿ ದಂಪತಿಗಳು ಮಂಗಳೂರು ಹೊರವಲಯದ ಬಜಾಲು ಪಕ್ಕಲಕ್ಕಾರಿಲ್ಲ ವಾಸವಾಗಿದ್ದವರು. ದಿ: 29-4-1963 ರಲ್ಲಿ ಇವರ ಪುತ್ರರಾಗಿ ಜನಿಸಿದ ಕೆ. ಯಾದವಶೆಟ್ಟಿ ಅವರು ಬಜಾಲು ಸೈಂಟ್ ಜೋಸೆಫ್ ಹಿರಿಯ ಪ್ರಾಥಮಿಕ ಶಾಲೆಯಲ್ಲೂ ಬಳಿಕ ಗಣಪತಿ ಹೈಸ್ಕೂಲಿನಲ್ಲೂ ವಿದ್ಯಾಭ್ಯಾಸ ಮುಗಿಸಿ, ಬಳಿಕ ಆರ್ಟಿಸ್ಟ್ ಆಗಿಯೂ ವ್ಯಾಪಾರ ಮಳಿಗೆಗಳ ಸಹಾಯಕನಾಗಿಯೂ ಕೆಲಸ ಮಾಡುತ್ತಿದ್ದಾಗ, ಸ್ಥಳೀಯ ಡಿವೈಎಫ್ಐ ಚಳುವಳಿಯಲ್ಲಿ ಪಕ್ಕಲಕ್ಕ ಘಟಕದ ಕಾರ್ಯದರ್ಶಿಯಾಗುವ ಮೂಲಕ ಸಾರ್ವಜನಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡರು.

ಈಗ ಮಂಗಳೂರು ಮಹಾನಗರ ಪಾಲಿಕೆಯ ವಾರ್ಡು ಎನಿಸಿರುವ ಬಜಾಲು, ಅಂದು ಬಜಾಲು ಮಂಡಲ ಪಂಚಾಯತು ಮತ್ತು ಆ ಬಳಿಕ ಗ್ರಾಮ ಪಂಚಾಯತು ಆಗಿದ್ದಿತು. ಸ್ವಗ್ರಾಮದ ಚಟುವಟಿಕೆಗಳ ಮೂಲಕ ಜನಪ್ರಿಯತೆ ಗಳಿಸಿದ ಯಾದವ ಶೆಟ್ಟರು ತಮ್ಮ 21ನೇ ವರ್ಷ ಪ್ರಾಯದಲ್ಲಿ ಸಿಪಿಐ(ಎಂ) ಪಕ್ಷದಿಂದ ಬಜಾಲು ಮಂಡಲ ಪಂಚಾಯತು ಸದಸ್ಯರಾದರು. ಮಂಡಲವು ಬಜಾಲು ಗ್ರಾಮ ಪಂಚಾಯತು ಎಂದು ಬದಲಾವಣೆಯಾದಾಗ ಗ್ರಾಮ ಪಂಚಾಯತು ಸದಸ್ಯರೂ ಆದರು. 1989-90 ರ ಸಂಪೂರ್ಣ ಸಾಕ್ಷರತಾ ಆಂದೋಲನದ ವೇಳೆ ಸಾಕ್ಷರತಾ ಕಾರ್ಯಕ್ರಮಕ್ಕೆ ಗ್ರಾಮದಲ್ಲಿ ನೇತೃತ್ವ ಕೊಟ್ಟು ಬಜಾಲು ಗ್ರಾಮವನ್ನು ಸಾಕ್ಷರತಾ ಗ್ರಾಮವನ್ನಾಗಿ ಮಾಡುವಲ್ಲಿ ಯಾದವ ಶೆಟ್ಟರ ಪಾತ್ರ ಪ್ರಮುಖ. ಅಯೋಧ್ಯ ರಥಯಾತ್ರೆ ಹಿನ್ನೆಲೆಯಲ್ಲಿ ಡಿವೈಎಫ್ಐ, ಸಿಪಿಐ(ಎಂ), ಎಡಪಕ್ಷಗಳು, ದಲಿತ ಸಂಘಟನೆಗಳು 1990 ಡಿಸೆಂಬರ್ ದಲ್ಲಿ ಏರ್ಪಡಿಸಿದ ಮಾನವ ಸರಪಳಿ ಕಾರ್ಯಕ್ರಮದಲ್ಲೂ ಸಕ್ರಿಯ ಪಾತ್ರ ವಹಿಸಿದರು.

ಡಿವೈಎಫ್ಐ ಸಂಘಟನೆಯ ಉಳ್ಳಾಲ ವಲಯ ಕಾರ್ಯದರ್ಶಿಯಾಗಿ, ಬಳಿಕ ಮಂಗಳೂರು ವಲಯ ಕಾರ್ಯದರ್ಶಿಯಾಗಿ, 1992 ರಿಂದ ಜಿಲ್ಲಾ ಸಮಿತಿ ಕಾರ್ಯದರ್ಶಿಯಾಗಿಯೂ ಬಳಿಕ 1998 ರ ವರೆಗೆ ಜಿಲ್ಲಾ ಅಧ್ಯಕ್ಷನಾಗಿಯೂ



ಕಾರ್ಯನಿರ್ವಹಿಸಿರುತ್ತಾರೆ. 1998 ರಿಂದ ಸಿಪಿಐ(ಎಂ) ಪಕ್ಷದ ಪೂರ್ಣಾವಧಿ ಕಾರ್ಯಕರ್ತರಾಗಿ ದುಡಿಯುತ್ತಿದ್ದಾರೆ. ಮೊದಲಲ್ಲಿ ಮಂಗಳೂರು ಪ್ರದೇಶ ಬೀಡಿ ಕೆಲಸಗಾರರ ಸಂಘದ ಕಾರ್ಯದರ್ಶಿಯಾಗಿಯೂ, ಬಳಿಕ ಕರ್ನಾಟಕ ಪ್ರಾಂತ ರೈತ ಸಂಘದ ದ.ಕ. ಜಿಲ್ಲಾ ಸಮಿತಿ ಪ್ರಧಾನ ಕಾರ್ಯದರ್ಶಿಯಾಗಿಯೂ ಕೆಲಸ ಮಾಡುತ್ತಿದ್ದಾರೆ. ಪಕ್ಷದಲ್ಲಿ ಮಂಗಳೂರು ನಗರ ಸಮಿತಿ ಸದಸ್ಯರೂ, ದ.ಕ. ಜಿಲ್ಲಾ ಸಮಿತಿ ಸದಸ್ಯರೂ ಆಗಿದ್ದ ಯಾದವ ಶೆಟ್ಟಿಯವರು ಮಂಗಳೂರಿನಿಂದ ಮೂಡಬಿದರೆಗೆ ಮನೆ ಬದಲಾಯಿಸಿದರು. ಬಳಿಕ 2008 ರಿಂದ ಮೂಡಬಿದಿರೆ ವಲಯ ಪಕ್ಷದ ಕಾರ್ಯದರ್ಶಿಯಾಗಿ 2017 ಅಂತ್ಯದ ವರೆಗೆ ಕಾರ್ಯನಿರ್ವಹಿಸಿದ್ದಾರೆ. ಪಕ್ಷದ ಜಿಲ್ಲಾ ಸೆಕ್ರೇಟೇರಿಯಟ್ ಸದಸ್ಯರೂ, ಕಳೆದ 5 ವರ್ಷಗಳಿಂದ ಪಕ್ಷದ ರಾಜ್ಯ ಸಮಿತಿ ಸದಸ್ಯರೂ ಆಗಿರುವ ಯಾದವ ಶೆಟ್ಟಿಯವರು ಯುವಜನ ಚಳುವಳಿ, ರೈತ ಚಳುವಳಿ ಹಾಗೂ ಪಕ್ಷದ ರಾಜಕೀಯ ಚಳುವಳಿಯನ್ನು ಕಟ್ಟುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ.

ಅವರು ನೇತೃತ್ವ ಕೊಟ್ಟ ಚಳುವಳಿಗಳಲ್ಲಿ ಕಂಕನಾಡಿ ಪೋಲಿಸ್ ಠಾಣೆಯಲ್ಲಿ ಡಿವೈಎಫ್ಐ ಕಾರ್ಯಕರ್ತನೊಬ್ಬನ ಮೇಲೆ ದೌರ್ಜನ್ಯ ನಡೆದಾಗ ಏರ್ಪಡಿಸಿದ ಪ್ರತಿಭಟನಾ ಪ್ರದರ್ಶನವು ಮುಖ್ಯವಾಗಿದೆ. ರಾಜ್ಯ ಸರ್ಕಾರವು ಪಡಿತರ ಕಡಿತ ಮಾಡಿದುದರ ವಿರುದ್ಧ ಮಂಗಳೂರು ನಗರದಲ್ಲಿ ನಾಲ್ಕು ಕಡೆಯಿಂದ ನಗರ ಕೇಂದ್ರಕ್ಕೆ ಏಕಕಾಲಕ್ಕೆ ಏರ್ಪಡಿಸಿದ ನಾಲ್ಕು ಜಾಥಾ ಜಿಲ್ಲಾಡಳಿತ ಗಮನಿಸುವಂತಾಯಿತು. ಗ್ರಾಮ ಪಂಚಾಯತು ನೌಕರರನ್ನು ಯಾದವ ಶೆಟ್ಟರು ಸಂಘಟಿಸುತ್ತಿದ್ದು ಕಳೆದ 12 ವರ್ಷಗಳಿಂದ ದ.ಕ. ಜಿಲ್ಲಾ, ಗ್ರಾ.ಪಂ. ನೌಕರರ ಸಂಘದ ಅಧ್ಯಕ್ಷರಾಗಿದ್ದಾರೆ. ಗ್ರಾ ಪಂಚಾಯತು ನೌಕರರ ರಾಜ್ಯ ಸಂಘಟನೆಯಿಂದ ನೌಕರಿ ಖಾಯಮಾತಿಗಾಗಿ ಹಲವು ಹೋರಾಟಗಳನ್ನು ಸಂಘಟಿಸಿದ ಪರಿಣಾಮವಾಗಿ, ದ.ಕ. ಜಿಲ್ಲೆಯಲ್ಲಿ ನೂರಕ್ಕೂ ಹೆಚ್ಚು ಗ್ರಾಮ ಪಂಚಾಯತು ನೌಕರರಿಗೆ ಖಾಯಂ ಸರ್ಕಾರಿ ನೌಕರಿ ಸಿಗುವಂತಾಗಿದೆ. ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಜಿಲ್ಲೆಯ ಮನೆ ನಿವೇಶನ-ರಹಿತರಿಗೆ ನಿವೇಶನಕ್ಕಾಗಿ, ಬಗರ್‌ಹುಕುಂ ರೈತರು ಹಾಗೂ ಸರ್ಕಾರಿ ಜಮೀನಲ್ಲಿ ಮನೆ ಕಟ್ಟಿದವರ ಜಮೀನಿನ ಹಕ್ಕುಪತ್ರಕ್ಕಾಗಿ, ಅರಣ್ಯಪ್ರದೇಶದಲ್ಲಿ ಸಾಗುವಳಿ ಮಾಡಿದವರ ಭೂಮಿಯ ಹಕ್ಕು ಪತ್ರಕ್ಕಾಗಿ ಆಗ್ರಹಿಸಿ ಹಲವಾರು ಬಾರಿ ಚಳುವಳಿಗಳನ್ನು ನಡೆಸಿದ್ದಾರೆ. ಇತ್ತೀಚೆಗೆ ರಾಜ್ಯ ಸರ್ಕಾರ 94 ಸಿ, 94 ಸಿಸಿ ನಿಯಮದಡಿ ಭೂಮಿ ಒದಗಿಸಿದವರಲ್ಲಿ ಬಹಳ ಮಂದಿ ಯಾದವಶೆಟ್ಟರ ನೇತೃತ್ವದ ಭೂಮಿ ಹೋರಾಟದಲ್ಲಿ ಭಾಗವಹಿಸಿದವರಾಗಿದ್ದಾರೆ. ಕೋಮುವಾದದ ವಿರುದ್ಧ ಪಕ್ಷವು ಸಂಘಟಿಸಿದ ಹಲವು ಹೋರಾಟಗಳಲ್ಲಿ ಜನಸಂಘಟನೆಗೊಳಿಸುವಲ್ಲಿ ಯಾದವ ಶೆಟ್ಟರ ಪಾತ್ರವಿದೆ. ಐಸಿಸಿ ಬ್ಯಾಂಕ್ ನೌಕರರ ಸಂಘಟನೆಗೆ ಅವರು ಸಲಹೆಗಾರರೂ ಆಗಿದ್ದಾರೆ.

ಮಂಡಲ ಪಂಚಾಯತು, ಗ್ರಾಮ ಪಂಚಾಯತು ಸದಸ್ಯರಾಗಿ ಜನಸೇವೆ ಮಾಡಿದ ಯಾದವ ಶೆಟ್ಟರು ಒಮ್ಮೆ ಉಳ್ಳಾಲ ವಿಧಾನಸಭಾ ಕ್ಷೇತ್ರದಿಂದಲೂ, 2014 ರಲ್ಲಿ ದ.ಕ. ಲೋಕಸಭಾ ಕ್ಷೇತ್ರದಿಂದಲೂ ಸಿಪಿಐ(ಎಂ) ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿರುತ್ತಾರೆ. •



ಅಭ್ಯರ್ಥಿ ಪರಿಚಯ

ಮಂಗಳೂರು ಉತ್ತರ ಕ್ಷೇತ್ರದ ಸಿಪಿಐ(ಎಂ) ಅಭ್ಯರ್ಥಿ ಮುನೀರ್ ಕಾಟಿಪಳ್ಳ

ಡಿವೈಎಫ್ಐ ಯುವಜನ ಸಂಘಟನೆಯ ಕರ್ನಾಟಕ ರಾಜ್ಯ ಸಮಿತಿ ಅಧ್ಯಕ್ಷರಾಗಿರುವ ಮುನಿರ್ ಕಾಟಿಪಳ್ಳ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾತ್ರವಲ್ಲ ರಾಜ್ಯದಲ್ಲೂ ಗಮನಾರ್ಹ ಯುವಜನ ನಾಯಕರಾಗಿ ಗುರುತಿಸಲ್ಪಟ್ಟಿದ್ದಾರೆ.

ಹಸನಬ್ಬ ಮತ್ತು ಬೀತಾಲಮ ದಂಪತಿಗಳ ಬಡಕುಟುಂಬದಲ್ಲಿ ಹುಟ್ಟಿದ ಅಬ್ದುಲ್ ಮುನಿರ್ ಅವರ ಊರು ಮಂಗಳೂರಿನ ಬೊಕ್ಕಪಲ್ಲಿ, ಕುಳಾಲು ಎಂಬಲ್ಲಿ ವಾಸವಿದ್ದು, ಇದೀಗ ಕಳೆದ 15 ವರ್ಷಗಳಿಂದ ಕಾಟಿಪಳ್ಳದಲ್ಲಿ ವಾಸವಾಗಿದ್ದಾರೆ. ಹೀಗಾಗಿ ಮುನೀರ್ ಕಾಟಿಪಳ್ಳ ಎಂದು ಪರಿಚಯ ನೀಡುತ್ತಾ ಇವತ್ತು ರಾಜ್ಯಾದ್ಯಂತ ಅದೇ ಹೆಸರಲ್ಲಿ ಗುರುತಿಸಲ್ಪಟ್ಟಿದ್ದಾರೆ. ಬೊಕ್ಕಪಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆ, ಕುಳಾಲು ವೆಂಕಟರಮಣ ಅನುದಾನಿತ ಶಾಲೆಗಳಲ್ಲಿ ಪ್ರಾಥಮಿಕ ವಿದ್ಯಾಭ್ಯಾಸದ ಬಳಿಕ ಸುರತ್ಕಲಿನ ವಿದ್ಯಾರಣ್ಯ ಹೈಸ್ಕೂಲಿನಲ್ಲಿ ಪ್ರೌಢಶಿಕ್ಷಣ ಓದುತ್ತಿದ್ದ ಬಾಲಕನಿಗೆ, ಕುಟುಂಬದ ಹಣಕಾಸಿನ ಮುಗ್ಗಟ್ಟಿನ ಕಾರಣವಾಗಿ ಶಾಲೆ ಬಿಟ್ಟು ದುಡಿಯಬೇಕಾದ ಪ್ರಸಂಗ ಎದುರಾಯಿತು. ಕರಾವಳಿ, ಮಲೆನಾಡು ಜಿಲ್ಲೆಗಳಲ್ಲಿ ಊರುರು ಅಲೆಯುತ್ತಾ ಸಣ್ಣ ವ್ಯಾಪಾರ ಮಾಡಿದ ಯುವಕನಿಗೆ ಅತೀವವಾದ ಓದಿನ ಆಸಕ್ತಿ. ಕೈಗೆ ಸಿಕ್ಕ ಪತ್ರಿಕೆ, ಬರಹ, ಪುಸ್ತಕ ಓದಿ ಜಾಣನಾದ ಮುನೀರ್. ಸ್ವಂತ ಅಭ್ಯಾಸದಿಂದ ಲೋಕಜ್ಞಾನವನ್ನು ಸಂಪಾದಿಸಿದ ಸಾಧಕ. ಮತ್ತೆ ಊರು ಕಡೆ ಬಂದಾಗ ಕುಟುಂಬ ಕಾಟಿಪಳ್ಳದಲ್ಲಿ ನೆಲೆಸಿತ್ತು. 2002 ರಿಂದ ಮಂಗಳೂರಿನಲ್ಲಿ ಡಿವೈಎಫ್ಐ ಚಳುವಳಿಯ ಸಂಪರ್ಕ. ಈ ಹಿಂದೆ ತನ್ನ ತಿರುಗಾಟದಲ್ಲಿ ಪರಿಚಯವಾಗಿದ್ದ ಎಲ್ಲ ಸಾಮಾಜಿಕ ಸಂಘಟನೆಗಳಿಗಿಂತಲೂ ಡಿವೈಎಫ್ಐ ಒಂದೇ ಜನಪರವಾದ ಯುವಜನ ಸಂಘಟನೆಯೆಂದು, ಈ ಸಂಘಟನೆಯಲ್ಲಿ ತೊಡಗಿದ ಕೆಲವೇ ತಿಂಗಳಲ್ಲಿ, ಸಂಘಟನೆಯ ನಗರ ಸಮಿತಿ ಅಧ್ಯಕ್ಷತೆ. 2006 ರಿಂದ ದ.ಕ. ಜಿಲ್ಲಾ ಸಮಿತಿ ಅಧ್ಯಕ್ಷನಾಗಿ, 2012 ರಿಂದ ರಾಜ್ಯ ಸಮಿತಿ ಅಧ್ಯಕ್ಷನಾಗಿ ಹತ್ತು ಹಲವು ಯುವಜನ ಹೋರಾಟಗಳನ್ನು ಮುನ್ನಡೆಸಿದ ಖ್ಯಾತಿ ಮುನೀರ್ ಕಾಟಿಪಳ್ಳ ಇವರದು.

2008 ರಲ್ಲಿ ಮಂಗಳೂರು ಕಾರ್ಪೋರೇಷನ್ ನೀರಿನ ಬೆಲೆ ಏರಿಕೆ ಮಾಡಿದಾಗ ಅದರ ವಿರುದ್ಧ ಡಿವೈಎಫ್ಐ ನಡೆಸಿದ ಹೋರಾಟದ ಒಂದು ಹಂತದಲ್ಲಿ, ಪೋಲಿಸರು ಹೋರಾಟಗಾರರ ಮೇಲೆ ಲಾಠಿ ಚಾರ್ಜ್ ನಡೆಸಿ ಕ್ರಿಮಿನಲ್ ಪ್ರಕರಣ ದಾಖಲಿಸಿದರು. ಪರಿಣಾಮ ಮುನೀರ್‌ಗೆ 3 ದಿನಗಳ ಜೈಲುವಾಸ. ಅಲ್ಲಿಂದ ಇಲ್ಲಿನ ವರೆಗೆ ದ.ಕ. ಜಿಲ್ಲೆಯಲ್ಲಿ ಡಿವೈಎಫ್ಐ ನಡೆಸಿದ ಹಲವು ಹೋರಾಟಗಳಿಗೆ ಮುನೀರ್‌ರದ್ದೇ ನೇತೃತ್ವ. ಸರಕಾರಿ ಮೌಲಾ ಆಸ್ಪತ್ರೆಯನ್ನು ಖಾಸಗೀಕರಣ ಹುನ್ನಾರ ಸರ್ಕಾರದ ಮಟ್ಟದಲ್ಲಿ ನಡೆಯುತ್ತಿರುವಾಗ ಅದರ ವಿರುದ್ಧ, ನಕ್ಸಲನೆಂಬ ಸುಳ್ಳು ಆರೋಪ ಹೊರಿಸಿ ಆದಿವಾಸಿ ಕುಟುಂಬದ ಸ್ನಾತಕೋತ್ತರ ವಿದ್ಯಾರ್ಥಿ ವಿಠಲ ಮಲೆಕುಡಿಯನನ್ನು ಬಂಧಿಸಿದರ ವಿರುದ್ಧ, ಪಂಜಿಮೊಗರಿನಲ್ಲಿ ಇನ್ನೂ ನಿಗೂಢವಾಗಿಯೇ ಇರುವ ತಾಯಿ-ಮಗಳ ಜೋಡಿ ಕೊಲೆ ಪತ್ತೆಗಾಗಿ ಆಗ್ರಹಿಸಿ, ಫಲ್ಗುಣಿ ನದಿ ನೀರನ್ನು ಉದ್ದಿಮೆಗಳು ಮಾಲಿನ್ಯಗೊಳಿಸುವುದರ ವಿರುದ್ಧ 5 ವರ್ಷಗಳ ಹಿಂದೊಮ್ಮೆ ಮತ್ತು ತಿರುಗಿ 2017 ರ ಕೊನೆಯಲ್ಲಿ ಡಿವೈಎಫ್ಐ ಆಯಾ ಪ್ರದೇಶದ ನಾಗರೀಕರನ್ನು ಜೊತೆಗೂಡಿಸಿ ನಡೆಸಿದ ಹೋರಾಟಕ್ಕೆ ಮುನೀರರಲ್ಲೇ ಮುಖಂಡತ್ವ.



ರಾಜ್ಯಾದ್ಯಂತ ಗಮನ ಹರಿಸಿದ ಧರ್ಮಸ್ಥಳದ ವಿದ್ಯಾರ್ಥಿನಿ ಸೌಜನ್ಯ ಕೊಲೆ ಪ್ರಕರಣದ ವಿರುದ್ಧ ಜಿಲ್ಲೆಯ ಪ್ರಜ್ಞಾವಂತ ನಾಗರಿಕರನ್ನು ಒಗ್ಗೂಡಿಸಿ ನಡೆಸಿದ ಹೋರಾಟ ಮೂರು ಪಾದಯಾತ್ರೆಗಳನ್ನೂ ಒಳಗೊಂಡಿತ್ತು. ಒಂದು ಪಾದಯಾತ್ರೆಯಲ್ಲಿ ಸಿಪಿಐ(ಎಂ) ಪಕ್ಷ ಕಾರ್ಯಕರ್ತರೂ ಹೆಜ್ಜೆ ಹಾಕಿದ್ದರು. ಬೆಂಜನಪದವು ಎಂಬಲ್ಲಿ ಅಮಾಯಕ ರಾಜೇಶ್ ಪೂಜಾರಿ ಕೊಲೆಯಲ್ಲಿ ಕೋಮುವಾದಿಗಳ ಪಾತ್ರದ ವಿರುದ್ಧ ಡಿವೈಎಫ್ಐ ಜನಜಾಗೃತಿ ಚಳುವಳಿ ನಡೆಸಿತು. 2014 ರಿಂದ ಇಂದಿನ ವರೆಗೂ ಎಂ.ಆರ್.ಪಿ.ಎಲ್ ಬೃಹತ್ ಉದ್ಯಮವು ಸಮೀಪದ ಚೋಕಟ್ಟೆ ಗ್ರಾಮದ ಮೇಲೆ ವಿಸರ್ಜಿಸುತ್ತಿರುವ ವಿವಿಧ ಬಗೆಯ ಮಾಲಿನ್ಯಗಳ ವಿರುದ್ಧ ಗ್ರಾಮಸ್ಥರ ಹಿತರಕ್ಷಣ ಕೋರಿಕೆಯನ್ನು ಮುಂದಿಟ್ಟು ಡಿವೈಎಫ್ಐ ಬಿಡದೆ ನಡೆಸುತ್ತಿರುವ ಹೋರಾಟಗಳಲ್ಲಿ ಮುನೀರ್ ಕಾಟಿಪಳ್ಳ ಅವರ ಪಾತ್ರ ಪ್ರಮುಖವಾಗಿದೆ.

ಸಾಂಸ್ಕೃತಿಕ ಚಟುವಟಿಕೆಗಳಲ್ಲಿಯೂ ಆಸಕ್ತಿಯಿರುವ ಮುನೀರ್ ಕಳೆದ 4-5 ವರ್ಷಗಳಿಂದ, ಮೊದಲಿಗೆ ದ.ಕ.ಜಿಲ್ಲೆಯಲ್ಲಿ ಸಾಂಸ್ಕೃತಿಕ ಯಜಮಾನಿಕೆ ಸ್ಥಾಪಿಸಿದ್ದ ಆಳ್ವಾಸ್ ನುಡಿಸಿರಿಗೆ ಪರ್ಯಾಯವಾಗಿ ಆ ಮೇಲೆ ಸ್ವತಂತ್ರವಾಗಿ ಸಂಘಟಿಸಿದ, ಜನನುಡಿ ವಾರ್ಷಿಕ ಉತ್ಸವಗಳು ರಾಜ್ಯದ ಕೋಮುವಾದಿ-ವಿರೋಧಿ ಸಾಹಿತಿ-ಕಲಾವಿದರ ಐಕ್ಯ ವೇದಿಕೆಯಾಗಿ ಹೊಮ್ಮಿದೆ. ಅವರ ನಾಯಕತ್ವದಲ್ಲಿ ಡಿವೈಎಫ್.ಐ. ಸಂಘಟಿಸಿದ ಮುಸ್ಲಿಂ ಯುವ ಸಮಾವೇಶ ಸಹ ಒಂದು ವಿಶಿಷ್ಟ ಪ್ರಯತ್ನವಾಗಿತ್ತು. ಸಾಮಾಜಿಕ ಮಾಧ್ಯಮಗಳಲ್ಲಿ ಸಕ್ರಿಯವಾಗಿರುವ ಮುನೀರ್ ಅವುಗಳನ್ನು ಜನಶಿಕ್ಷಣಕ್ಕೆ ಜನಪರ ಸಂವಾದಗಳಿಗೆ ಪ್ರಗತಿಪರ ಸಂಘಟನೆಗಳಿಗೆ ಹೇಗೆ ಬಳಸಬಹುದು ಎಂದು ಪ್ರಾಯೋಗಿಕವಾಗಿ ತೋರಿಸಿಕೊಟ್ಟಿದ್ದಾರೆ. ಯುವಜನರಲ್ಲಿ ಓದುವ ಸಂಸ್ಕೃತಿಯನ್ನು ಪುನಃ ಸ್ಥಾಪಿಸಲು "ಚಿರಸ್ಮರಣೆ ಓದೋಣ, ಕಯ್ಯೂರಿಗೆ ಹೋಗೋಣ"ದಂತಹ ಸೃಜನಶೀಲ ಸಫಲ ಪ್ರಯತ್ನಗಳ ಮೂಲಕ ಅದಕ್ಕೊಂದು ಮಾದರಿ ಹಾಕಿಕೊಟ್ಟದ್ದೂ ಮುನೀರ್ ಹೆಗ್ಗಳಿಕೆ.

ಡಿವೈಎಫ್ಐ ನ ಒಬ್ಬ ಹೋರಾಟಗಾರ ನಾಯಕನೆಂದು ರಾಜ್ಯದಲ್ಲೇ ಗುರುತಿಸಲ್ಪಟ್ಟಿರುವ ಮುನೀರ್ ಕಾಟಿಪಳ್ಳ ಅವರನ್ನು ಸಿಪಿಐ(ಎಂ) ಪಕ್ಷವು ತನ್ನ ಅಭ್ಯರ್ಥಿಯಾಗಿ ಮಂಗಳೂರು ಉತ್ತರ ವಿಧಾನಸಭಾ ಕ್ಷೇತ್ರದಿಂದ ಚುನಾವಣೆಗೆ ನಿಲ್ಲಿಸುತ್ತಿದೆ.

ಮಂಗಳೂರು ದಕ್ಷಿಣ ಕ್ಷೇತ್ರದ ಸಿಪಿಐ(ಎಂ) ಅಭ್ಯರ್ಥಿ ಸುನಿಲ್ ಕುಮಾರ್ ಬಜಾಲ್



ಮಂಗಳೂರು ನಗರ ದಕ್ಷಿಣ ಅಸೆಂಬ್ಲಿ ಕ್ಷೇತ್ರ ಈಗಿನ ಅವಧಿಯಲ್ಲಿ (2013–2018) ಕಾಂಗ್ರೆಸ್ ಪಕ್ಷದಿಂದ ವಿಧಾನಸಭಾ ಸದಸ್ಯತ್ವ ಹೊಂದಿದೆ. ಅದರ ಹಿಂದಿನ ಅವಧಿಯಲ್ಲಿ 2 ಬಾರಿ ಬಿಜೆಪಿ ಪಕ್ಷದಿಂದ ಒಬ್ಬರು ಶಾಸಕರಾಗಿದ್ದರು. ಆಧುನಿಕ ನಗರವಾಗಿ ಬೆಳೆಯಬೇಕಾಗಿದ್ದ ಮಂಗಳೂರು ಎರ್ರಾಬಿರ್ರಿಯಾಗಿ ಅಭಿವೃದ್ಧಿಯಾಗಿರುವುದನ್ನು ನಾವು ಗಮನಿಸುತ್ತೇವೆ. ಸಿಪಿಐ(ಎಂ) ಪಕ್ಷವು ಕಳೆದ ಹತ್ತು ವರ್ಷಗಳಿಂದ ಮಂಗಳೂರು ನಗರದ ಸಮಸ್ಯೆಗಳನ್ನು ಎತ್ತಿಕೊಂಡು ಹತ್ತು ಹಲವು ಹೋರಾಟಗಳನ್ನು ನಡೆಸಿದೆ. ಈ ಎಲ್ಲ ಹೋರಾಟಗಳಲ್ಲಿ ಅತ್ಯಂತ ಕ್ರಿಯಾಶೀಲ ವ್ಯಕ್ತಿಯಾಗಿ ನೇತೃತ್ವ ನೀಡಿದವರು ಸುನಿಲ್ ಕುಮಾರ್ ಬಜಾಲ್ ಅವರು.

ಸಿಪಿಐ(ಎಂ) ಮಂಗಳೂರು ನಗರ ದಕ್ಷಿಣ ಸಮಿತಿ ಕಾರ್ಯದರ್ಶಿಯಾಗಿರುವ ಸುನಿಲ್ ಕುಮಾರ್ ಬಜಾಲ್ 40 ವರ್ಷದ ತರುಣನಾಗಿದ್ದು, ಈಗಾಗಲೇ ಸಿಪಿಐ(ಎಂ) ಪಕ್ಷದ ಹಲವಾರು ಚಟುವಟಿಕೆಗಳಲ್ಲಿ ಮಂಗಳೂರು ನಗರ ಹಾಗೂ ದ.ಕ.ಜಿಲ್ಲೆಯಲ್ಲಿ ಸಕ್ರಿಯವಾಗಿ ತೊಡಗಿಕೊಂಡು, ಸಾರ್ವಜನಿಕರ ಗಮನ ಸೆಳೆದಿರುವ ಸಾಮಾಜಿಕ ಕಾರ್ಯಕರ್ತರಾಗಿದ್ದಾರೆ.

ಮಂಗಳೂರು ನಗರದ ಬಜಾಲು ಪ್ರದೇಶದ ಕುಂಟಲಗುಡ್ಡೆಯ ಶ್ರಮಿಕ ಕುಟುಂಬದ ಶ್ರೀಧರ (ಕಾ|ಶ್ರೀಧರ ಕುಂಟಲಗುಡ್ಡೆಯವರು ಕಳೆದ ವಾರ ನಿಧನರಾಗಿದ್ದಾರೆ.) ಹಾಗೂ ಇಂದಿರಾ ದಂಪತಿಗಳ ಪುತ್ರನಾದ ಸುನಿಲ್ ಕುಮಾರ್, ಸುತ್ತಮುತ್ತಲಿನ ಶ್ರಮಿಕ ಜನರ ಒಡನಾಡಿಯಾಗಿ ಬೆಳೆದು ಬಂದವರು. ಅವರಿರುವ ಪ್ರದೇಶದಲ್ಲಿ ಕಾರ್ಮಿಕ ಸಂಘಟನೆಗಳ ಹಾಗೂ ಕಮ್ಯೂನಿಸ್ಟ್ ಪಕ್ಷದ ಪ್ರಭಾವ ಬಹಳ ಕಾಲದಿಂದಲೇ ಇತ್ತು. ಪ್ರಾಥಮಿಕ ವಿದ್ಯಾಭ್ಯಾಸವನ್ನು ಬಜಾಲು ಸಂತ ಜೋಸೆಫರ ಪ್ರಾಥಮಿಕ ಶಾಲೆಯಲ್ಲಿ, ಪ್ರೌಢಶಾಲಾ ಶಿಕ್ಷಣವನ್ನು ಗೋರಿಗುಡ್ಡೆಯ ಕಿಟೆಲ್ ಸ್ಮಾರಕ ಹೈಸ್ಕೂಲ್‌ನಲ್ಲಿ ಪಡೆದ ಬಳಿಕ, ಪಿಯುಸಿ ವಿದ್ಯಾಭ್ಯಾಸವನ್ನು ಪಡೆಯುತ್ತಿರುವಾಗಲೇ ಸುನಿಲ್ ಕುಮಾರ್ ಎಸ್‌ಎಫ್‌ಐ ವಿದ್ಯಾರ್ಥಿ ಸಂಘಟನೆಯ ಕಾರ್ಯಕರ್ತರಾಗಿ ತೊಡಗಿಕೊಂಡರು. ಮಂಗಳೂರಿನ ಸೈಂಟ್ ಅಲೋಶಿಯಸ್ ಸಂಧ್ಯಾ ಕಾಲೇಜಿನಲ್ಲಿ ಬಿಕಾಂ ಪದವಿಯನ್ನು ಮುಗಿಸುವ ವೇಳೆಗೆ ದ.ಕ.ಜಿಲ್ಲೆಯ ಎಸ್‌ಎಫ್‌ಐನ ಪ್ರಮುಖ ವಿದ್ಯಾರ್ಥಿ ನಾಯಕರಾಗಿ ವಿದ್ಯಾರ್ಥಿ ಚಳುವಳಿಯನ್ನು ಕಟ್ಟುತ್ತಾ ಮುನ್ನಡೆದರು.

ವಿದ್ಯಾಭ್ಯಾಸದ ಬಳಿಕ ವಿದ್ಯಾರ್ಥಿ ಚಳುವಳಿಯಿಂದ ಯುವಜನ ಚಳುವಳಿಗೆ ಡಿವೈಎಫ್‌ಐ ಮೂಲಕ ಮುನ್ನಡೆದ ಸುನಿಲ್ ಕುಮಾರ್ ಬಜಾಲ್ ಡಿವೈಎಫ್‌ಐನ ದ.ಕ.ಜಿಲ್ಲಾ ಮುಖಂಡರಾಗಿ, ಬಳಿಕ ಡಿವೈಎಫ್‌ಐ ರಾಜ್ಯಾಧ್ಯಕ್ಷರಾಗಿಯೂ ಹಲವು ಯುವಜನ ಹೋರಾಟಗಳನ್ನು ಮುನ್ನಡೆಸಿದರು. ಬಳಿಕ ತಾನು ಎಲ್ಲೋ ನೌಕರಿ ಮಾಡುವುದಕ್ಕಿಂತ ದುಡಿಯುವ ವರ್ಗಕ್ಕಾಗಿ ಶ್ರಮಿಸುವುದು ಪ್ರಧಾನವೆಂದು ಮನಗಂಡು ಮಂಗಳೂರಿನಲ್ಲಿ ಸಿಪಿಐ(ಎಂ) ಪಕ್ಷದ ಪೂರ್ಣಾವಧಿ ಕಾರ್ಯಕರ್ತರಾಗಿ ದುಡಿಯುತ್ತಿದ್ದಾರೆ. 2007ರಿಂದ ಸಿಪಿಐ(ಎಂ) ಮಂಗಳೂರು ನಗರ ಸಮಿತಿಯ ಕಾರ್ಯದರ್ಶಿಯಾಗಿ ಮಂಗಳೂರು ನಗರದಲ್ಲಿ ಹಲವಾರು ರಾಜಕೀಯ ಚಳುವಳಿಯನ್ನು ಮುನ್ನಡೆಸಿದ್ದಾರೆ.

ಮಂಗಳೂರು ನಗರದಲ್ಲಿ ಬೀದಿ ಬದಿ ವ್ಯಾಪಾರಿಗಳನ್ನು ಪ್ರಥಮ ಬಾರಿ ಸಂಘಟಿಸಿ, ಕಾರ್ಪೊರೇಷನ್ ಆಡಳಿತದ ದಬ್ಬಾಳಿಕೆಯನ್ನು ಅವರು ಎದುರಿಸಿ ನಿಲ್ಲುವಂತೆ ಮಾಡಿದ್ದಾರೆ. ಹಮಾಲಿ ಕಾರ್ಮಿಕ ಸಂಘಟನೆಯನ್ನು ಬಲಪಡಿಸಿ, ಅವರ ಹಲವು ಬೇಡಿಕೆ ಈಡೇರುವಂತೆ ಮಾಡಿದ್ದಾರೆ. ವಿಶೇಷವಾಗಿ ಮಂಗಳೂರು ನಗರದಲ್ಲಿ ನಿವೇಶನ ರಹಿತ ಬಡವರು ಒಗ್ಗೂಡಿ ನಿವೇಶನ ಕೋರಿ ಹೋರಾಟ ಕಟ್ಟುವಲ್ಲಿ ಸುನಿಲ್ ಕುಮಾರ್ ಪಾತ್ರ ಪ್ರಮುಖವಾದುದು, ಪರಿಣಾಮವಾಗಿ ಅವರಿಗೆ ಮನೆ ನಿವೇಶನ ಒದಗಿಸಲೇ ಬೇಕಾದ ಒತ್ತಡಕ್ಕೆ ಕಾರ್ಪರೇಷನ್ ಒಳಗಾಯಿತು ಮಾತ್ರವಲ್ಲ, ಈಗಾಗಲೇ ಜಿ+3 ಮಾದರಿ ವಸತಿ ಸಂಕೀರ್ಣದಲ್ಲಿ ಬಡವರಿಗೆ ಆಗಲಿರುವ ಮನೆ ನಿರ್ಮಾಣಕ್ಕೆ ಈ ಹೋರಾಟವೇ ಕಾರಣ ಎಂಬುದನ್ನು ನಿವೇಶನ ರಹಿತರು ಮಾನ್ಯ ಮಾಡುತ್ತಾರೆ.

ಕಟ್ಟಡ ಕಾರ್ಮಿಕರಿಗೆ ಸರಕಾರದಿಂದ ಸಿಗುವ ಸವಲತ್ತುಗಳನ್ನು ತೆಗೆಸಿಕೊಡುವಲ್ಲಿ ಹಾಗೂ ಮರಳು ಅಭಾವ ಮೊದಲಾದ ಸಮಸ್ಯೆಗಳ ವಿರುದ್ಧ ಹೋರಾಟಗಳಿಗೆ ನೇತೃತ್ವ ನೀಡಿದ್ದಾರೆ. ಪ್ರಸ್ತುತ ಸಿಐಟಿಯು ದ.ಕ. ಜಿಲ್ಲಾ ಸಮಿತಿ ಕಾರ್ಯದರ್ಶಿಯಾಗಿದ್ದು, ಹಲವು ಕಾರ್ಮಿಕ ಸಂಘಟನೆಗಳಿಗೆ ಮಾರ್ಗದರ್ಶನ ನೀಡುತ್ತಿದ್ದಾರೆ. ಸಿಪಿಐ(ಎಂ) ಪಕ್ಷದ ಮಂಗಳೂರು ನಗರ ಕಾರ್ಯದರ್ಶಿಯಾಗಿ ದಲಿತ ಹಕ್ಕುಗಳ ಸಮಿತಿ ಹಾಗೂ ಆದಿವಾಸಿ ಹಕ್ಕುಗಳ ಸಮಿತಿ ರೂಪಿಸಿ ಹೋರಾಟಗಳನ್ನು ಕಟ್ಟುವಲ್ಲಿ ಮಾರ್ಗದರ್ಶನ ನೀಡುತ್ತಿದ್ದಾರೆ. ಹೆದ್ದಾರಿ ವಿಸ್ತರಣೆಯಿಂದ ಮನೆ ಕಳೆದುಕೊಂಡ 8 ಕೊರಗ ಕುಟುಂಬಗಳಿಗೆ ಮನೆ ನಿವೇಶನವನ್ನು ಮಂಜೂರು ಮಾಡಿಸಿಕೊಂಡು ಇವತ್ತು ಐ.ಟಿ.ಡಿ.ಪಿ ಇಲಾಖೆ ಅನುದಾನ ಹಾಗೂ ಸಾರ್ವಜನಿಕ ದೇಣಿಗೆಯನ್ನು ಸಂಗ್ರಹಿಸಿ ತಲಾ ರೂ.4.50 ಲಕ್ಷ ಮೌಲ್ಯದ ಮನೆ ಕಟ್ಟಿಸಿಕೊಡುವಲ್ಲಿ ಸುನಿಲ್ ಕುಮಾರ್ ರವರ ಹೋರಾಟ ಗುಣ ಹಾಗೂ ಕ್ರಿಯಾಶೀಲತೆ ವ್ಯಕ್ತವಾಗುತ್ತಿದೆ.

ಮಂಗಳೂರು ನಗರದ ಸಮಗ್ರ ಅಭಿವೃದ್ಧಿಗಾಗಿ ಸಿಪಿಐ(ಎಂ) ಪಕ್ಷದ ನೇತೃತ್ವದಲ್ಲಿ 2 ಬಾರಿ ನಡೆದ ಮಹಾಧರಣಿ ಹಾಗೂ 4 ದಿನಗಳ ಪಾದಯಾತ್ರೆಯನ್ನು ಅತ್ಯಂತ ಪ್ರಭಾವಿಯಾಗಿ ಸುನಿಲ್ ಕುಮಾರ್ ನಡೆಸಿಕೊಟ್ಟಿದ್ದಾರೆ. ಸಿಪಿಐ(ಎಂ) ಪಕ್ಷವು ಮಂಗಳೂರು ನಗರದಲ್ಲಿ ಹಾಕಿ ಕೊಂಡಿರುವ ಹತ್ತು ಹಲವು ಹೋರಾಟಗಳ ನೇತೃತ್ವ ಸುನಿಲ್ ಕುಮಾರ್ ಅವರದ್ದೇ ಆಗಿದೆ.

ಬಸ್ ಪ್ರಯಾಣ ದರ ಏರಿಕೆಯ ವಿರುದ್ಧ 1998ರ ಅಕ್ಟೋಬರ್ ತಿಂಗಳಲ್ಲಿ 3 ದಿನಗಳ ಕಾಲ ದ.ಕ., ಉಡುಪಿ ಜಿಲ್ಲೆ ಸಂಪೂರ್ಣ ಬಂದ್‌ಗೆ ವಿದ್ಯಾರ್ಥಿ ಚಳುವಳಿಗೆ ಸುನಿಲ್ ಕುಮಾರ್ ನೇತೃತ್ವ ನೀಡಿದ್ದರು; ಏರಿಸಿದ ದರ ಇಳಿಸುವಲ್ಲಿ ಹೋರಾಟ ಯಶಸ್ವಿಯಾಯಿತು. 1996ರಲ್ಲಿ ಮಂಗಳೂರು ನಗರ ಮಟ್ಟದಲ್ಲಿ ಸರಕಾರಿ ಪದವಿ ಪೂರ್ವ ಕಾಲೇಜು ತೆರೆಯಲು ನಡೆಸಿದ ಹೋರಾಟಗಳ ಪರಿಣಾಮವಾಗಿ ಬೊಕ್ಕಪಟ್ಣದಲ್ಲಿ ಪಿಯು ಕಾಲೇಜು ಸ್ಥಾಪನೆಯಾಯಿತು. ಎಸ್.ಎಂ.ಕೃಷ್ಣ ಸರಕಾರವು ಸಂಧ್ಯಾ ಕಾಲೇಜುಗಳನ್ನು ಮುಚ್ಚಿಸಬೇಕೆಂದು ಮಾಡಿದ ತೀರ್ಮಾನದ ವಿರುದ್ಧವಾಗಿ ದ.ಕ., ಉಡುಪಿ ಜಿಲ್ಲೆಗಳಲ್ಲಿ ನಡೆದ ಹೋರಾಟಗಳ ಪರಿಣಾಮವಾಗಿ ಸಂಧ್ಯಾ ಕಾಲೇಜುಗಳು ಇಂದಿಗೂ ಮುಂದುವರಿಯುತ್ತಿವೆ. ಯುವಜನ ಚಳುವಳಿಯಲ್ಲಿ ಸುನಿಲ್ ಕುಮಾರ್ ಅವರು ನಡೆಸಿದ ಹೋರಾಟಗಳಲ್ಲಿ ಸಾಕ್ಷರತಾ ಪ್ರೇರಕರ ಹೋರಾಟಗಳು, ಗ್ರಾಮೀಣ ಕೃಪಾಂಕ ನೌಕರರ ಹೋರಾಟಗಳು, ಬಾಬಾ ಬುಡಾನ್‌ಗಿರಿಯಲ್ಲಿ ನಡೆಸಿದ ಸೌಹಾರ್ದ ನಡಿಗೆಯೂ ಒಳಗೊಂಡಿವೆ.

2008ರಲ್ಲಿ ಮಂಗಳೂರು ನಗರ ಪಾಲಿಕೆ ನೀರಿನ ದರ ಏರಿಸಿದರ ವಿರುದ್ಧ ಡಿವೈಎಫ್‌ಐ ಹಾಕಿಕೊಂಡಿದ್ದ ಕಾರ್ಯಕ್ರಮದಲ್ಲಿ ಸಿಪಿಐ(ಎಂ) ಕಾರ್ಯಕರ್ತರನ್ನು ಒಳಗೊಳಿಸಿದ್ದ ಸುನಿಲ್ ಕುಮಾರ್ ಬಜಾಲ್, ನ್ಯಾಯಾಲಯದ ಪ್ರಕರಣಕ್ಕೆ ಈಡಾಗಬೇಕಾಯಿತು.

ಒಬ್ಬ ಸಂಘಟಕ, ಹೋರಾಟಗಾರ ಹಾಗೂ ಜನಸಂಪರ್ಕ ಇರುವ ವ್ಯಕ್ತಿಯಾಗಿ ಸುನಿಲ್ ಕುಮಾರ್ ಬಜಾಲ್ ಮಂಗಳೂರು ನಗರದಲ್ಲಿ ವಿಶೇಷವಾಗಿ ಗುರುತಿಸಲ್ಪಟ್ಟಿದ್ದಾರೆ. ಮಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದಿಂದ ಸಿಪಿಐ(ಎಂ) ಪಕ್ಷವು ಸುನಿಲ್ ಕುಮಾರ್ ಬಜಾಲ್ ಅವರನ್ನು ಚುನಾವಣೆಗೆ ಅಭ್ಯರ್ಥಿಯಾಗಿ ನಿಲ್ಲಿಸುತ್ತಿದೆ. ಮಂಗಳೂರು ನಗರದ ಸೌಹಾರ್ದ ಹಾಗೂ ಸಮಗ್ರ ಅಭಿವೃದ್ಧಿ ಕುರಿತು ಸುನಿಲ್ ಕುಮಾರ್ ಬಜಾಲ್ ಅವರು ಕಾರ್ಯಸಾಧ್ಯ ಯೋಜನೆಗಳ ಕನಸು ಕಂಡಿದ್ದಾರೆ. ●

ವಾಸುದೇವ ಉಚ್ಚಿಲ್



ಅಭ್ಯರ್ಥಿ ಪರಿಚಯ

ಮಂಗಳೂರು (ಉಳ್ಳಾಲ) ಕ್ಷೇತ್ರದ ಸಿಪಿಐ(ಎಂ) ಅಭ್ಯರ್ಥಿ ನಿತಿನ್ ಕುತ್ತಾರ್

ಇತ್ತೀಚಿನ ವರೆಗೂ ಎಸ್‌ಎಫ್‌ಐ ದ.ಕ. ಜಿಲ್ಲಾ ಸಮಿತಿಯ ಅಧ್ಯಕ್ಷರಾಗಿದ್ದು, ಸದ್ಯ ನ್ಯಾಯವಾದಿಯಾಗಿ ದುಡಿಯುತ್ತಿರುವ ನಿತಿನ್ ಕುತ್ತಾರ್ ಹತ್ತು ಹಲವು ವಿದ್ಯಾರ್ಥಿ ಚಳುವಳಿ ಹಾಗೂ ಯುವಜನ ಹೋರಾಟಗಳಲ್ಲಿ ತೊಡಗಿರುವ 25 ರ ಹರೆಯದ ಯುವಕ.

ಉಳ್ಳಾಲ ಸಮೀಪದ ಮುನ್ನೂರು ಗ್ರಾಮದ ಕುತ್ತಾರು ದೆಪ್ಪೆಲಿಮಾರು ರೈತ ಕುಟುಂಬವು ಇವತ್ತು ಇಪ್ಪತ್ತು ಮನೆಗಳಿಗೂ ಮೀರಿ ವಿಸ್ತಾರಗೊಂಡಿದೆ. ಉಳ್ಳಾಲ ಭಾಗದಲ್ಲಿ ರೈತ ಹಾಗೂ ಕಮ್ಯೂನಿಸ್ಟ್ ಚಳುವಳಿ ಪ್ರಬಲವಾಗಿದ್ದ ಕಾಲದಿಂದಲೂ ದೆಪ್ಪೆಲಿಮಾರು ಕುಟುಂಬವು ಕಮ್ಯೂನಿಸ್ಟ್ ಕುಟುಂಬವೆಂದೇ ಕರೆಯಲ್ಪಡುತ್ತಿದೆ. ಆ ಕುಟುಂಬದಲ್ಲಿ ಕೃಷಿ ಆವಲಂಬಿಸಿದ ದಾಸಪ್ಪ ಉಮಾ ದಂಪತಿಗಳ ಇಬ್ಬರು ಮಕ್ಕಳಲ್ಲಿ ಹಿರಿಯವರು ನಿತಿನ್ ಕುಮಾರ್. ಜನ್ಮ ದಿನಾಂಕ 6–8–1992. ಕುತ್ತಾರು ಸರ್ಕಾರಿ ಪ್ರಾಥಮಿಕ ಶಾಲೆ, ಮಂಗಳೂರಿನ ಅಭ್ಯಾಸಿ ಪ್ರೌಢಶಾಲೆ, ಉಳ್ಳಾಲದ ಭಾರತ ಪದವಿಪೂರ್ವ ಕಾಲೇಜುಗಳಲ್ಲಿ ಶಿಕ್ಷಣದ ಬಳಿಕ ಮಂಗಳೂರಿನ ವಿಶ್ವವಿದ್ಯಾನಿಲಯ ಕಾಲೇಜನಲ್ಲಿ ಬಿ.ಕಾಂ. ಶಿಕ್ಷಣ, ಎಸ್.ಡಿ.ಎಂ ಲಾ ಕಾಲೇಜಿನಲ್ಲಿ ಕಾನೂನು ಪದವಿ ಪೂರೈಸಿ, ಕಳೆದ ಒಂದೂವರೆ ವರ್ಷದಿಂದ



ನ್ಯಾಯವಾದಿಗಳಾಗಿ ಕೆಲಸ ಮಾಡುತ್ತಿದ್ದಾರೆ.

ಮನೆಯಲ್ಲಿದ ಎಡರಾಜಕೀಯದ ಪ್ರಭಾವದಿಂದ 8ನೇ ತರಗತಿಯಲ್ಲಿಯೇ ಎಸ್.ಎಫ್.ಐ ಸಂಘಟನೆಯಲ್ಲಿ ವಿದ್ಯಾರ್ಥಿಗಳ ಮಧ್ಯೆ ನಿತಿನ್ ಕುತ್ತಾರ್ ದುಡಿಯ ತೊಡಗಿದರು. ಪಿ.ಯು.ಸಿ. ಓದುವಾಗ ಉಳ್ಳಾಲ ವಲಯ ಎಸ್‌ಎಫ್‌ಐ ಕಾರ್ಯದರ್ಶಿಯಾದರಲ್ಲದೆ, ತನ್ನ ಕಾಲೇಜಿನಲ್ಲೂ ವಿದ್ಯಾರ್ಥಿ ಸಂಘದ ಕಾರ್ಯದರ್ಶಿಯಾದರು. ಪದವಿ ಎರಡನೇ ವರ್ಷ ಓದುತ್ತಿರುವಾಗ 2012 ರಲ್ಲಿ ಎಸ್.ಎಫ್.ಐ ದ.ಕ. ಜಿಲ್ಲಾಧ್ಯಕ್ಷನಾಗಿ ಆಯ್ಕೆಯಾದರು. 2017 ರಲ್ಲಿ ವಕೀಲ ವೃತ್ತಿಗೆ ತೊಡಗಿದ ಮೇಲೆ ಬಿಡುಗಡೆಗೊಂಡರು. ಅಲ್ಲಿಂದೀಚೆಗೆ ಯುವಜನ ಸಂಘಟನೆ ಡಿ.ವೈ.ಎಫ್.ಐ ದ.ಕ. ಜಿಲ್ಲಾ ಸಮಿತಿಯಲ್ಲಿ ಜಂಟಿ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದಾರೆ.

ಎಸ್.ಎಫ್.ಐ ಕಾರ್ಯಕರ್ತನಾಗಿದ್ದ ಅವಧಿಯಲ್ಲಿ, ಕಾಲೇಜು ವಿದ್ಯಾಭ್ಯಾಸದ ಜೊತೆಗೆ ಹಲವಾರು ವಿದ್ಯಾರ್ಥಿ ಹೋರಾಟಗಳಲ್ಲಿ ಭಾಗವಹಿಸಿದ್ದೂ ಅಲ್ಲದೆ ನೇತೃತ್ವವನ್ನು ನಿತಿನ್ ಕುತ್ತಾರ್ ನೀಡಿರುತ್ತಾರೆ. ರಾಜ್ಯ ಸರ್ಕಾರವು ಕಡಿಮೆ ಸಂಖ್ಯೆಯ ವಿದ್ಯಾರ್ಥಿಗಳಿದ್ದಾರೆಂಬ ಕಾರಣಕ್ಕೆ ರಾಜ್ಯದ 12,000 ಸರ್ಕಾರಿ ಶಾಲೆಗಳನ್ನು ಮುಚ್ಚಬೇಕೆಂಬ ಪ್ರೊ. ಗೋವಿಂದ ಸಮಿತಿಯ ಶಿಫಾರಸನ್ನು ಜಾರಿಗೊಳಿಸಲು ಮುಂದಾದಾಗ, ದ.ಕ. ಜಿಲ್ಲೆಯಲ್ಲಿ ಆ ಪಟ್ಟಿಯಲ್ಲಿ 300 ಶಾಲೆಗಳಿದ್ದವು. ಪ್ರೊ. ಗೋವಿಂದ ವರದಿಯ ವಿರುದ್ಧ ಎಸ್.ಎಫ್.ಐ ರಾಜ್ಯವ್ಯಾಪಿ ಪ್ರತಿಭಟನೆಗಳನ್ನು ಹಮ್ಮಿಕೊಂಡಾಗ. ದ.ಕ. ಜಿಲ್ಲೆಯಲ್ಲಿ ಎಸ್.ಎಫ್.ಐ ನಿಂದ ತೀವ್ರ ಹೋರಾಟ ನಡೆಸಲಾಯಿತು. ಪರಿಣಾಮ, ಸರ್ಕಾರ ಸಮಿತಿಯ ಶಿಫಾರಸನ್ನು ಜಾರಿಮಾಡಲಿಲ್ಲ.

ಬಂಟ್ವಾಳದ ಸಮಾಜ ಕಲ್ಯಾಣ ಇಲಾಖೆ ವಿದ್ಯಾರ್ಥಿ ನಿಲಯದಲ್ಲಿ ನೀರಿನ ವ್ಯವಸ್ಥೆ ಇಲ್ಲದಿರುವುದರ ವಿರುದ್ಧ, ನಾವೂರು ಸರ್ಕಾರೀ ಹೈಸ್ಕೂಲಿಗೆ ಕೊಠಡಿ ಒದಗಿಸಿಕೊಡಬೇಕೆಂದು, ಉಳ್ಳಾಲದಲ್ಲಿ ಕೋಮುಗಲಭೆಗಳಿಂದ ಅಮಾಯಕ ವಿದ್ಯಾರ್ಥಿಗಳನ್ನು ಬಂಧಿಸಿರುವುದರ ವಿರುದ್ಧ, ಅಂಬ್ಲಮೊಗರು ಪ್ರದೇಶಕ್ಕೆ ಹೈಸ್ಕೂಲು ಮಂಜೂರಾಗಬೇಕೆಂದು ಆಗ್ರಹಿಸಿ, ಕಾಲೇಜು ವಿದ್ಯಾಭ್ಯಾಸಕ್ಕಾಗಿ ಮಂಗಳೂರಿಗೆ ರೈಲು ಮೂಲಕ ಬರುವ ವಿದ್ಯಾರ್ಥಿಗಳಿಗೆ ರೈಲು ಮುಂಚಿತವಾಗಿ ತಲುಪಬೇಕೆಂದು ರೈಲ್ವೆ ಇಲಾಖೆಯನ್ನು ಆಗ್ರಹಿಸಿ, ಶಾಲೆಯ ಬಿಸಿಯೂಟ ಪೂರೈಕೆಯನ್ನು ಖಾಸಗೀಕರಿಸುವುದರ ವಿರುದ್ಧ, ಮಂಗಳೂರು ಪಂಪ್‌ವೆಲ್ ನಲ್ಲಿ ಬಿ.ಸಿ.ಎಂ ಹಾಸ್ಟೆಲಿನಲ್ಲಿ ಸ್ಥಳಾವಕಾಶ ಸಾಕಷ್ಟಿಲ್ಲದ ಬಾಡಿಗೆ ಕಟ್ಟಡವನ್ನು ತೆರವು ಮಾಡಿಸಬೇಕೆಂದು ಆಗ್ರಹಿಸಿ –

ಪುಟ 11 ಕ್ಕೆ

ಅತಿಥಿ ಅಂಕಣ



ಪ್ರೊ. ರಾಜೇಂದ್ರ ಚೆನ್ನಿ

ಪ್ರಜಾಪ್ರಭುತ್ವ ದೌರ್ಬಲ್ಯ ಮೀರಿ ಸಂಕಲ್ಪಶಕ್ತಿ ತೋರುವುದೇ?

ಸೂಕ್ಷ್ಮವಾಗಿರುವವರಿಗೆ ಜನಮಾನಸದ ಆಳದಲ್ಲಿ ಗಟ್ಟಿಗೊಳ್ಳುತ್ತಿರುವ ಭಾವನೆಗಳನ್ನು ಅರ್ಥಮಾಡಿಕೊಳ್ಳುವ ಶಕ್ತಿ ಇರಬೇಕು. ಮಹಾರಾಷ್ಟ್ರದಲ್ಲಿ ನಡೆದ ರೈತರ ಚಳುವಳಿ, ಈಗ ನಡೆದಿರುವ ದಲಿತರ ಪ್ರತಿಭಟನೆ ಇವುಗಳು ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿಯೇ ನಡೆದಿರುವಂಥವು. ಆರ್.ಎಸ್.ಎಸ್.ನ ಮೂಲದಲ್ಲಿಯೇ ಇರುವ ಆಕ್ರಾಮಕ ರಾಜಕೀಯ, ಸರ್ವಾಧಿಕಾರಿ ಮನೋಭಾವ, ಬ್ರಾಹ್ಮಣಶಾಹಿ ಇವುಗಳನ್ನು ಭಾರತೀಯ ಪ್ರಜಾಪ್ರಭುತ್ವವು ಒಪ್ಪುವ ಸಾಧ್ಯತೆಯೇ ಇಲ್ಲ. ನಮ್ಮ ಪ್ರಜಾಪ್ರಭುತ್ವವು ದುರ್ಬಲವೇ ಇರಬಹುದು. ಇತ್ತೀಚಿಗೆ ಫ್ಯಾಸಿಸ್ಟ್ ಶಕ್ತಿಗಳಿಗೆ ಅಧಿಕಾರ ಕೊಟ್ಟಿರಬಹುದು. ಆದರೆ ಈ ದೌರ್ಬಲ್ಯವನ್ನು ಮೀರಿ ಅದು ರೈತರ ಪರವಾಗಿ, ದಲಿತರ ಪರವಾಗಿ, ಸೆಕ್ಯುಲರ್‌ವಾದದ ಪರವಾಗಿ ಬಲವಾದ ಸಂಕಲ್ಪ ಶಕ್ತಿಯನ್ನು ತೋರಬಲ್ಲದು.

ಇತ್ತೀಚಿನ ವರ್ಷಗಳಲ್ಲಿ ಭಾರತದಲ್ಲಿ ಪ್ರಜಾಪ್ರಭುತ್ವವು ಉಳಿಯಲಾರದು ಎನ್ನುವ ಗಾಢವಾದ ವಿಷಾದ ಬಹಳ ಜನರಲ್ಲಿ ಇದೆ. ಸಾವಿರಾರು ವರ್ಷಗಳಿಂದ ಜೀವಂತವಾಗಿಯೇ ಉಳಿದಿರುವ ಜಾತಿವ್ಯವಸ್ಥೆ, ಅಸ್ಪೃಶ್ಯತೆ ಹಾಗೂ ಸಾಮುದಾಯಿಕ ನೈತಿಕತೆಯ ಕೊರತೆ ಇರುವ ದೇಶದಲ್ಲಿ ಪ್ರಜಾಪ್ರಭುತ್ವದ ಬುನಾದಿಗಳು ಗಟ್ಟಿಯಾಗಿರುವುದು ಸುಲಭವಲ್ಲ. ಡಾ. ಅಂಬೇಡ್ಕರ್ ಅವರು ಕೂಡ ತಮ್ಮ ಜೀವನದ ಕೊನೆಯ ವರ್ಷಗಳಲ್ಲಿ ಮಾಡಿದ ಭಾಷಣಗಳಲ್ಲಿ 'ಆರ್ಥಿಕ ಹಾಗೂ ಸಾಮಾಜಿಕ ಸಮಾನತೆ ಇಲ್ಲದೆಯೆ ಪ್ರಜಾಪ್ರಭುತ್ವವನ್ನು ಕಟ್ಟುವುದು ಸೆಗಣಿಯ ಗುಪ್ಪೆಯ ಮೇಲೆ ಅರಮನೆಯನ್ನು ಕಟ್ಟಿದಂತೆ' ಎಂದು ಎಚ್ಚರಿಸುತ್ತಲೇ ಬಂದರು. ಅಲ್ಲದೆ ಇಲ್ಲಿಯ ಸಮಾಜದಲ್ಲಿ ಪ್ರಜಾಪ್ರಭುತ್ವ ಸಂಸ್ಕೃತಿಯು ನೆಲೆಗೊಳ್ಳದಿದ್ದರೆ ಪ್ರಜಾಪ್ರಭುತ್ವವು ಕೇವಲ ಚುನಾವಣೆಗಳು, ಮತದಾನ ಇವುಗಳ ಹೊರಾಂಗಣ ಆವರಣವಾಗಿ ಬಿಟ್ಟು ತಿರುಳೇ ಇಲ್ಲದಂತಾಗಬಹುದು ಎಂದೂ ಹೇಳಿದ್ದರು. ಗಾಂಧಿ, ನೆಹರು, ಅಂಬೇಡ್ಕರ್ ಇವರು ನಮ್ಮ ವಿಷಮವಾದ ಚರಿತ್ರೆ ಹಾಗೂ ಅಮಾನವೀಯವಾದ ಸಮಾಜಗಳ ಮಧ್ಯೆಯೂ ಒಂದು ಪ್ರಜಾಪ್ರಭುತ್ವವನ್ನು ನಿರ್ಮಿಸುವ ಅಸಾಧ್ಯ ಕೆಲಸವನ್ನು ಮಾಡಿದರು.

ಆದರೆ ಮೂಲತಃ ಪ್ರಜಾಪ್ರಭುತ್ವದ ವಿರೋಧಿಯಾಗಿದ್ದ ಆರ್.ಎಸ್.ಎಸ್ ಹುಳುವಿನ ಹಾಗೆ ಒಳಗಿಂದಲೇ ಅದನ್ನು ತಿಂದು ಹಾಕಿ ನಾಶಮಾಡುವ ಪ್ರಯತ್ನವನ್ನು ಮಾಡುತ್ತಲೇ ಬಂದಿತು. ಈ ಫ್ಯಾಸಿಸ್ಟ್ ಸಂಸ್ಥೆಯು ಸಮಾನತೆ ಹಾಗೂ ಪ್ರಜಾಪ್ರಭುತ್ವವನ್ನು ಒಪ್ಪುವುದು ಸಾಧ್ಯವೇ ಇಲ್ಲ. ಏಕೆಂದರೆ ಅವುಗಳನ್ನು ಒಪ್ಪಿಕೊಂಡ ದಿನವೇ ಅದರ ಅಸ್ತಿತ್ವದ ಕೊನೆಯ ದಿನವಾಗುತ್ತದೆ. ಹೀಗಾಗಿ ಬ್ರಾಹ್ಮಣ-ಬನಿಯಾಗಳ ಕೂಟವನ್ನು ರಚಿಸಿಕೊಂಡು ಕೋಮು ದ್ವೇಷವನ್ನು ಬೆಳೆಸಿಕೊಂಡು ಬಂದಿತು. ಹಿಂದುಗಳು ಬಹುಸಂಖ್ಯಾತರು ಎಂದು ತೋರಿಸಲು ಸಂಖ್ಯೆಯ ಕಾರಣಕ್ಕಾಗಿ ಮಾತ್ರ ದಲಿತರನ್ನು ಹಿಂದೂ ಎಂದು ಕರೆಯಿತೇ ಹೊರತು ಅದರ ಬ್ರಾಹ್ಮಣಶಾಹಿ ಚಿಂತನೆಯ ಪ್ರಕಾರ ದಲಿತರು ಮನುಷ್ಯರೇ ಅಲ್ಲ. ಆದ್ದರಿಂದಾಗಿ ದಲಿತರು ದ್ವೇಷ ಮಾಡಲು ಲಾಯಕ್ಕಲ್ಲವೆನ್ನುವಂತೆ ಆರ್.ಎಸ್.ಎಸ್ ವರ್ತಿಸುತ್ತಾ ಬಂದಿತು. ಅದರ ಮುಖ್ಯ ಚಿಂತಕರಾದ ಸಾವರ್ಕರ್ ಮತ್ತು ಗೋಳವಲ್ಕರ್ ಅವರ ವಿಪುಲವಾದ ಬರಹದಲ್ಲಿ 'ದಲಿತ' ಅಥವಾ ಅದಕ್ಕೆ ಸಮಾನವಾದ ಪದವು ಎಷ್ಟು ಸಾರಿ ಬಂದಿದೆ ಎಂದು ಎಣಿಸಿನೋಡಿದರೆ ಸಾಕು, ಈ ಮನುವಾದಿ ಸಿದ್ಧಾಂತದ ಹೂರಣವು ಹೊರಗೆ ಬರುತ್ತದೆ.


ಈ ಸಿದ್ಧಾಂತಕ್ಕೆ ಸ್ವಾತಂತ್ರ್ಯಪೂರ್ವ ಕಾಲದಲ್ಲಿ ಬಿದ್ದ ಎರಡು ದೊಡ್ಡ ಹೊಡೆತಗಳೆಂದರೆ ಗಾಂಧಿ ಮತ್ತು ಅಂಬೇಡ್ಕರ್ ಅವರ ಚಿಂತನೆಗಳು. ಬಹುಕಾಲದವರೆಗೆ ತಮ್ಮನ್ನು ಸನಾತನಿ ಹಿಂದೂ ಎಂದು ವರ್ಣಿಸಿಕೊಂಡು ಜಾತಿವ್ಯವಸ್ಥೆ ಹಾಗೂ ವರ್ಣವ್ಯವಸ್ಥೆಗಳನ್ನು ಸಮರ್ಥಿಸಿದ್ದ ಗಾಂಧಿ ಅಂಬೇಡ್ಕರ್ ಪ್ರಭಾವದಿಂದಾಗಿ ಬದಲಾಗುತ್ತ ಬಂದರು. ಅಸ್ಪೃಶ್ಯತೆಯು ಹಿಂದೂ ಧರ್ಮದ ಮಹಾಕಳಂಕವೆಂದು ಹೇಳಿದರು. ಅಲ್ಲದೆ ಮುಸ್ಲಿಮರನ್ನು, ಇತರ ಧರ್ಮೀಯರನ್ನು ನಮ್ಮವರೇ ಆಗಿ ಕಾಣುವ ತಮ್ಮದೇ ಆದ ಹಿಂದೂ ಧರ್ಮವನ್ನು ತಮ್ಮ ನಡುವಳಿಕೆಯಲ್ಲಿ ತೋರಿದರು. ಇದು ಹಿಂದುತ್ವದ ಪರಮ ವಿರೋಧಿಯಾಗಬಹುದಾದ ಮಾನವೀಯ ಹಿಂದೂ ಧರ್ಮವಾಗುವ ಸಾಧ್ಯತೆಗಳಿದ್ದುದರಿಂದ ಗಾಂಧಿಯವರ ಕೊಲೆಯನ್ನು ಮಾಡುವುದು ಬಲಪಂಥೀಯ ಸಂಸ್ಥೆಗಳಿಗೆ ಅನಿವಾರ್ಯವಾಗಿತ್ತು. ಇತ್ತೀಚಿನ ದಿನಗಳಲ್ಲಿ ಗಾಂಧಿ ಕೊಲೆಯನ್ನು ಮಾಡಿದ ನಾಥೂರಾಮ್ ಗೋಡ್ಸೆಯನ್ನು ಪ್ರಶಂಸಿಸುವ ಹಾಗೂ ಆರಾಧಿಸುವ ಘಟನೆಗಳು ಹೆಚ್ಚುತ್ತಲೇ ಇವೆ. ನಾನು ವಾಸ ಮಾಡುವ ಶಿವಮೊಗ್ಗೆಯ ಒಂದು ಶಾಲೆಯಲ್ಲಿ ಮಕ್ಕಳಿಂದ ಗೋಡ್ಸೆಗೆ ಜಯಕಾರ ಹೇಳಿಸಲಾಯಿತೆಂದು ಕೆಲವರು ನನಗೆ ಹೇಳಿದರು. ಈ ಪಟ್ಟಣದ ಅನೇಕ ಪ್ರತಿಷ್ಠಿತ ಇಂಗ್ಲಿಷ್ ಹಾಗೂ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಮಕ್ಕಳು ಗಾಂಧಿ ಹಾಗೂ ನೆಹರು ಭಾರತದ ಖಳನಾಯಕರು ಎಂದು ನಂಬುವಂತೆ ಅವರ ಪಾಲಕರು ಹಾಗೂ ಆ ಪಾಲಕರ ಮಾರ್ಗದರ್ಶಿಗಳಾಗಿರುವ ಬಲಪಂಥೀಯ ಸಂಸ್ಥೆಗಳು ಕೆಲಸಮಾಡುತ್ತಿವೆ.

ಬಲಪಂಥೀಯ ಚಿಂತನೆಗೆ ಗಾಂಧಿಗಿಂತ ಬಹುದೊಡ್ಡ ಹೊಡೆತ ಬಂದಿದ್ದು ಅಂಬೇಡ್ಕರ್‌ರಿಂದ – ದಲಿತರು (ಅಂದಿನವರೆಗಿನ ಅಸ್ಪೃಶ್ಯರು) ಮನುಷ್ಯರೇ ಅಲ್ಲವೆಂದು ನಂಬಿ ನಡೆದುಕೊಂಡಿದ್ದ ಸಾಂಪ್ರದಾಯಿಕ ಹಿಂದು ಪ್ರಜ್ಞೆಗೆ ಇದೇ ದಲಿತರು ಒಗ್ಗಟ್ಟಾಗಿ, ತಮ್ಮ ಅಸ್ಮಿತೆಯನ್ನು ಪಡೆದುಕೊಂಡು ತಮ್ಮ ರಾಜಕೀಯ ಹಾಗೂ ಸಾಂಸ್ಕೃತಿಕ ಹಕ್ಕುಗಳನ್ನು ಬಲವಾಗಿ ಮಂಡಿಸಿದ್ದು ಚರಿತ್ರೆಯಲ್ಲಿಯೇ ದೊಡ್ಡ ಆಘಾತವಾಗಿತ್ತು. ನನ್ನ ದೃಷ್ಟಿಯಲ್ಲಿ ಸಾಂಪ್ರದಾಯಿಕ ಹಿಂದು ಪ್ರಜ್ಞೆ ಈ ಆಘಾತದಿಂದ ಇಂದಿಗೂ ಹೊರಬಂದಿಲ್ಲ. ಏಕೆಂದರೆ ಈ ಸಾಂಪ್ರದಾಯಿಕ ಹಿಂದೂ ಮನಸ್ಸು ಭಾರತದ ಮಹಾನ್ ಭಕ್ತಿ ಚಳುವಳಿಗಳಿಂದ ದೂರವಾಗಿ ಉಳಿದಿತ್ತು. ಆ ಭಕ್ತಿ ಚಳುವಳಿಗಳು ಪ್ರತಿಪಾದಿಸಿದ್ದ ಸಮಾನತೆ, ಜಾತಿವ್ಯವಸ್ಥೆ ವಿರೋಧ, ಇವುಗಳ ವಿರುದ್ಧವೇ ಈ ಮನಸ್ಸು ಕೆಲಸ ಮಾಡಿತ್ತು. ಇದು ಸಾಲದು ಎಂಬಂತೆ ಅಂಬೇಡ್ಕರ್ ಅವರು ಸಂವಿಧಾನದ ಮೂಲಕ ಅಸ್ಪೃಶ್ಯತೆಯನ್ನು ಕಾನೂನಾತ್ಮಕವಾಗಿ ತೆಗೆದು ಹಾಕಿದರು. ಅಲ್ಲದೆ ರಾಜಕೀಯ, ನಾಗರೀಕ ಹಕ್ಕುಗಳ ಜೊತೆಗೆ ಮೀಸಲಾತಿಯನ್ನೂ ಅನುಷ್ಠಾನಕ್ಕೆ ತಂದರು. ಇದೆಲ್ಲ ಇಲ್ಲಿಯ ಸಂಪ್ರದಾಯಸ್ಥ ಮನಸ್ಸಿಗೆ ಕಲ್ಪನೆಯನ್ನೂ ಮೀರಿದ ಆಘಾತವಾಗಿತ್ತು. ಹೀಗಾಗಿ ಈ ಮನಸ್ಸನ್ನುಳ್ಳ ಮೇಲ್ಜಾತಿಗಳು, ಬಲಿಷ್ಠ ಹಿಂದುಳಿದ ಜಾತಿಗಳು ದೈಹಿಕ ಹಿಂಸೆ, ಬಲಾತ್ಕಾರ ಹಾಗೂ ಸಾಮಾಜಿಕ ಬಹಿಷ್ಕಾರಗಳ ಮೂಲಕ ದಲಿತರ ಹಕ್ಕುಗಳ ವಿರುದ್ಧ ಕೆಲಸ ಮಾಡುತ್ತಿವೆ.

ಬಲಪಂಥೀಯ ಪಕ್ಷವು ಅಧಿಕಾರಕ್ಕೆ ಬಂದ ಮೇಲಂತೂ ದಲಿತರ ವಿರುದ್ಧದ ಸಾರ್ವಜನಿಕ ಹಿಂಸೆಯು ಅಪಾರವಾಗುತ್ತಿದೆ. ಅಲ್ಲದೆ ಕೇಂದ್ರ ಸರಕಾರ ಹಾಗೂ ಬಲಪಂಥೀಯ ರಾಜ್ಯ ಸರಕಾರಗಳು ಈ ಹಿಂಸೆಗೆ ಕಾರಣರಾದವರೆಗೆ ಶಿಕ್ಷೆ ಆಗದಂತೆ ನೋಡಿಕೊಳ್ಳುತ್ತಿವೆ. ತಾವು ಈಗ ಹಿಂದೂ ಸಾಮ್ರಾಜ್ಯವನ್ನೇ ಸ್ಥಾಪಿಸುತ್ತಿದ್ದೇವೆ ಎನ್ನುವ ಸಮೂಹ ಸನ್ನಿ ದಿನ ದಿನಕ್ಕೆ ಬೆಳೆಯುತ್ತಿದೆ. ಆದರೆ ಈ ಸನ್ನಿಗೆ ಒಳಗಾದವರಿಗೆ ಭಾರತದ ಪ್ರಜಾಪ್ರಭುತ್ವದ ಶಕ್ತಿ ಹಾಗೂ ಸ್ವಭಾವಗಳ ಪರಿಚಯವೇ ಇಲ್ಲ. ಹೀಗಾಗಿ ಸರ್ವೋಚ್ಚ ನ್ಯಾಯಾಲಯವು ಅಸ್ಪೃಶ್ಯತಾ ವಿರೋಧಿ ಕಾನೂನನ್ನು ಹಗುರಗೊಳಿಸಿದೆ ಎನ್ನುವ ಭಾವನೆಯಿಂದಾಗಿ ಭಾರತದ ಉದ್ದಕ್ಕೂ ದಲಿತರು ಮಾಡುತ್ತಿರುವ ಪ್ರತಿಭಟನೆಯು ಅವರಿಗೆ ಅರ್ಥವೇ ಆಗುತ್ತಿಲ್ಲ. ಅದನ್ನು ಕಾಂಗ್ರೆಸ್ ಪ್ರಚೋದನೆಯಿಂದ ಉಂಟಾದ ಹಿಂಸೆಯೆಂದು ಅವರು ವ್ಯಾಖ್ಯಾನಿಸುತ್ತಿದ್ದಾರೆ. ಆರ್.ಎಸ್.ಎಸ್ ನ ಬ್ರಾಹ್ಮಣವಾದಿ ಚಿಂತನೆಯನ್ನು ಪಾಲಿಸುತ್ತಿರುವ ಸರಕಾರವು ದಲಿತರನ್ನು ಕೊಲ್ಲುವ, ಭಯದಲ್ಲಿರಿಸುವ ಶಕ್ತಿಗಳನ್ನು ಬೆಂಬಲಿಸುವುದನ್ನು ನೋಡಿದ ದಲಿತರು ಆಕ್ರೋಶದಲ್ಲಿದ್ದಾರೆ. ಅವರು ಮೂಕಬಲಿಪಶುಗಳಾಗಿ ಇರುವ ಕಾಲವು ಹೊರಟು ಹೋಗಿದೆ. ಸಂವಿಧಾನದ ಮೌಲ್ಯಗಳನ್ನು ತಿರಸ್ಕರಿಸಿ ದಲಿತ ಹಾಗೂ ಅಲ್ಪಸಂಖ್ಯಾತರ ವಿರುದ್ಧ ಹಿಂಸೆ ಹಾಗೂ ಅವಮಾನಗಳ ಪರ್ವವನ್ನೇ ಆರಂಭಿಸುವವರು ಅರ್ಥಮಾಡಿಕೊಳ್ಳಬೇಕಾಗಿರುವುದೆಂದರೆ ಪ್ರಜಾಪ್ರಭುತ್ವವನ್ನು ನಾಶ ಮಾಡಿದರೆ ಉಳಿಯುವುದೆಂದರೆ ಹಿಂಸೆ ಮಾತ್ರ. ತಮ್ಮ ಮೇಲೆ ಆಗುತ್ತಿರುವ ಹಿಂಸೆಯ ಸಂದರ್ಭದಲ್ಲಿ ತಮ್ಮನ್ನು ನ್ಯಾಯಾಂಗ, ಪೋಲೀಸರು, ಸರಕಾರಗಳು ರಕ್ಷಿಸುವುದಿಲ್ಲವೆಂದು ಅರ್ಥಮಾಡಿಕೊಂಡ ದಲಿತ ವರ್ಗಗಳು ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಲು ಯಾವಾಗಲೂ ಅಹಿಂಸೆಯನ್ನೇ ಬಳಸುತ್ತಾರೆ ಎಂದು ನಿರೀಕ್ಷಿಸಬಾರದು. ಸೂಕ್ಷ್ಮವಾಗಿರುವವರಿಗೆ ಜನಮಾನಸದ ಆಳದಲ್ಲಿ ಗಟ್ಟಿಗೊಳ್ಳುತ್ತಿರುವ ಭಾವನೆಗಳನ್ನು ಅರ್ಥಮಾಡಿಕೊಳ್ಳುವ ಶಕ್ತಿ ಇರಬೇಕು. ಮಹಾರಾಷ್ಟ್ರದಲ್ಲಿ ನಡೆದ ರೈತರ ಚಳುವಳಿ, ಈಗ ನಡೆದಿರುವ ದಲಿತರ ಪ್ರತಿಭಟನೆ ಇವುಗಳು ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿಯೇ ನಡೆದಿರುವಂಥವು. ಆರ್.ಎಸ್.ಎಸ್.ನ ಮೂಲದಲ್ಲಿಯೇ ಇರುವ ಆಕ್ರಾಮಕ ರಾಜಕೀಯ, ಸರ್ವಾಧಿಕಾರಿ ಮನೋಭಾವ, ಬ್ರಾಹ್ಮಣಶಾಹಿ ಇವುಗಳನ್ನು ಭಾರತೀಯ ಪ್ರಜಾಪ್ರಭುತ್ವವು ಒಪ್ಪುವ ಸಾಧ್ಯತೆಯೇ ಇಲ್ಲ. ನಮ್ಮ ಪ್ರಜಾಪ್ರಭುತ್ವವು ದುರ್ಬಲವೇ ಇರಬಹುದು. ಇತ್ತೀಚಿಗೆ ಫ್ಯಾಸಿಸ್ಟ್ ಶಕ್ತಿಗಳಿಗೆ ಅಧಿಕಾರ ಕೊಟ್ಟಿರಬಹುದು. ಆದರೆ ಈ ದೌರ್ಬಲ್ಯವನ್ನು ಮೀರಿ ಅದು ರೈತರ ಪರವಾಗಿ, ದಲಿತರ ಪರವಾಗಿ, ಸೆಕ್ಯುಲರ್‌ವಾದದ ಪರವಾಗಿ ಬಲವಾದ ಸಂಕಲ್ಪ ಶಕ್ತಿಯನ್ನು ತೋರಬಲ್ಲದು.

ಆದರೆ ತನ್ನ ಬಹುಮತದ ಮದದಲ್ಲಿರುವ ಪಕ್ಷವು ಇದನ್ನು ಅರ್ಥಮಾಡಿಕೊಂಡಿಲ್ಲ. ಗಾರ್ ಮೆಂಟ್ ಮಹಿಳಾ ಶ್ರಮಜೀವಿಗಳ ಚಳುವಳಿಯಿಂದ ಹಿಡಿದು ಈ ಪ್ರತಿಭಟನೆಯವರೆಗೂ ಪ್ರತಿಬಾರಿಯೂ ಸರಕಾರವು ಸೋತಿದೆ. ಕಾಶ್ಮೀರದಲ್ಲಿಯೂ ಜನರ ಬೆಂಬಲವನ್ನು ಪಡೆಯಲಾಗಿಲ್ಲ. ಅತ್ಯಂತ ವಿಶೇಷವೆಂದರೆ ಈ ಯಾವುದೇ ಪ್ರತಿಭಟನೆಯ ಸನ್ನಿವೇಶದಲ್ಲಿ ಜನರು ಪ್ರಧಾನಮಂತ್ರಿಯವರ 'ವರ್ಚಸ್ವಿ' ವ್ಯಕ್ತಿತ್ವಕ್ಕೆ ಒಂದು ಕಾಸಿನ ಬೆಲೆಯನ್ನೂ ಕೊಟ್ಟಿಲ್ಲ. ಅವುಗಳನ್ನು ನಿಲ್ಲಿಸುವ ನೈತಿಕ ಶಕ್ತಿಯನ್ನು ಅವರೂ ತೋರಿಸಿಲ್ಲ. ಇದು ಇಂದಿನ ರಾಜಕೀಯದ ಬಹುದೊಡ್ಡ ವಿಚಿತ್ರವಾಗಿದೆ. ರಾಜಕೀಯವಾಗಿ ಅತ್ಯಂತ ಹೆಚ್ಚಿನ ಬಹುಮತ ಪಡೆದ ಪಕ್ಷ ಹಾಗೂ ಅದರ ನಾಯಕರು ದೇಶವನ್ನೇ ಅಲ್ಲಾಡಿಸುವ ಘಟನೆಗಳಲ್ಲಿ ಸಂಪೂರ್ಣವಾಗಿ ಗೈರುಹಾಜರಾಗಿರುತ್ತಾರೆ. ಜನಸಮುದಾಯಗಳ ಸಂಕಲ್ಪ ಹಾಗೂ ಒಲವುಗಳು ಅವರನ್ನು ಕನಿಷ್ಟ ಮಟ್ಟದಲ್ಲಿಯೂ ಗಣನೆಗೇ ತೆಗೆದುಕೊಳ್ಳುತ್ತಿಲ್ಲ. ಅವರು ಸಂಪೂರ್ಣ ಅಪ್ರಸ್ತುತ ಎನ್ನುವ ಹಾಗೆ ಜನಸಮುದಾಯಗಳು ವರ್ತಿಸುತ್ತಿವೆ. ಉದಾಹರಣೆಗೆ ಪ್ರತಿಭಟಿಸುತ್ತಿರುವ ದಲಿತರಿಗೆ ಅವರ ಸಮಸ್ಯೆಯ ಬಗ್ಗೆ ಪ್ರಧಾನಿಗಳ ನಿಲುವು ಏನು ಎನ್ನುವುದರ ಬಗ್ಗೆ ಪ್ರಾಥಮಿಕ ಆಸಕ್ತಿಯೂ ಇಲ್ಲ. ಅದು ಅವಶ್ಯಕವಾಗಿ ಕಂಡೇ ಇಲ್ಲ. ಈ ಪ್ರತಿಭಟನೆಯನ್ನು ನಿಲ್ಲಿಸುವ ಸಾಮರ್ಥ್ಯವೇ ಅವರಿಗೆ ಇಲ್ಲ. ಕಾಶ್ಮೀರದ ಪ್ರಜೆಗಳೂ ಹೀಗೆಯೇ ಅಂದುಕೊಂಡಿದ್ದಾರೆ.

ಇವುಗಳ ಮಧ್ಯೆ ನಮ್ಮನ್ನು ಬಾಧಿಸಬೇಕಾದ ಅಂಶವೆಂದರೆ ದಿನಕ್ಕೊಂದು ಬೃಹತ್ ವಿವಾದವು ತಲೆಯೆತ್ತಿ ಅವು ಹಿಂಸೆ, ಪ್ರತಿಭಟನೆಯ ರೂಪ ಪಡೆದುಕೊಳ್ಳುತ್ತಿರುವಾಗ ಒಂದು ರಾಜಕೀಯ ಸಮುದಾಯವಾಗಿ (ಕಂಟುಣಧಿ) ಪ್ರಜಾಪ್ರಭುತ್ವದ ಒಳಗೆಯೇ ಪರಿಹಾರಗಳನ್ನು ಕಂಡುಕೊಳ್ಳುವುದರಲ್ಲಿ ಕಾಣುತ್ತಿರುವ ಸೋಲು. ಅಂದರೆ ಮತ, ಬಹುಮತ, ಪಕ್ಷ ರಾಜಕೀಯಗಳಿಗೆ, ಜನಸಮುದಾಯಗಳ ಸಂಕಲ್ಪ ಹಾಗೂ ಒಲವುಗಳ ಮಧ್ಯೆ ಸಂಬಂಧವೇ ಇಲ್ಲದಂಥ ಅಸಂಗತವಾದ ಸ್ಥಿತಿ. ನನಗೆ ತೋಚಿದ ಹಾಗೆ ನಮ್ಮ ರಾಜಕೀಯ ವಿಶ್ಲೇಷಕರಿಗೆ ಈ ಪರಿಸ್ಥಿತಿಯನ್ನು ವಿವರಿಸಲು ಸಾಧ್ಯವಾಗುತ್ತಿಲ್ಲ. ಇದು ಹೀಗೆ ಮುಂದುವರೆದರೆ ಅಧಿಕಾರ ರಾಜಕೀಯವು ದಬ್ಬಾಳಿಕೆ ಹಾಗೂ ಸರ್ವಾಧಿಕಾರದತ್ತ ವಾಲುವುದು ನಿಶ್ಚಿತವೆಂದು ಕಾಣುತ್ತದೆ. ಏಕೆಂದರೆ ಜನರು ತಮ್ಮೊಂದಿಗೆ ಇಲ್ಲವೆಂದಾಗ ಮಾತ್ರ, ಸರ್ವಾಧಿಕಾರವು ಅನಿವಾರ್ಯವೆಂದು ರಾಜಕೀಯ ಪಕ್ಷಗಳಿಗೆ ಕಾಣತೊಡಗುತ್ತದೆ.



ದಲಿತ ಆಕ್ರೋಶಕ್ಕೆ ಮನ್ನಣೆ ನೀಡಿ

ಈ ಕ್ರೋಧ ಸುಪ್ರೀಂ ಕೋರ್ಟ್ ತೀರ್ಪಿನ ವಿರುದ್ಧ ಮಾತ್ರವಲ್ಲ, ಕೇಂದ್ರ ಮತ್ತು ರಾಜ್ಯಗಳಲ್ಲಿರುವ ಬಿಜೆಪಿ ಸರಕಾರಗಳ ವಿರುದ್ಧದ ಆಕ್ರೋಶವೂ ಆಗಿದೆ. ಈ ತೀರ್ಪು ಜಾತಿ ದಮನ ಮತ್ತು ಪೂರ್ವಾಗ್ರಹಗಳ ಕುರಿತಂತೆ ಉನ್ನತ ನ್ಯಾಯಾಂಗದಲ್ಲಿ ಆಗಾಗ ವ್ಯಕ್ತವಾಗುತ್ತಿರುವ ಸಂವೇದನಾ ಶೂನ್ಯತೆಯನ್ನೂ ಸೂಚಿಸುತ್ತದೆ. ಮತ್ತು ಬೀದಿಗಳಲ್ಲಿ ಅದರ ವಿರುದ್ಧ ವ್ಯಕ್ತವಾದ ಆಕ್ರೋಶ ವಿಶೇಷವಾಗಿ ಉತ್ತರ ಭಾರತದ ಬಿಜೆಪಿ ಆಡಳಿತದ ರಾಜ್ಯಗಳಲ್ಲಿ ದಲಿತರ ಮೇಲೆ ಹೆಚ್ಚುತ್ತಿರುವ ದಾಳಿಗಳು ಮತ್ತು ಮೇಲ್ಜಾತಿ ಜನರ ಹೆಚ್ಚುತ್ತಿರುವ ಅಧಿಪತ್ಯದ ನಗ್ನ ಅಭಿವ್ಯಕ್ತಿಯ ವಿರುದ್ಧ ಮಡುಗಟ್ಟಿದ ಸಿಟ್ಟಿನತ್ತ ಬೊಟ್ಟು ಮಾಡುತ್ತಿವೆ.



ಪ್ರಕಾಶ ಕಾರಟ್



ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಬುಡಕಟ್ಟುಗಳು (ದೌರ್ಜನ್ಯ ತಡೆ) ಕಾಯ್ದೆಯ ಕೆಲವು ನಿರ್ದಿಷ್ಟ ಅಂಶಗಳನ್ನು ದುರ್ಬಲಗೊಳಿಸುವ ಸುಪ್ರೀಂ ಕೋರ್ಟ್‌ನ ತೀರ್ಪಿನ ವಿರುದ್ಧ ವಿವಿಧ ದಲಿತ ಸಂಘಟನೆಗಳು ನೀಡಿದ ಎಪ್ರಿಲ್ ಎರಡರ ಬಂದ್ ಕರೆಗೆ ಉತ್ತರ ಭಾರತದಾದ್ಯಂತ ಹಾಗೂ ಗುಜರಾತ್ ಮತ್ತು ಒಡಿಶಾದಂತಹ ಕಡೆಗಳಲ್ಲಿ ಉಗ್ರ ಸ್ಪಂದನೆ ವ್ಯಕ್ತವಾಗಿದೆ.

ಬೀದಿಗಳಲ್ಲಿ ವ್ಯಕ್ತವಾದ ಆಕ್ರೋಶ ಮತ್ತು ವ್ಯಾಪಕವಾದ ಸ್ಪಂದನೆ, ವಿಶೇಷವಾಗಿ ಉತ್ತರ ಭಾರತದ ಬಿಜೆಪಿ ಆಡಳಿತದ ರಾಜ್ಯಗಳಲ್ಲಿ ದಲಿತರ ಮೇಲೆ ಹೆಚ್ಚುತ್ತಿರುವ ದಾಳಿಗಳು ಮತ್ತು ಮೇಲ್ಜಾತಿ ಜನರ ಹೆಚ್ಚುತ್ತಿರುವ ಅಧಿಪತ್ಯದ ನಗ್ನ ಅಭಿವ್ಯಕ್ತಿಯ ವಿರುದ್ಧ ಮಡುಗಟ್ಟಿದ ಸಿಟ್ಟಿನತ್ತವೂ ಬೊಟ್ಟು ಮಾಡುತ್ತಿವೆ.

ಈ ಕ್ರೋಧ ಸುಪ್ರೀಂ ಕೋರ್ಟ್ ತೀರ್ಪಿನ ವಿರುದ್ಧ ಮಾತ್ರವಲ್ಲ, ಕೇಂದ್ರ ಮತ್ತು ರಾಜ್ಯಗಳಲ್ಲಿರುವ ಬಿಜೆಪಿ ಸರಕಾರಗಳ ವಿರುದ್ಧದ ಆಕ್ರೋಶವೂ ಆಗಿದೆ. ರೋಹಿತ್ ವೇಮುಲ ಸಾವು ಹಾಗೂ ಕೇಂದ್ರ ಸರಕಾರ ಅದನ್ನು ನಿಭಾಯಿಸಿದ ಬಗೆ, ದಲಿತ ಯುವಕರನ್ನು ಥಳಿಸಿದ ಗುಜರಾತ್‌ನ ಉನಾ ಪ್ರಕರಣ, ಭೀಮ ಕೋರೆಗಾಂವ್ ರ್‍ಯಾಲಿಯಲ್ಲಿ ಭಾಗವಹಿಸಿದ ದಲಿತರ ಮೇಲೆ ನಡೆದ ದಾಳಿಗಳು ಮತ್ತು ದಲಿತರ ಮೀಸಲಾತಿ ಸೌಲಭ್ಯವನ್ನು ದುರ್ಬಲಗೊಳಿಸಲು ಯುಜಿಸಿ ಮತ್ತಿತರ ಸರಕಾರಿ ಸಂಸ್ಥೆಗಳ ವಿವಿಧ ನಡೆಗಳು ಇವೆಲ್ಲವೂ ಬಿಜೆಪಿ–ಆರ್‌ಎಸ್‌ಎಸ್ ಕೂಟ ಮೇಲ್ನೋಟಕ್ಕೆ ದಲಿತರನ್ನು ಹಿಂದುತ್ವದ ತೆಕ್ಕೆಗೆ ಸೆಳೆಯಲು ಪ್ರಯತ್ನಗಳನ್ನು ನಡೆಸಿದರೂ ಈ ಕೂಟದ ದಲಿತ–ವಿರೋಧಿ ಕಣ್ಣೋಟವನ್ನು ಎತ್ತಿ ತೋರಿಸುತ್ತವೆ.

ಪ್ರತಿಭಟನೆ ವೇಳೆ ಪೊಲೀಸ್ ಫೈರಿಂಗ್‌ಗಳಲ್ಲಿ ಒಂಬತ್ತು ದಲಿತರು ಸಾವಿಗೀಡಾಗಿದ್ದು ಕೂಡ ಪೊಲೀಸ್ ಪಡೆಗಳ ಪಕ್ಷಪಾತಿ ಧೋರಣೆಯನ್ನು ಬಯಲಿಗೆ ತಂದಿದೆ. ದಲಿತರ ಪ್ರತಿಭಟನೆಗಳನ್ನು ಎದುರಿಸುವ ಸಂದರ್ಭದಲ್ಲಿ ಪೊಲೀಸರು ಬಂದೂಕುಗಳನ್ನು ಚಲಾಯಿಸುವಲ್ಲಿ ಹೆಚ್ಚು ಖುಶಿಪಡುವಂತೆ ಕಾಣುತ್ತದೆ.

ಎಪ್ರಿಲ್ ಎರಡರ ಹಿಂಸಾಚಾರದ ಇನ್ನೊಂದು ಆತಂಕಕಾರಿ ಅಂಶವೆಂದರೆ, ಮಧ್ಯ ಪ್ರದೇಶದ ಗ್ವಾಲಿಯರ್ ಪ್ರದೇಶದ ಮತ್ತು ಉತ್ತರ ಪ್ರದೇಶದ ಕೆಲವೆಡೆ ಆರ್‌ಎಸ್‌ಎಸ್‌ನವರು ಹಾಗೂ ಮೇಲ್ಜಾತಿಯ ಜನರು ದಲಿತ ಪ್ರತಿಭಟನೆಕಾರರ ಮೇಲೆ ಯೋಜಿತ ದಾಳಿಗಳನ್ನು ನಡೆಸಿದ್ದು.

ಬಂದ್ ಪ್ರತಿಭಟನೆಗಳ ಹಿನ್ನೆಲೆಯಲ್ಲಿ ಮೇಲ್ಜಾತಿ ಶಕ್ತಿಗಳು ಮತ್ತು ಹಿಂದುತ್ವವಾದಿಗಳು ಪ್ರತೀಕಾರದ ಕ್ರಮಕ್ಕೆ ಮುಂದಾಗಿದ್ದನ್ನೂ ಕಂಡಿದ್ದೇವೆ. ರಾಜಸ್ತಾನದ ಕರೌಲಿ ಜಿಲ್ಲೆಯಲ್ಲಿ ದಲಿತ ಬಿಜೆಪಿ ಶಾಸಕರೊಬ್ಬರ ಹಾಗೂ ಕಾಂಗ್ರೆಸ್‌ನ ಮಾಜಿ ಶಾಸಕರೊಬ್ಬರ ಮನೆ ಮೇಲೆ ನಡೆಸಿದ ದೊಂಬಿ ಮತ್ತು ಇತರ ಅನೇಕ ಕಡೆಗಳಲ್ಲಿ ದಲಿತರ ಮೇಲೆ ನಡೆದ ದಾಳಿಗಳು, ಸಾರ್ವಜನಿಕ ಸ್ಥಳಗಳಲ್ಲಿ ದಲಿತರು ವ್ಯಕ್ತಪಡಿಸುವ ಯಾವುದೇ ರೀತಿಯ ಪ್ರತಿರೋಧಕ್ಕೆ ವ್ಯಕ್ತವಾಗುವ ಜಾತೀಯ ಅಸಹನೆಯ ಪ್ರತೀಕವಾಗಿದೆ.

ದೌರ್ಜನ್ಯ ತಡೆ ಕಾನೂನಿನ ಅಂಶಗಳನ್ನು, ಸುಳ್ಳು ದೂರುಗಳು ಹಾಗೂ ಅವುಗಳ ಆಧಾರದಲ್ಲಿ ಬಂಧಿತರಾಗಿ ಕಿರುಕುಳಕ್ಕೆ ಒಳಗಾಗುವ ಮುಗ್ಧ ಜನರನ್ನು ರಕ್ಷಿಸಲಿಕ್ಕಾಗಿ ಸಡಿಲಗೊಳಿಸಬೇಕಾಗಿದೆ ಎಂಬ ಸಮರ್ಥನೆ ನೀಡಲಾಗಿದೆ. ಈ ತೀರ್ಪು ದಲಿತರು ನಿರಂತರವಾಗಿ ಎದುರಿಸುತ್ತಿರುವ ದಬ್ಬಾಳಿಕೆ ಮತ್ತು ತಾರತಮ್ಯದ ಸಾಮಾಜಿಕ ಕಟುವಾಸ್ತವಗಳಿಂದ ದೂರ ನಿಂತಿದೆ. ಸಾಮಾಜಿಕ ವ್ಯವಸ್ಥೆಯ ಅತ್ಯಂತ ಕೆಳಸ್ತರದಲ್ಲಿರುವ ಜನರ ವಿರುದ್ಧ ಸಾಮಾಜಿಕ ಹಾಗೂ ಸಾಂಸ್ಥಿಕ ತಾರತಮ್ಯ ಇದೆ ಎಂಬ ವಾಸ್ತವಿಕತೆಯಿಂದಾಗಿಯೇ ಪರಿಶಿಷ್ಟ ಜಾತಿ ಮತ್ತು ಬುಡಕಟ್ಟುಗಳ ಜನರ ಹಕ್ಕುಗಳನ್ನು ರಕ್ಷಿಸುವ ಒಂದು ಕಾನೂನಿನಲ್ಲಿ ಕಟ್ಟುನಿಟ್ಟಾದ ಅಂಶಗಳನ್ನು ಅಳವಡಿಸಬೇಕಾಗುತ್ತದೆ.

ವಾಸ್ತವ ಸಂಗತಿಯೆಂದರೆ, ದೌರ್ಜನ್ಯ ತಡೆ ಕಾಯ್ದೆಗೆ ದಲಿತರ ವಿರುದ್ಧದ ದೌರ್ಜನ್ಯ ಹಾಗೂ ದಬ್ಬಾಳಿಕೆಗಳನ್ನು ತಡೆಯುವಲ್ಲಿ ಒಂದು ಪರಿಣಾಮಕಾರಿ ಅಸ್ತ್ರವಾಗಲು ಸಾಧ್ಯವಾಗಿಲ್ಲ. ಹಾಗಾಗಿಯೇ ಇನ್ನಷ್ಟು ಪರಿಣಾಮಕಾರಿ ಅಂಶಗಳನ್ನು ಅಳವಡಿಸಲು ಹಾಗೂ ಲೋಪದೋಷಗಳನ್ನು ನಿವಾರಿಸಲು ಒತ್ತಾಯಿಸಿ ದೀರ್ಘ ಕಾಲದಿಂದ ಚಳವಳಿಗಳು ನಡೆಯುತ್ತಿವೆ. ಸಂಸತ್ತು 2015ರಲ್ಲಿ ಈ ಕಾನೂನಿಗೆ ತಿದ್ದುಪಡಿಗಳನ್ನು ತಂದಿದ್ದು ಅದರ ಫಲಿತಾಂಶವಾಗಿಯೇ.

ದೌರ್ಜನ್ಯ ವಿರೋಧಿ ಕಾನೂನನ್ನು ದುರ್ಬಲಗೊಳಿಸುವುದರ ವಿರುದ್ಧ ಆಕ್ರೋಶ ವ್ಯಕ್ತವಾಗುತ್ತಿರುವಾಗಲೇ ಎಸ್‌ಸಿ–ಎಸ್‌ಟಿ ದೌರ್ಜನ್ಯ ತಡೆ ಕಾನೂನಿಗೆ ಸಂಬಧಿಸಿದ ಅಂಕಿ–ಸಂಖ್ಯೆಗಳು ನಿಜವಾದ ಚಿತ್ರಣವನ್ನು ಅನಾವರಣಗೊಳಿಸುತ್ತವೆ. ರಾಷ್ಟ್ರೀಯ ಅಪರಾಧ ದಾಖಲೆಗಳ (ಎನ್‌ಸಿಆರ್) ಬ್ಯೂರೋದ 2017ರ ಮಾಹಿತಿ ಪ್ರಕಾರ, ಈ ಕಾಯಿದೆಯ ಅಡಿಯಲ್ಲಿ ಶಿಕ್ಷೆಗೊಳಗಾದವರ ಸಂಖ್ಯೆ ಗಣನೀಯವಾಗಿ ಇಳಿಮುಖಗೊಂಡಿದೆ. ಶಿಕ್ಷೆಗೊಳಗಾದವರ ಪ್ರಮಾಣ 2010ರಲ್ಲಿ ಶೇಕಡಾ 38 ಇದ್ದದ್ದು 2016ರಲ್ಲಿ ಕೇವಲ ಶೇಕಡಾ 16ಕ್ಕೆ ಕುಸಿದಿದೆ.

ಒಂದು ಕಡೆ ಶಿಕ್ಷೆಗೊಳಗಾದವರ ಪ್ರಮಾಣ ಕುಸಿದಿದ್ದರೆ ಇನ್ನೊಂದೆಡೆ ಈ ಕಾನೂನಿನ ಅಡಿಯಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆ ಗಣನೀಯವಾಗಿ ಹೆಚ್ಚಿದೆ. 2010ರಲ್ಲಿ 40,481 ಕೇಸ್‌ಗಳು ದಾಖಲಾಗಿದ್ದು 2016ರಲ್ಲಿ ಆ ಸಂಖ್ಯೆ 45,286 ಆಗಿದೆ.

ಆದ್ದರಿಂದ, ಸುಳ್ಳು ಪ್ರಕರಣಗಳು ದಾಖಲಾಗುವುದು (ಅವು ಆಗುತ್ತಿವೆ) ಮುಖ್ಯ ಸಂಗತಿಯಲ್ಲ, ಆದರೆ ದೌರ್ಜನ್ಯ ಮತ್ತು ದಬ್ಬಾಳಿಕೆಗಳಿಂದ ನಲುಗುವ ಜನರಿಗೆ ನ್ಯಾಯ ದೊರಕಿಸಲು ವಿಫಲವಾಗುತ್ತಿರುವುದೇ ಮುಖ್ಯ ವಿಚಾರವಾಗಿದೆ.

ಸುಪ್ರೀಂ ಕೋರ್ಟ್ ಪೀಠ ದೇಶದಲ್ಲಿ ಪೊಲೀಸ್ ಹಾಗೂ ನ್ಯಾಯದಾನದ ಸಾಂಸ್ಥಿಕ ವಿಧಿ–ವಿಧಾನಗಳಲ್ಲಿ ಗಂಭೀರ ಅಸಮತೋಲನ ಮತ್ತು ಪಕ್ಷಪಾತ ಇರುವ ಹಿನ್ನೆಲೆಯಲ್ಲಿ ಈ ಇಡೀ ವಿಚಾರವನ್ನು ಗಮನಿಸದಿರುವುದು ದುರದೃಷ್ಟಕರವಾಗಿದೆ. ಇದು ಜಾತಿ ದಮನ ಮತ್ತು ಪೂರ್ವಾಗ್ರಹಗಳ ಕುರಿತಂತೆ ಉನ್ನತ ನ್ಯಾಯಾಂಗದಲ್ಲಿ ಆಗಾಗ ವ್ಯಕ್ತವಾಗುತ್ತಿರುವ ಸಂವೇದನಾ ಶೂನ್ಯತೆಯನ್ನೂ ಸೂಚಿಸುತ್ತದೆ.

ಕೇಂದ್ರ ಸರಕಾರ ಸಲ್ಲಿಸಿರುವ ಮರುಪರಿಶೀಲನೆ ಅರ್ಜಿಯು ಸರ್ವೋನ್ನತ ನ್ಯಾಯಾಲಯ ತನ್ನ ಹಿಂದಿನ ತೀರ್ಪನ್ನು ಮರುಪರಿಶೀಲಿಸಲು ಕಾರಣವಾಗಬಹುದೆಂದು ಆಶಿಸೋಣ. ಇಲ್ಲದಿದ್ದರೆ ಕಾನೂನನ್ನು ದುರ್ಬಲಗೊಳಿಸುವುದರ ವಿರುದ್ಧದ ಹೋರಾಟ ಮುಂದುವರಿಯುತ್ತದೆ.

ಅನು: ವಿಶ್ವ

ಸಿಪಿಐ(ಎಂ) ಕೇಂದ್ರ ಸಮಿತಿ ಹೇಳಿಕೆ

ಅವಿಶ್ವಾಸ ಠರಾವು–ಬಿಜೆಪಿ ಇಬ್ಬಂದಿತನ ಬಯಲು

ಪುಟ 2 ರಿಂದ

ಇಬ್ಬಂದಿತನ ಮತ್ತು ಅದರ ಪ್ರಜಾಪ್ರಭುತ್ವ–ವಿರೋಧಿ ಚಾರಿತ್ರ್ಯ ಸಂಪೂರ್ಣವಾಗಿ ಬಯಲಾಗಿದೆ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಹೇಳಿದೆ. ಏಕೆಂದರೆ ಅದೇ ಲೋಕಸಭೆಗೆ ಸದನದಲ್ಲಿ ವ್ಯವಸ್ಥೆಇಲ್ಲದಿದ್ದಾಗ ಯಾವುದೇ ಚರ್ಚೆಯಿಲ್ಲದೆ ಗದ್ದಲಗಳ ನಡುವೆಯೇ ಭಾರತದ ಕ್ರೋಡೀಕೃತ ನಿಧಿಯಿಂದ 10 ಲಕ್ಷ ಕೋಟಿ ರೂ.ಗಳನ್ನು ಬಳಸಲು ಸರಕಾರಕ್ಕೆ ಅನುಮತಿ ನೀಡುವ ಹಣಕಾಸು ಮಸೂದೆಯನ್ನು ಪಾಸು ಮಾಡಿದೆ. ಸಂಸದೀಯ ಪ್ರಜಾಪ್ರಭುತ್ವವನ್ನು ಮತ್ತು ಜವಾಬುದಾರಿಕೆಯನ್ನು ಬುಡಮೇಲು ಮಾಡಿರುವ ರೀತಿಯಿದು ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಅಭಿಪ್ರಾಯ ಪಟ್ಟಿದೆ.

ಕಾರ್ಪೊರೇಟ್‌ಗಳ ಪರವಾದ ಹೊಸ ಕಾರ್ಮಿಕ ಕಾನೂನುಗಳು

ಖಾಸಗೀ ವಲಯುದಾದ್ಯಂತ ನಿಗದಿತ ಅವಧಿಯ ಉದ್ಯೋಗ ಎಂಬುದನ್ನು ತರಲು ನಿರ್ಧರಿಸಿರುವುದನ್ನು ಸಿಪಿಐ(ಎಂ) ಕೇಂದ್ರಸಮಿತಿ ಬಲವಾಗಿ ಖಂಡಿಸಿದೆ. ಈ ಮೂಲಕ ಇನ್ನು ಮುಂದೆ ದುಡಿಯುವ ಜನಗಳಿಗೆ ಯಾವುದೇ ಕಾಯಂ ಉದ್ಯೋಗ ಮತ್ತು ಕೆಲಸದ ಭದ್ರತೆಯ ಸಾಧ್ಯತೆಗಳೇ ಇಲ್ಲದಂತೆ ಮಾಡಲಾಗಿದೆ. ಇದರಿಂದ ಸಾರಾಸಗಟು ಕಾಂಟ್ರಾಕ್ಟೀಕರಣ ನಡೆಯುವಂತೆ ಮಾಡಲಾಗಿದೆ. ಕಾರ್ಮಿಕವರ್ಗ ಹೋರಾಟಗಳ ಮೂಲಕ ಗಳಿಸಿದ ಹಕ್ಕುಗಳನ್ನು ಕಳ್ಳತನದಿಂದ ವಿದೇಶಿ ಮತ್ತು ದೇಶೀ ಕಾರ್ಪೊರೇಟ್‌ಗಳ ಹಿತ ಸಾಧಿಸಲಿಕ್ಕಾಗಿ ಬದಲಿಸಲಾಗುತ್ತಿದೆ. ಕಾರ್ಮಿಕ ಸಂಘಗಳು ಇದನ್ನು ವಿರೋಧಿಸಿ ಯೋಜಿಸಿರುವ ಪ್ರತಿಭಟನಾ ಕಾರ್ಯಾಚರಣೆಗಳಿಗೆ ಕೇಂದ್ರ ಸಮಿತಿ ಬೆಂಬಲ ವ್ಯಕ್ತಪಡಿಸಿದೆ.

ಹಣಕಾಸು ಆಯೋಗ–ಪರಿಶೀಲನಾ ಶರತ್ತುಗಳ ಪರಿಷ್ಕರಣೆ

15ನೇ ಹಣಕಾಸು ಆಯೋಗದ ಪರಿಶೀಲನೆಗೆ ವಿಧಿಸಿರುವ ಶರತ್ತುಗಳನ್ನು ಪರಿಷ್ಕರಿಸಬೇಕು ಎಂದು ಸಿಪಿಐ(ಎಂ) ಕೇಂದ್ರಸಮಿತಿ ಆಗ್ರಹಿಸಿದೆ. ಈಗಾಗಲೇ ದಕ್ಷಿಣದ ರಾಜ್ಯಗಳ ಹಣಕಾಸು ಮಂತ್ರಿಗಳು ತಮ್ಮ ರಾಜ್ಯಗಳಿಗೆ ಪ್ರತಿಕೂಲವಾಗಿ ತಟ್ಟುವ ಪ್ರಶ್ನೆಯನ್ನು ಎತ್ತಿದ್ದು ಇವನ್ನು ಗಂಭೀರವಾಗಿ ಪರಿಶೀಲಿಸಬೇಕು ಎಂದು ಅದು ಹೇಳಿದೆ.

ಪರಿಶಿಷ್ಟ ಜಾತಿ/ಬುಡಕಟ್ಟುಗಳನ್ನು ಕುರಿತ ತೀರ್ಪಿಗೆ ಸವಾಲು

ಸುಪ್ರಿಂ ಕೋರ್ಟಿನ ಪೀಠವೊಂದು ದೌರ್ಜನ್ಯ ತಡೆ ಕಾನೂನಿನ ಅಂಶಗಳನ್ನು ದುರ್ಬಲಗೊಳಿಸುವ ತೀರ್ಪನ್ನು ನೀಡಿದೆ. ಈ ತೀರ್ಪು ಪ್ರತಿದಿನ ದಲಿತರ ಮೇಲೆ ಜಾತಿ ದಮನ, ಕಿರುಕುಳ ಮತ್ತು ಜಾತಿ ಅತ್ಯಾಚಾರ ನಡೆಸಲಾಗುತ್ತಿದೆ ಎಂಬ ವಾಸ್ತವವನ್ನು ಉಪೇಕ್ಷಿಸಿದೆ ಎಂದು ಅಭಿಪ್ರಾಯ ಪಟ್ಟಿರುವ ಸಿಪಿಐ(ಎಂ) ಕೇಂದ್ರ ಸಮಿತಿ ಈ ಕಾಯ್ದೆಯ ಅಡಿಯಲ್ಲಿ ಆಪಾದನೆ ಗೊಳಗಾಗುವವರ ಬಂಧನ ಮತ್ತು ವಿಚಾರಣೆ ಸುಮಾರಾಗಿ ಅಸಾಧ್ಯವೇ ಆಗುವಂತೆ ಈ ತೀರ್ಪು ಮಾಡಿದೆ ಎಂದು ಹೇಳಿದೆ. ಒಬ್ಬ ಸಾರ್ವಜನಿಕ ಸೇವಕನಿಗೆ ನಿರೀಕ್ಷಣಾ ಜಾಮಿನು ಪಡೆಯಲು ಇದ್ದ ನಿರ್ಬಂಧಗಳನ್ನು ತೆಗೆದು ಆತನ ಮೇಲಧಿಕಾರಗಳ ಮಂಜೂರಾತಿ ನಂತರವಷ್ಟೇ ಕ್ರಮ ವಹಿಸಲು ಸಾಧ್ಯವಾಗುವಂತೆ ಮಾಡಲಾಗಿದೆ. ಕೇಂದ್ರ ಸರಕಾರ ಈ ತೀರ್ಪಿಗೆ ಸವಾಲು ಹಾಕಬೇಕು, ಈ ತೀರ್ಪಿನ ಮರುಪರಿಶೀಲನೆ ನಡೆಸುವಂತೆ ಸುಪ್ರಿಂ ಕೊರ್ಟಿನ ದೊಡ್ಡ ಪೀಠವೊಂದಕ್ಕೆ ಅರ್ಜಿ ಸಲ್ಲಿಸಬೇಕು ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಆಗ್ರಹಿಸಿದೆ.

ಖಾಸಗಿತನದ ಉಲ್ಲಂಘನೆ ತಡೆಯಲು ಒಂದು ಕಾನೂನು ಚೌಕಟ್ಟು

ಫೇಸ್‌ಬುಕ್ ಮುಂತಾದ ಸಾಮಾಜಿಕ ಜಾಲದ ವೇದಿಕೆಗಳಲ್ಲಿನ ಮಾಹಿತಿಗಳನ್ನು ಮತದಾರರ ಮೇಲೆ ಪ್ರಭಾವ ಬೀರಲು ಬಳಸಲಾಗುತ್ತಿದೆ ಎಂದು ಇತ್ತೀಚೆಗೆ ಬಯಲಿಗೆ ಬಂದಿದೆ. ಇದು ಪ್ರಜಾಪ್ರಭುತ್ವಕ್ಕೆ ಮತ್ತು ವ್ಯಕ್ತಿಯ ಖಾಸಗಿತನಕ್ಕೆ ಕುತ್ತು ಬಂದಿರುವುದನ್ನು ತೋರಿಸಿದೆ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಹೇಳಿದೆ. ಈ ರೀತಿ ಚುನಾವಣೆಗಳ ಮೇಲೆ ಪ್ರಭಾವ ಬೀರಲು ಬಳಸುವ ಮಾಹಿತಿಗಳನ್ನು ಮಾರಿದ್ದಕ್ಕಾಗಿ ಫೇಸ್‌ಬುಕ್ ಸಾರ್ವಜನಿಕ ಕ್ಷಮೆ ಕೇಳಿದೆ. ತುರ್ತಾಗಿ ಹೊಸ ಕಾನೂನುಗಳನ್ನು ತಂದು ನಾಗರಿಕರ ಖಾಸಗಿತನ ಮತ್ತು ವೈಯಕ್ತಿಕ ಮಾಹಿತಿಯ ರಕ್ಷಣೆಗೆ ಮುಂದಾಗಬೇಕು, ನಮ್ಮ ದೇಶದಲ್ಲಿ ಒಂದು ಮೂಲಭೂತ ಹಕ್ಕಾಗಿರುವ ಖಾಸಗಿತನದ ರಕ್ಷಣೆಗೆ ಒಂದು ಕಾನೂನು ಸಂರಚನೆಯನ್ನು ತುರ್ತಾಗಿ ರೂಪಿಸಬೇಕು ಎಂದು ಕೇಂದ್ರ ಸಮಿತಿ ಆಗ್ರಹಿಸಿದೆ.

ಈಗ ಬಯಲಾಗಿರುವ ಸಂಗತಿಗಳ ಹಿನ್ನೆಲೆಯಲ್ಲಿ ಚುನಾವಣಾ ಆಯೋಗ ಗೂಗಲ್‌ನೊಂದಿಗೆ ಕೈಜೋಡಿಸುವ ಬಗ್ಗೆ ಮತ್ತು ಫೇಸ್‌ಬುಕ್‌ನ್ನು ತನ್ನ ಸಂದೇಶ ಪಸರಿಸುವುದಕ್ಕೆ ಬಳಸುವ ಬಗ್ಗೆ ತನ್ನ ಕಣ್ಣೋಟವನನು ಗಂಭೀರವಾಗಿ ಮರುಪರಿಶೀಲಿಸಬೇಕು ಎಂದೂ ಕೇಂದ್ರ ಸಮಿತಿ ಆಗ್ರಹಿಸಿದೆ. ಏಕೆಂದರೆ ಈ ವೇದಿಕೆಗಳು ಮತದಾರರ ಮಾಹಿತಿಗಳನ್ನು ಕ್ರೋಡೀಕರಿಸಿ ಅವನ್ನು ಹಣಬಲವಿರುವ ಪಕ್ಷಗಳಿಗೆ ಚುನಾವಣೆಗಳ ಮೇಲೆ ಪ್ರಭಾವ ಬೀರುವುದಕ್ಕಾಗಿ ಹೊರಗುತ್ತಿಗೆ ನೀಡಲು ಬಳಸಬಹುದು. ಇದು ನಮ್ಮ ಪ್ರಜಾಪ್ರಭುತ್ವದ ಸಾರವನ್ನೇ ಬುಡಮೇಲು ಮಾಡುತ್ತದೆ ಎಂದು ಅದು ಹೇಳಿದೆ.

ಪ್ರಧಾನ ಮಂತ್ರಿಗಳ ಆಪ್ ವ್ಯಕ್ತಿಗಳ ಮಾಹಿತಿಗಳನ್ನು ಸಂಗ್ರಹಿಸಲು ಮತ್ತು ಅವುಗಳ ದುರುಪಯೋಗಕ್ಕೆ ಬಳಕೆಯಾಗುತ್ತಿದೆ ಎಂಬ ಗಂಭೀರ ಆಪಾದನೆಗಳಿವೆ. ಇಂತಹ ಕಾರ್ಯಾಚರಣೆಗಳನ್ನು ಸಂಬಂಧಪಟ್ಟ ಕಂಪನಿಗಳು ಹೇಗೆ ನಡೆಸುತ್ತಿವೆ ಹಾಗೂ ಅವರ ಗಿರಾಕಿಗಳು ಯಾರು ಎಂಬುದನ್ನು ಕಂಡು ಹಿಡಿಯಲು ಒಂದು ಉನ್ನತ ಮಟ್ಟದ ತನಿಖೆಯನ್ನು ನಡೆಸಬೇಕು ಎಂದು ಕೇಂದ್ರ ಸಮಿತಿ ಆಗ್ರಹಿಸಿದೆ.

ಕರ್ನಾಟಕ ವಿಧಾನಸಭಾ ಚುನಾವಣೆ – 2018

VOTE CPI(M)



ಎಂ.ಎಸ್.ಹಡಪದ್
ರೋಣ
67



ಗೈಬು ಜೈನೇ ಖಾನ್
ರಾಮದುರ್ಗ
18




ಯಮುನಾ ಗಾಂವ್ಕರ್
ಹಳಿಯಾಳ
76



ಸುರೇಶ್ ಕಲ್ಲಾಗರ
ಬೈಂದೂರು
118







ಯಾದವ ಶೆಟ್ಟಿ
ಮೂಡಬಿದಿರೆ
201



ಮುನೀರ್ ಕಾಟಿಪಳ್ಳ
ಮಂಗಳೂರು ಉತ್ತರ
202




ಸುನೀಲ್ ಕುಮಾರ್ ಬಜಾಲ್
ಮಂಗಳೂರು ದಕ್ಷಿಣ
203



ನಿತಿನ್ ಕುತ್ತಾರ್
ಮಂಗಳೂರು
204

ಕೋಮುವಾದ-


ಸಿಪಿಐ(ಎಂ) ಪಕ್ಷದ ಅಭ್ಯರ್ಥಿಗಳು
ಮಾರುತಿ ಮಾನಪಡೆ
ಕಲಬುರಗಿ ಗ್ರಾಮೀಣ(ಮೀ)
43
ಜಿ.ನಾಗರಾಜ್
ಗಂಗಾವತಿ
62
ವಿ.ಎಸ್.ಶಿವಶಂಕರ್
ಕಂಪ್ಲಿ(ಮೀ)
91
ಜಿ.ವಿ.ಶ್ರೀರಾಮರೆಡ್ಡಿ
ಬಾಗೇಪಲ್ಲಿ
140
ಬಿ.ಮಾಳಮ್ಮ
ಹಗರಿಬೊಮ್ಮನಹಳ್ಳಿ (ಮೀ)
89
ರವಿಚಂದ್ರ ರೆಡ್ಡಿ
ಗೌರಿಬಿದನೂರು
139
ಪಿ.ಆರ್.ಸೂರ್ಯನಾರಾಯಣ
ಶ್ರೀನಿವಾಸಪುರ
144
ತಂಗರಾಜ್
ಕೆ.ಜಿ.ಎಫ್ (ಮೀ)
146
ಪ್ರತಾಪ್ ಸಿಂಹ
ದಾಸರಹಳ್ಳಿ
155
ಹೆಚ್.ಎನ್.ಗೋಪಾಲಗೌಡ
ಕೃಷ್ಣರಾಜಪುರ
151
ಡಿ.ಮಹದೇಶ್
ಆನೇಕಲ್(ಮೀ)
177
BIDAR
ಕಲಬುರಗಿ
YADGIR
ಚಿಕ್ಕಬಳ್ಳಾಪುರ
ಕೋಲಾರ
ಬೆಂಗಳೂರು
ಮುಕ್ತ, ಜನಪರ ಅಭಿವೃದ್ಧಿಗಾಗಿ... ಸಿಪಿಐ(ಎಂ) ಗೆ ನಿಮ್ಮ ಮತ

ಹಗರಿಬೊಮ್ಮನಹಳ್ಳಿ ಎಸ್.ಸಿ. ಮೀಸಲು ಕ್ಷೇತ್ರದ ಸಿಪಿಐ(ಎಂ) ಅಭ್ಯರ್ಥಿ ಬಿ. ಮಾಳಮ್ಮ

ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲೂಕಿನವರಾದ ಕಾಮ್ರೇಡ್ ಬಿ. ಮಾಳಮ್ಮ ನವರು ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಹಗರಿಬೊಮ್ಮನಹಳ್ಳಿ (ಪ.ಜಾ.ಮೀಸಲು) ವಿಧಾನಸಭಾ ಕ್ಷೇತ್ರದ ಸಿಪಿಐ(ಎಂ) ಪಕ್ಷದ ಅಭ್ಯರ್ಥಿ. ಪ್ರಸಕ್ತವಾಗಿ ಅವರು ಸಿಪಿಐ(ಎಂ) ರಾಜ್ಯ ಸಮಿತಿಯ ಆಹ್ವಾನಿತ ಸದಸ್ಯರು, ಬಳ್ಳಾರಿ ಜಿಲ್ಲಾ ಸಮಿತಿಯ ಕಾರ್ಯದರ್ಶಿ ಮಂಡಳಿ ಸದಸ್ಯರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.



1995 ರಲ್ಲಿ ಮಹಿಳಾ ಚಳುವಳಿಯ ಮೂಲಕ ಪಕ್ಷಕ್ಕೆ ಆಗಮಿಸಿದ್ದಾರೆ. ಕಾಂ.ಮಾಳಮ್ಮ ಅತ್ಯಂತ ಕಡುಬಡತನದ ದಲಿತ ಕುಟುಂಬದಲ್ಲಿ ಬೆಳೆದವರು. ಕೂಲಿ ಕೆಲಸವೇ ಕುಟುಂಬದ ಜೀವನಾಧಾರ. ಹೀಗಾಗಿ ಶಾಲೆಯ ಮೆಟ್ಟಿಲನ್ನು ಏರಲಾಗಲಿಲ್ಲ. ಅನಕ್ಷರತೆ ಜನ ಚಳುವಳಿಯಲ್ಲಿ ತೊಡಗಲು ಅಡ್ಡಿಯಾಗಲಿಲ್ಲ. ಆ ಬದ್ಧತೆಯ ಸಕ್ರಿಯತೆ ಅವರನ್ನು ಮುಖಂಡರಾಗಿ ಹೊರಹೊಮ್ಮುವಂತಾಗಿಸಿತು. ಈಗ ಪ್ರಸ್ತುತ ಕರ್ನಾಟಕ ರಾಜ್ಯ ದೇವದಾಸಿ ಮಹಿಳಾ ಸಂಘಟನೆಯ ರಾಜ್ಯ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. 2005–06 ರಲ್ಲಿ ಜಿಲ್ಲೆಯಲ್ಲಿ ಮತ್ತು ತಾಲೂಕಿನಲ್ಲಿ ದೇವದಾಸಿ ಮಹಿಳೆಯರೇ ಇಲ್ಲ ಎನ್ನುವಂತಹ ಸರ್ಕಾರದ ವರದಿಯ ಹಸಿ ಸುಳ್ಳನ್ನು ಬಯಲಿಗೆಳೆದು ದೇವದಾಸಿ ಮಹಿಳೆಯರನ್ನು ವ್ಯಾಪಕವಾಗಿ ಸಂಘಟಿಸಲಾಯಿತು. ಹಲವು ಧೀರೋದ್ಧಾತ ಹೋರಾಟಗಳೂ ನಡೆದವು. ಇದರ ಪ್ರತಿಫಲವಾಗಿ ಸರ್ಕಾರ ದೇವದಾಸಿ ಮಹಿಳೆಯರನ್ನು ಸರ್ವೆ ಮಾಡಿಸಬೇಕಾಗಿ ಬಂದು ಇಂದು ಸಾವಿರಾರು ದೇವದಾಸಿ ಮಹಿಳೆಯರು ಇದರ ಪ್ರಯೋಜನ ಪಡೆಯುತ್ತಿದ್ದಾರೆ.

400 ರೂ.ಗಳ ಮಾಸಾಶನದಿಂದ ಇಂದು 2000ರೂ.ಗಳವರೆಗೆ ಮಾಸಾಶನ ಪಡೆಯುವಲ್ಲಿ ಹೋರಾಟಗಳು ಯಶಸ್ಸನ್ನು ತಂದು ಕೊಟ್ಟಿವೆ. ದೇವದಾಸಿ ಪದ್ಧತಿ ವಿರುದ್ಧ ಹೋರಾಟಗಳು ತಾಲೂಕಿನಲ್ಲಿ ಅತಿ ಮಹತ್ವ ಪಡೆದುಕೊಂಡಿದೆ. ಇದರ ವಿರುದ್ಧದ ಹೋರಾಟದಲ್ಲಿ ಗ್ರಾಮೀಣ ಪ್ರದೇಶದ ಭೂಮಾಲಿಕ ಪಟ್ಟಭದ್ರ ಹಿತಾಸಕ್ತಿಗಳ ದೌರ್ಜನ್ಯವನ್ನು ಎದುರಿಸಬೇಕಾಯಿತು. ಈ ಹೋರಾಟಗಳ ಫಲವಾಗಿ ತಾಲೂಕಿನಲ್ಲಿ ಎಲ್ಲಾ ದೇವದಾಸಿ ಮಹಿಳೆಯರಿಗೆ 1400 ಮನೆಗಳನ್ನು, ಸಾಲ ಸೌಲಭ್ಯಗಳನ್ನು ಒದಗಿಸಲು ಸಾಧ್ಯವಾಗಿದೆ. ಇದರ ಜೊತೆಯಲ್ಲಿ ದೇವದಾಸಿ ಮಕ್ಕಳ ಸಂಘಟನೆಯನ್ನು ಕಟ್ಟಿ ಅವರ ಬೇಡಿಕೆಗಳಾದ ಭೂಮಿ, ಉದ್ಯೋಗ, ಶಿಕ್ಷಣದ ಪ್ರಶ್ನೆಗಳನ್ನು ತೆಗೆದುಕೊಂಡು ಹೋರಾಟ ಮಾಡಲಾಗಿದೆ. ದೇವದಾಸಿ ಮಹಿಳೆಯರ ಭೂಮಿ ಪ್ರಶ್ನೆ ಮುಂಚೂಣಿ ಹೋರಾಟವಾಗಿದೆ. ಈ ಪ್ರಶ್ನೆಗಳ ಮೇಲೆ ಸಾಕಷ್ಟು ಹೋರಾಟಗಳು ನಡೆದು ದೇವದಾಸಿ ಮಹಿಳೆಯರು ಮತ್ತು ಮಕ್ಕಳು 7 ದಿನಗಳ ಕಾಲ ಬಳ್ಳಾರಿ ಜೈಲಿನ ಸೆರೆವಾಸ ಕಾಣಬೇಕಾಗಿ ಬಂದಿತ್ತು. ದೇವದಾಸಿ ಪದ್ಧತಿಯಿಂದ ಹೊರ ತರುವುದರ ಭಾಗವಾಗಿ ದೇವದಾಸಿ ಮಹಿಳೆಯರ ಮದುವೆಗಳನ್ನು ಮಾಡಿಸಲಾಯಿತು. ಮಹಿಳೆಯರ ಮೇಲೆ ನಡೆದ ಅತ್ಯಾಚಾರ ಪ್ರಕರಣಗಳು, ದೌರ್ಜನ್ಯಗಳ ವಿರುದ್ಧವೂ ಹೋರಾಟ ನಡೆಸಿ ಕಾನೂನು ಕ್ರಮ ಕೈಗೊಳ್ಳಲು ಸಾಧ್ಯವಾಗಿದೆ. ಇಲ್ಲೆಲ್ಲಾ ಕಾಂ. ಮಾಳಮ್ಮನವರು ವಹಿಸಿದ ಮುಂಚೂಣಿಯ ಪಾತ್ರ ಗಮನಾರ್ಹ.

ದಲಿತರ ಮೇಲಿನ ಪ್ರಶ್ನೆಗಳು, ದಲಿತರ ಮೇಲಿನ ದೌರ್ಜನ್ಯಗಳ ವಿರುದ್ಧದ ತೀವ್ರ ತೆರನಾದ ಹೋರಾಟ, ಮಹಿಳಾ ದೌರ್ಜನ್ಯಗಳ ವಿರುದ್ಧ ಅನೇಕ ಹೋರಾಟಗಳನ್ನು ನಡೆಸಲಾಗಿದೆ. ತಾಲೂಕಿನ ಪ್ರಮುಖ ಪ್ರಶ್ನೆಗಳಾದ ಉದ್ಯೋಗ ಖಾತ್ರಿಯಲ್ಲಿ ಕೂಲಿಕಾರರಿಗೆ ಕೂಲಿ ಕೆಲಸ ಕೊಡಿಸುವ ಹೋರಾಟ, ರೈತರ ಭೂಮಿ ಪ್ರಶ್ನೆಗಳ ಮೇಲಿನ ಹೋರಾಟಗಳು, ತಾಲೂಕಿಗೆ ಶಾಶ್ವತ ನೀರಾವರಿ ಹೋರಾಟ, ಅದರಲ್ಲಿ ಪ್ರಮುಖವಾಗಿ ಮಾಲವಿ ಜಲಾಶಯಕ್ಕೆ ಶಾಶ್ವತ ನೀರು, ಚಿಲವಾರು ಬಂಡಿ ಏತ ನೀರಾವರಿ ಹೋರಾಟಗಳು ಅತ್ಯಂತ ಪ್ರಮುಖವಾದವುಗಳಾಗಿವೆ. ಸರ್ಕಾರ ಈ ಎರಡೂ ಯೋಜನೆಗಳನ್ನು ಮುಂಜೂರು ಮಾಡಿದ್ದು ಸಿಪಿಐ(ಎಂ) ಪಕ್ಷದ ಹೋರಾಟದ ಪ್ರತಿಫಲವಾಗಿದೆ.

ಸಿಪಿಐ(ಎಂ) ಪಕ್ಷದ ಪೂರ್ಣಾವಧಿ ಕಾರ್ಯಕರ್ತರಾಗಿರುವ ಕಾಂ. ಮಾಳಮ್ಮನವರು ಹಾಗೂ ಸಂಗಾತಿ ಕಾಂ. ಜಗನ್ನಾಥ್ ರವರದ್ದು ಅಂತರ್ಜಾತಿಯ ವಿವಾಹ. ಕಾಂ ಜಗನ್ನಾಥ್ ಸಹ ಪೂರ್ಣಾವಧಿ ಕಾರ್ಯಕರ್ತರಾಗಿದ್ದ ಅವರೂ ಪಕ್ಷದ ನಾಯಕರು.

ಗುರುಶಾಂತ್ ಎಸ್.ವೈ.

ಕರ್ನಾಟಕ ಜನಮತ 2018

ಕ್ಷೇತ್ರ ಸಮೀಕ್ಷೆ

ಕಂಪ್ಲಿ (ಎಸ್.ಟಿ. ಮೀಸಲು) ಕ್ಷೇತ್ರದ ಸಿಪಿಐ(ಎಂ) ಅಭ್ಯರ್ಥಿ ವಿ.ಶಿವಶಂಕರ್

ಬಳ್ಳಾರಿ ಜಿಲ್ಲೆಯ ಕಂಪ್ಲಿ (ಪ.ಪಂಗಡ) ವಿಧಾನಸಭಾ ಕ್ಷೇತ್ರದಿಂದ ಸಿಪಿಐ(ಎಂ) ಅಭ್ಯರ್ಥಿಯಾಗಿ ಸ್ಪರ್ದಿಸುತ್ತಿರುವ ಕಾಮ್ರೇಡ್ ವಿ.ಶಿವಶಂಕರ್ ರವರು ಪರಿಶಿಷ್ಟ ಪಂಗಡಕ್ಕೆ ಸೇರಿದ ಸಾಮಾನ್ಯ ರೈತ ಕುಟುಂಬದಲ್ಲಿ ಜನಿಸಿದವರು. ವಿಜಯನಗರ ಉಕ್ಕಿನ ಕಾರ್ಖಾನೆಗೆ ಸರಕಾರ ಇವರ ಕುಟುಂಬದ ಜಮೀನನ್ನು ಸ್ವಾಧೀನ ಪಡಿಸಿಕೊಂಡದ್ದರಿಂದ ಕುರುಗೋಡು ಬಳಿ ಬಾದನಟ್ಟಿ ಗ್ರಾಮಕ್ಕೆ ವಲಸೆ ಹೋಗಬೇಕಾಯಿತು. ಆದಾಗ್ಯೂ ಕಾಂ.ಶಿವಶಂಕರ್ ರವರು ತೋರಣಗಲ್ಲಿನ ಹಾಸ್ಟೆಲ್‌ನಲ್ಲಿದ್ದು ವಿದ್ಯಾಭ್ಯಾಸ ಮುಂದುವರಿಸಿದರು. ಅಲ್ಲಿ ಎಸ್.ಎಫ್.ಐ.ನ ಸಂಪರ್ಕಕ್ಕೆ ಬಂದ ಅವರು ಹಾಸ್ಟೆಲ್ ವಿದ್ಯಾರ್ಥಿಗಳ ಸಮಸ್ಯೆಗಳ ವಿರುದ್ಧ ನಡೆದ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿದರಲ್ಲದೇ ಆ ದೃಢ ಹೊರಾಟಕ್ಕೆ ಜಿಲ್ಲಾಧಿಕಾರಿಗಳೇ ಮಧ್ಯೆ ಪ್ರವೇಶಿಸಿ ಸಮಸ್ಯೆಗಳನ್ನು ಇತ್ಯರ್ಥ ಪಡಿಸಬೇಕಾಯಿತು. ಹೀಗೆ ವಿದ್ಯಾರ್ಥಿ ಚಳುವಳಿಯ ಮೂಲಕ ಪ್ರಜಾಸತ್ತಾತ್ಮಕ



ಚಳುವಳಿಯನ್ನು ಪ್ರವೇಶಿಸಿದ ಕಾಂ.ಶಿವಶಂಕರ್ ರವರು ಶಿಕ್ಷಣ ಮುಗಿಸಿ ಕುರುಗೋಡು ಪ್ರದೇಶದಲ್ಲಿ ರೈತ ಸಂಘಟನೆಯಲ್ಲಿ ಸಕ್ರಿಯರಾದರು. ಪ್ರಸಕ್ತವಾಗಿ ಅವರು ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಸಮಿತಿಯ ಅಧ್ಯಕ್ಷರಾಗಿ, ಸಿಪಿಐ(ಎಂ) ಪಕ್ಷದ ಜಿಲ್ಲಾ ಸಮಿತಿಯ ಸದಸ್ಯರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಕುರುಗೋಡು ಪ್ರದೇಶದಲ್ಲಿ ಭೂಮಾಲೀಕರ ಹಿಡಿತ ಬಿಗಿಯಾಗಿದ್ದ ಕಾಲದಲ್ಲಿ ರೈತ ಸಂಘಟನೆಗೆ ಮುಂದಾದಾಗ ರೈತ ಸಂಘದ ಕಾರ್ಯಕರ್ತರು ಅಲ್ಲಿನ ಭೂಮಾಲೀಕರ ದಬ್ಬಾಳಿಕೆಗೆ ತುತ್ತಾಗಬೇಕಾಯಿತು. ರಾಜಶೇಖರಗೌಡ ಎನ್ನುವ ಭೂಮಾಲೀಕ ಕಾಂ.ಶಿವಶಂಕರ್‌ರವರ ಬಟ್ಟೆ ಬಿಚ್ಚಿಸಿ ದೌರ್ಜನ್ಯ ನಡೆಸಿದ. ಆದರೆ ಇದಕ್ಕೆ ಜಗ್ಗದೇ ಚಳುವಳಿಯನ್ನು ನಡೆಸಿದ್ದರಿಂದ ಭೂಮಾಲೀಕರು ಹಿಮ್ಮೆಟ್ಟಬೇಕಾಗಿ ಬಂತು. ಇದು ಇಡೀ ಆ ಪ್ರದೇಶದಲ್ಲಿ ದುಡಿಯುವ ಜನಕ್ಕೆ ಸ್ಫೂರ್ತಿಯನ್ನು ತಂದಿತು, ರೈತ ಸಂಘಟನೆ ಬೆಳೆಯಿತು. ಪಟ್ಟಭದ್ರ ಶಕ್ತಿಗಳಿಗೆ ಸವಾಲು ಹಾಕಿತು. ಮುಂದೆ ಮೆಕ್ಕೆ ಜೋಳ, ಮೆಣಸಿನಕಾಯಿ, ಹತ್ತಿ ಫಸಲಿಗೆ ಬೆಂಬಲಿತ ಬೆಲೆ ನಿಗದಿಯಾಗಬೇಕೆಂದು ತೀವ್ರತರನಾದ ಹೋರಾಟಗಳು ನಡೆದವು. ಎ.ಪಿ.ಎಂ.ಸಿ ಆಡಳಿತ ಮಂಡಳಿಯ ವಿರುದ್ಧ ನಡೆದ ಹೋರಾಟ ಗಮನಾರ್ಹವಾದವು. ಬೆಂಬಲ ಬೆಲೆಗಾಗಿ ನಡೆದ ಹೋರಾಟ ವ್ಯಾಪಕ ರಾಜಕೀಯ ಸ್ವರೂಪವನ್ನೂ ಪಡೆದುಕೊಂಡಿತು. ರೈತರ ಹೋರಾಟಕ್ಕೆ ಬೆಂಬಲಿಸಿ ಬಳ್ಳಾರಿ ಬಂದ್ ಸಹ ನಡೆಯಿತು. ಇದು ಇಡೀ ಜಿಲ್ಲೆಯನ್ನು ಪ್ರಭಾವಿಸಿದ ಹೋರಾಟ. ಇಲ್ಲೆಲ್ಲಾ ಕಾಂ.ಶಿವಶಂಕರ್ ರವರ ಮುಂಚೂಣಿಯ ಪಾತ್ರ ಅತ್ಯಂತ ಪ್ರಮುಖವಾದುದು.

1992 ರಲ್ಲಿ ಪಕ್ಷಕ್ಕೆ ಸದಸ್ಯರಾದ ಕಾಂ ಶಿವಶಂಕರ್ ರವರು ರೈತ–ಕೂಲಿಕಾರರ ಚಳುವಳಿಯಲ್ಲದೇ ದಲಿತರ ಪ್ರಶ್ನೆ, ಅಲೆಮಾರಿ ಬುಡಕಟ್ಟು ಸಮುದಾಯಗಳ ಸಮಸ್ಯೆಗಳ ವಿರುದ್ಧವೂ ಹಲವು ಯಶಸ್ವಿ ಹೋರಾಟಗಳಿಗೆ ನೇತೃತ್ವ ನೀಡಿದ್ದಾರೆ. ಭೂಮಿ, ನಿವೇಶನ, ತುಂಗಭದ್ರಾ ಒಳಗೊಂಡ ನೀರಾವರಿ ಪ್ರಶ್ನೆಗಳು ಮುಂತಾದವುಗಳಿಗೆ ಹೋರಾಟಗಳನ್ನು ಸಂಘಟಿಸಲಾಗಿದೆ. ಎಸ್.ಟಿ. ಮೀಸಲಾತಿಗಾಗಿ, ಜಾತಿ ದಮನದ ವಿರುದ್ಧ, ಹಲವು ಸಾಮಾಜಿಕ ಪ್ರಶ್ನೆಗಳಿಗೂ ಸ್ಪಂದಿಸಿದ್ದಾರೆ. ರೈತ ಸಮುದಾಯದೊಂದಿಗೆ ಅವರ ನಿರಂತರ ಸಂಪರ್ಕದಿಂದಾಗಿ ಕಳೆದ 25 ವರುಷಗಳಿಂದಲೂ ಬಳ್ಳಾರಿ ಜಿಲ್ಲಾ ಕೃಷಿಕ ಸಮಾಜದ ಸದಸ್ಯರಾಗಿ, ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ.

ಕಾಂ.ಶಿವಶಂಕರ್ ರವರು ಒಮ್ಮೆ ಜಿಲ್ಲಾ ಪಂಚಾಯತ್ ಚುನಾವಣೆಯಲ್ಲಿ, ಕಳೆದ ಬಾರಿ ವಿಧಾನ ಸಭಾ ಚುನಾವಣೆಯಲ್ಲಿ ಇದೇ ಕ್ಷೇತ್ರದಿಂದ ಸಿಪಿಐ(ಎಂ) ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು.

ಹಗರಿಬೊಮ್ಮನಹಳ್ಳಿಯಲ್ಲಿ ಅಂತರ್‌ಜಾತಿ ವಿವಾಹ

ಹಗರಿಬೊಮ್ಮನಹಳ್ಳಿ ತಾಲೂಕಿನ ಏಣಿಗಿ ಗ್ರಾಮದ ಪುಷ್ಪ ಮತ್ತು ರುದ್ರೇಶ ರವರು ದಿನಾಂಕ : 4/4/2018 ರಂದು ಸಮಯ: 11–30 ಕ್ಕೆ ನಗರದ ಈಶ್ವರ ದೇವಸ್ಥಾನದಲ್ಲಿ ಇಬ್ಬರು ಒಪ್ಪಿ ಮದುವೆಯಾದರು.

ಈ ಮದುವೆ ಅಂತರ್‌ಜಾತಿ ಮದುವೆಗೆ ಮಾದರಿಯಾಗಿದೆ. ಪುಷ್ಪ ಎಂಬುವವರು ಹರಿಜನರಾಗಿದ್ದೂ ಮತ್ತು ರುದ್ರೇಶ್ ಎಂಬುವವರು ಲಿಂಗಾಯಿತ ಸಮುದಾಯದವರಾಗಿದ್ದು ಈ ಇಬ್ಬರ ತಂದೆ/ತಾಯಿಯರನ್ನು ಒಪ್ಪಿಸಿ ಮದುವೆ ಮಾಡಿಸುವಲ್ಲಿ ಯಶಸ್ವಿಯಾಗಿದೆ. ಈ ಮದುವೆ ಮಾಡಿಸುವ ಎಲ್ಲಾ ಜವಾಬ್ದಾರಿಯನ್ನು ದೇವದಾಸಿ ಮಹಿಳಾ ವಿಮೋಚನ ಸಂಘದ ರಾಜ್ಯ ಅಧ್ಯಕ್ಷರಾದ ಕಾ॥ ಬಿ. ಮಾಳಮ್ಮ, ಕೆಪಿಆರ್‌ಎಸ್ ತಾಲೂಕ ಅಧ್ಯಕ್ಷರಾದ ಗಾಳೆಪ್ಪ ವರದಾಪುರ ಡಿಹೆಚ್‌ಎಸ್ ಹಾಗೂ ದೇವದಾಸಿ ಮಹಿಳಾ ಮಕ್ಕಳ ಸಂಘದ ತಾಲೂಕ ಮುಖಂಡರಾದ ಸಂತೋಷ ಸೋನ್ನ ಹಾಗೂ ಎಸ್‌ಎಫ್‌ಐ ಜಿಲ್ಲಾ ಅಧ್ಯಕ್ಷರಾದ ದೊಡ್ಡಬಸವರಾಜ್ ರವರು ನಿರ್ವಹಿಸಿ ಮದುವೆ ಮಾಡಿಸಿಕೊಟ್ಟರು.

2 ಏಪ್ರಿಲ್ 2018 ರಂದು ದೇವದಾಸಿ ಮಹಿಳಾ ವಿಮೋಚನ ಸಂಘದ ಕಛೇರಿಯಲ್ಲಿ ಎರಡು ಕಡೆಯವರನ್ನು ಕರೆಸಿ ಜಾತಿ ವ್ಯವಸ್ಥೆಯ ಕುರಿತು ಮಾರ್ಗದರ್ಶನ ಮಾಡಿ ಮನವೊಲಿಸಲಾಯಿತು.

ಪುಷ್ಪ & ರುದ್ರೇಶ್ ಇಬ್ಬರು ಪರಸ್ಪರ ಎರಡು ವರ್ಷಗಳಿಂದ ಪ್ರೀತಿ ಮಾಡುತ್ತಿದ್ದರು. ಇವರು ಯಾರಿಗೂ ತಿಳಿಸಿರಲಿಲ್ಲ. ಇವರು 24 ಮಾರ್ಚ್ 2018 ರಂದು ಮನೆ ಬಿಟ್ಟು ಹೋಗಿದ್ದಾಗ ಸಮಯ ಸಂಜೆ 6 ಗಂಟೆ, ಇವರು ಹೋಗಿರುವ ವಿಷಯ 25 ಮಾರ್ಚ್ 2018 ರಂದು ತಿಳಿದಾಗ ಸಂಘಟನೆಯ ಗಮನಕ್ಕೆ ತಂದರು. ನಂತರ ಅವರಿಬ್ಬರನ್ನು ಪತ್ತೆ ಮಾಡುವ ಪ್ರಯತ್ನವನ್ನು ಸಂಪೂರ್ಣವಾಗಿ ವೀರಭದ್ರಗೌಡ ವಹಿಸಿಕೊಂಡಿದ್ದರು.



ಇವರು ಸಾಗರದಲ್ಲಿ ಇದ್ದಾರೆ ಎಂದು ತಿಳಿದ ಕೂಡಲೆ ವೀರಭದ್ರಗೌಡ ರವರು ಕಾ॥ ಮಾಳಮ್ಮ ರವರಿಗೆ ವಿಷಯ ತಿಳಿಸಿದರು. ಇದಕ್ಕಿಂತ ಮುಂಚೆ ಹುಡುಗಿಯನ್ನು ಅಪಹರಿಸಿದ್ದಾರೆ ಎಂದು ರುದ್ರೇಶರವರ ಮೇಲೆ ಎಫ್‌ಐಆರ್ ಹಾಕಿಸಲಾಯಿತು. ಹುಡುಗಿಯ ತಾಯಿ ಕೊಟ್ರಮ್ಮ ರವರು ಈ ಕೇಸನ್ನು ತಂಬ್ರಹಳ್ಳಿ ಪೋಲೀಸ್ ಠಾಣೆಯಲ್ಲಿ ಹಾಕಿದ್ದರು. ನಂತರ ಹುಡುಗಿ ಮತ್ತು ಹುಡುಗ ಸಿಕ್ಕಾಗ ನೇರವಾಗಿ ಪೋಲೀಸ್ ಠಾಣೆಗೆ ಸಂಘಟನೆಯ ಮುಖಂಡರೆಲ್ಲರು ಹುಡುಗನನ್ನು ಬಂಧಿಸದಂತೆ ತಡೆದು ಜಾಮೀನು ನೀಡಿದ ಕೂಡಲೆ ಅವರಿಗೆ ಮದುವೆಯಾಗಲು ಅವಕಾಶ ಮಾಡಿಕೊಟ್ಟರು.

4 ಏಪ್ರಿಲ್ 2018 ರಂದು ನಡೆದ ಈ ಅಂತರ್‌ಜಾತಿ ಮದುವೆಯಲ್ಲಿ ಹುಡುಗಿಯ ತಂದೆ ತಾಯಿ ಮತ್ತು ಹುಡುಗನ ಸ್ನೇಹಿತರು ಅವರ ಸಂಬಂಧಿಕರು ಹಾಗೂ ತಂದೆ, ತಾಯಿ ಪರೋಕ್ಷವಾಗಿ ಭಾಗವಹಿಸಿದ್ದರು. ದೇವದಾಸಿ ಮಹಿಳಾ ವಿಮೋಚನ ಸಂಘದ ರಾಜ್ಯ ಅಧ್ಯಕ್ಷರು ಬಿ. ಮಾಳಮ್ಮ ದೇವದಾಸಿ ಮಕ್ಕಳ ಸಂಘದ ಮುಖಂಡರಾದ, ಸಂತೋಷ ಸೊನ್ನ, ಕೆಪಿಆರ್‌ಎಸ್ ತಾಲೂಕ ಅಧ್ಯಕ್ಷರಾದ ಗಾಳೆಪ್ಪ ವರದಾಪುರ, ಸಿಪಿಐ(ಎಂ) ಗ್ರಾಮ ಘಟಕದ ಸದಸ್ಯರಾದ ವೀರಾಭದ್ರಗೌಡ, ಎಸ್‌ಎಫ್‌ಐ ಜಿಲ್ಲಾ ಅಧ್ಯಕ್ಷರಾದ ದೊಡ್ಡಬಸವರಾಜ, ಸಿಐಟಿಯು, ಸಿಪಿಐ(ಎಂ) ತಾಲೂಕ ಕಾರ್ಯದರ್ಶಿ ಎಸ್. ಜಗನ್ನಾಥಾ, ಸಿಪಿಐ(ಎಂ) ನ ಜಿಲ್ಲಾ ಕಾರ್ಯದರ್ಶಿಯಾದ ಆರ್. ಎಸ್. ಬಸವರಾಜ, ಹುಡುಗಿಯ ತಾಯಿ ಕೊಟ್ರಮ್ಮ, ತಂದೆ ದುರುಗಪ್ಪ, ದೇವದಾಸಿ ವಿಮೋಚನ ಸಂಘದ ತಾಲೂಕ ಕಾರ್ಯದರ್ಶಿ ಚಾಂದ್ ಬೀ ಮತ್ತು ಅಂಜಿನವ ಮದುವೆಯಲ್ಲಿ ಭಾಗವಹಿಸಿದ್ದರು.

ಬಿ. ಮಾಳಮ್ಮ

ರೋಣ: ಅಭಿವೃದ್ಧಿಯಿಂದ ವಂಚಿತವಾದ ಕ್ಷೇತ್ರ

ಮಹೇಶ ಪತ್ತಾರ

ಗದಗ ಜಿಲ್ಲೆಯಲ್ಲಿ ಗದಗ, ರೋಣ, ನರಗುಂದ ಮತ್ತು ಶಿರಹಟ್ಟಿ (ಮೀಸಲು) ನಾಲ್ಕು ವಿಧಾನಸಭಾ ಕ್ಷೇತ್ರಗಳಿವೆ. ಇದರಲ್ಲಿ ಕಳೆದ 2013ರ ಚುನಾವಣೆಯಲ್ಲಿ ಬಿಜೆಪಿ ಪ್ರಾಬಲ್ಯವಿದ್ದಂತಹ ನಾಲ್ಕು ಕ್ಷೇತ್ರಗಳಲ್ಲೂ ಬಿಜೆಪಿಯನ್ನು ಸೋಲಿಸಿ ಕಾಂಗ್ರೆಸ್ ಪಕ್ಷ ನಾಲ್ಕು ಕ್ಷೇತ್ರಗಳಲ್ಲಿ ಗೆಲ್ಲುವ ಮೂಲಕ ತನ್ನ ಅಧಿಪತ್ಯವನ್ನು ಸ್ಥಾಪಿಸಿತ್ತು. ರೋಣ ಕೇತ್ರದಲ್ಲಿ ಅಂದಿನ ರಾಜಕೀಯ ಪರಸ್ಥಿತಿಯಲ್ಲಿ ಬಿಜೆಪಿಯ ವಿಭಜನೆ ಯಾವುದೇ ಪರಿಣಾಮ ಬೀರಿಲ್ಲ. ಕಾಂಗ್ರೆಸ್ ಪಕ್ಷ ತನ್ನ ಸ್ವಂತ ಬಲದ ಮೇಲೆ ಗೆಲವನ್ನು ದಾಖಲಿಸುವಲ್ಲಿ ಯಶ ಕಂಡಿತ್ತು.



ಕ್ಷೇತ್ರ ಸಮೀಕ್ಷೆ

ರೋಣ: ಪ್ರಸ್ತುತ ಚುನಾವಣೆಯಲ್ಲಿ ಸ್ಪರ್ಧೆ:

ರೋಣ ಪಟ್ಟಣದವರಾದ ಸಧ್ಯ ಕಾಂಗ್ರೆಸ್ ಶಾಸಕ ಜಿ.ಎಸ್.ಪಾಟೀಲ ಅವರ ಸ್ಪರ್ಧೆ ಬಹುತೇಕ ಖಚಿತವಾಗಿದೆ. ಗಜೇಂದ್ರಗಡ ಪಟ್ಟಣದವರಾದ ಮಾಜಿ ಸಚಿವ ಕಳಕಪ್ಪ ಬಂಡಿ ಅವರಿಗೆ ಬಿಜೆಪಿಯ ಟಿಕೇಟ್ ಬಹುತೇಕ ಖಚಿತವಾಗಿದೆ. ಜೆಡಿಎಸ್ ಪಕ್ಷಕ್ಕೆ ಹೇಳಿಕೊಳ್ಳುವ ಯಾವುದೇ ರೀತಿಯ ರಾಜಕೀಯ ನೆಲೆ ಇಲ್ಲವಾಗಿದೆ. ಜೆಡಿ(ಎಸ್) ಅಭ್ಯರ್ಥಿಯ ಆಯ್ಕೆ ಮಾಡುವ ವಿಚಾರದಲ್ಲಿ ಗೊಂದಲ ಏರ್ಪಟ್ಟಿದೆ. ರವೀಂದ್ರ ದೊಡ್ಡಮೇಟಿ ಅಭ್ಯರ್ಥಿಯಾಗುವ ಸಾಧ್ಯತೆ ಇದೆ. ಜೆಡಿ(ಎಸ್) ಟಿಕೇಟ್ ಗ್ಯಾರಂಟಿ ಇಲ್ಲದೇ ಇರುವುದರಿಂದ ಕುರುಬ ಸಮಾಜದ ಎಚ್.ಎಸ್. ಸೋಂಪುರ ವರ್ತೂಲ ಕಾಂಗ್ರೆಸ್‌ನಿಂದ ಸ್ಪರ್ಧಿಸಲು ಮುಂದಾಗಿದ್ದಾರೆ.



ಸದಾ ಜನರ ಮಧ್ಯ ಕೆಲಸ ಮಾಡುತ್ತಿರುವ ಸಿಪಿಐ(ಎಂ) ಪ್ರಥಮ ಬಾರಿ ಈ ಕ್ಷೇತ್ರದಿಂದ ಸ್ಪರ್ಧಿಸಲು ವ್ಯಾಪಕ ತಯಾರಿ ನಡೆಸಿದೆ. ರೋಣ ಕ್ಷೇತ್ರದಲ್ಲಿ ರಾಜಕೀಯ ಅಖಾಡಾ ಸಜ್ಜಾಗಿದ್ದು ಪ್ರಚಾರ, ರಾಜಕೀಯ ತಂತ್ರ ಕುತಂತ್ರಗಳನ್ನು ಹೆಣೆಯಲಾಗುತ್ತಿದೆ. ಆಮೀಷವೊಡ್ಡುವ, ಹಣದ ಹೊಳೆ ಹರಿಸುವ ಸಾಧ್ಯತೆಗಳನ್ನು ಅಲ್ಲಗೆಳೆಯಲಾಗದು. ಕ್ಷೇತ್ರದಲ್ಲಿ 2.25 ಲಕ್ಷ ಮತದಾರರಿದ್ದಾರೆ. 265 ಬೂತ್‌ಗಳಿವೆ. 97 ಗ್ರಾಮಗಳು 2 ಪುರಸಭೆಗಳು 1 ಪಟ್ಟಣ ಪಂಚಾಯತಗಳಿವೆ.

ಜಾತಿ ಸಮೀಕರಣ :

ಕ್ಷೇತ್ರದಲ್ಲಿ ಲಿಂಗಾಯತ ಪ್ರಾಬಲ್ಯವಿದೆ. ಮುಸ್ಲಿಂ ಎರಡನೇ ಸ್ಥಾನದಲ್ಲಿದೆ. ಕುರುಬ ಸಮುದಾಯದ ನಾಯಕರು ಸಾಮಾಜಿಕ ನ್ಯಾಯ ನೀಡುವಲ್ಲಿ ಕಾಂಗ್ರೆಸ್ ಬಿಜೆಪಿ ರಾಜಕೀಯವಾಗಿ ಕಡೆಗಣಿಸಿವೆ ಎಂದು ಧ್ವನಿ ಎತ್ತಿದ್ದಾರೆ. ಹಲವಾರು ಕೆಳ ಸಣ್ಣ ಸಣ್ಣ ಸಮುದಾಯಗಳು ಇದ್ದು ಅವುಗಳಿಗೆ ಯಾವುದೇ ಸಾಮಾಜಿಕ ನ್ಯಾಯ ದೊರಕಿಲ್ಲ ಎನ್ನುವ ಕೊರಗು ಕೇಳಿ ಬರುತ್ತಿದೆ.

ಅಭಿವೃದ್ಧಿಯಿಂದ ವಂಚಿತವಾದ ಕ್ಷೇತ್ರ :

ರೋಣ ವಿಧಾನಸಭಾ ಕ್ಷೇತ್ರ ಒಂದು ಹಿಂದುಳಿದ ಕ್ಷೇತ್ರವಾಗಿದೆ. ಸಾಧ್ಯತೆಗಳು ಇದ್ಯಾಗ್ಯೂ ನೀರಾವರಿ ಯೋಜನೆಗಳನ್ನು, ಕೃಷಿ ಆಧಾರಿತ ಕೈಗಾರಿಕೆಗಳನನ್ನು ರೂಪಿಸಲು ರಾಜಕೀಯ ಇಚ್ಚಾಶಕ್ತಿಯ ಕೊರತೆ ಎದ್ದು ಕಾಣುತ್ತಿದೆ. ದಶಕಗಳಿಂದ ಮಲಪ್ರಭಾ ಕೊನೆಅಂಚಿನ ನೀರಾವರಿ ಯೋಜನೆ ನೆನೆಗುದಿಗೆ ಬಿದ್ದಿದ್ದರಿಂದ ಒಂದು ಹನಿ ನೀರನ್ನು ಬಳಸಿಕೊಳ್ಳಲು



ಸಾಧ್ಯವಾಗಿಲ್ಲ. 10 ಗ್ರಾಮಗಳ 10 ಸಾವಿರ ಎಕರೆ ಭೂಮಿಗೆ ನೀರುಣಿಸುವ ಕೃಷ್ಣಾ ಬಿ ಸ್ಕೀಂ ಸೂಕ್ಷ್ಮ ನೀರಾವರಿ ಯೋಜನೆ ಇದೇ ಅನ್ನುವುದೇ ಇಲ್ಲಿಯ ಜನಪ್ರತಿನಿಧಿಗಳಿಗೆ ಗೊತ್ತಿಲ್ಲದೇ ಇರುವಾಗ ಸಿಪಿಐ(ಎಂ) ನಾಯಕತ್ವ ಇತರೆ ರೈತಮುಖಂಡರೊಂದಿಗೆ ಸೇರಿ ಯೋಜನೆಯ ಜಾರಿಗಾಗಿ ತೀವ್ರ ಹೋರಾಟವನ್ನು ನಡೆಸುತ್ತಿದೆ. ಇನ್ನೂ ಕುಡಿಯುವ ನೀರಿನ ಸಮಸ್ಯೆ ಗಂಭೀರವಾಗಿದೆ. ಕುಡಿಯುವ ನೀರಿನ ಮಹತ್ವಾಕಾಂಕ್ಷೆಯ 100 ಕೋಟಿ ರೂಪಾಯಿ ವೆಚ್ಚದ ಜಿಗಳೂರು ಕೆರೆ ಅಭಿವೃದ್ಧಿ ದಶಕಗಳಿಂದ ನೆನಗುದಿಗೆ ಬಿದ್ದಿದೆ. ಶಾಶ್ವತ ಕುಡಿಯುವ ನೀರಿನ ಯೋಜನೆಯನ್ನು ರೂಪಿಸಲು ಮುಂದಾಗದೇ ಸಧ್ಯದ ಶಾಸಕರು ಕುಡಿಯುವ ನೀರಿನ ಕೆಲ ಟ್ಯಾಂಕರಗಳನ್ನು ತಮ್ಮ ರಾಜಕೀಯ ಪ್ರಚಾರದ ಪೋಸ್ಟರ್ ಅಂಟಿಸಿ ಕಳಿಸುತ್ತಿರುವುದು ನಾಚಿಗೇಡಿನ ಸಂಗತಿಯಾಗಿದೆ. ತಮ್ಮದೇ ಸರಕಾರವಿದ್ದಾಗ್ಯೂ ಸರಕಾರದಿಂದ ಖರೀದಿಸಿದ ಜಮೀನಿನಲ್ಲಿ ಬಡವರಿಗೆ ನಿವೇಶನಗಳನ್ನು ಹಂಚಲು ಮತ್ತು ಮನೆಗಳನ್ನು ನಿರ್ಮಿಸಲು ಶಾಸಕರಿಂದ ಸಾಧ್ಯವಾಗಿಲ್ಲ. ಗಜೇಂದ್ರಗಡ, ನೆರೇಗಲ್, ರೋಣ ಪುರಸಭೆಗಳಲ್ಲಿ ಈ ವರೆಗೂ ಒಳಚರಂಡಿ ಯೋಜನೆಯನ್ನು ರೂಪಿಸಲಾಗಿಲ್ಲ. ಶಾಸಕರ ಊರಾದ ರೋಣ ಇಂದಿಗೂ ಒಂದು ದೊಡ್ಡ ಹಳ್ಳಿಯಾಗಿಯೇ ಇದೆ. ಈ ಕ್ಷೇತ್ರದ ಲಕ್ಷಾಂತರ ಜನತೆಗೆ ಒಂದು ಸುಸಜ್ಜಿತವಾದ ಆಸ್ಪತ್ರೆ ಇಲ್ಲದೇ ಇರುವುದರಿಂದ ಚಿಕಿತ್ಸೆಗಾಗಿ ಹತ್ತಿರದ ತಾಲೂಕು, ಜಿಲ್ಲಾ ಕೇಂದ್ರಗಳಿಗೆ ಅಲೆಯುವಂತಾಗಿದೆ. ಗ್ರಾಮೀಣ ರಸ್ತೆಗಳು ಸಮರ್ಪಕವಾಗಿಲ್ಲ. ಉದ್ಯೋಗ ಖಾತ್ರಿ ಯೋಜನೆಯನ್ನು ಸಮರ್ಪಕವಾಗಿ ಜಾರಿಮಾಡಲು ಯಾವುದೇ ಕ್ರಮವಹಿಸಿಲ್ಲ. ಅಗತ್ಯ ಅವಕಾಶಗಳಿಲ್ಲದೆ ಶೈಕ್ಷಣಿಕವಾಗಿಯೂ ಕ್ಷೇತ್ರ ಹಿಂದುಳಿದಿದೆ.

ಹೀಗೆ ಕ್ಷೇತ್ರದಲ್ಲಿ ಯಾವುದೇ ವಿಶೇಷ ಅಭಿವೃದ್ಧಿಗಳಿಲ್ಲ, ಅಲ್ಲದೇ ಜನತೆಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಶಾಸಕರು ವಿಶೇಷ ಮುತವರ್ಜಿ ವಹಿಸಲೇ ಇಲ್ಲ. ಭೂಮಾಲಿಕ ಪಳೆಯುಳಿಕೆಯ ವಾರಸುದಾರರಾಗಿರುವ ಅದೇ ಗತ್ತಿನಲ್ಲಿರುವ ಸಧ್ಯದ ಶಾಸಕರು ಒಂದೆಡೆಯಾದರೇ ಇನ್ನು ಬಿಜೆಪಿಯ ಮಾಜಿ ಶಾಸಕರು ಕ್ಷೇತ್ರದ ಜನತೆಯ ಪ್ರಶ್ನೆಗಳಿಗಾಗಿ ಈ ಅವಧಿಯಲ್ಲಿ ಯಾವುದೇ ಹೋರಾಟಗಳನ್ನು ನಡೆಸಲಿಲ್ಲ ಬದಲಾಗಿ ಗುಂಡಾಗಿರಿ, ದಬ್ಬಾಳಿಗೆ ನಡೆಸುವಲ್ಲಿಯೇ ಕಾಲ ಕಳೆದರು. ಹೇಗಾದರೂ ಮಾಡಿ ಹಣ ಬಲ ಮತ್ತು ಜಾತಿ ಬಲದಿಂದ ಶಾಸಕರಾಗಬಹುದೆಂಬ ಅಹಂ ಜನತೆಯ ಮತ್ತು ಕ್ಷೇತ್ರದ ಅಭಿವೃದ್ಧಿಯ ನಿಷ್ಕಾಳಜಿಗೆ ಕಾರಣವಾಗಿರಬಹುದು.

ಈ ಹಿನ್ನೆಲೆಯಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಯ ಹಾಲಿ ಮತ್ತು ಮಾಜಿ ಶಾಸಕರ ದುರಾಡಳಿತ, ಗೂಂಡಾಗಿರಿ, ಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸಗಳಾಗದೇ ಇರುವುದು ಮತ್ತು ಕ್ಷೇತ್ರದಲ್ಲಿ ಹಲವಾರು ಗಂಭೀರ ಸಮಸ್ಯೆಗಳು ಇರುವುದರಿಂದ ಕ್ಷೇತ್ರದ ಜನತೆ ಬೇಸತ್ತಿದ್ದಾರೆ. ಹೊಸ ಭರವಸೆಯ ಪರ್ಯಾಯವನ್ನು ನಿರೀಕ್ಷಿಸುತ್ತಿದ್ದಾರೆ. ಬಡ ಮತ್ತು ಜನಸಾಮಾನ್ಯರಲ್ಲಿ ರೈತ ಕಾರ್ಮಿಕ, ಬಡ ಹಾಗೂ ನಾಗರಿಕರ ಪ್ರಶ್ನೆಗಳಿಗಾಗಿ ನಿರಂತರವಾಗಿ ಹೋರಾಟಗಳನ್ನು ರೂಪಿಸುತ್ತಾ ಬಂದಿರುವ ಸಿಪಿಐ(ಎಂ) ಸ್ಪರ್ಧೆ ಪರ್ಯಾಯ ರಾಜಕೀಯದ ಯೋಚನೆಗೆ ದಾರಿಮಾಡಿಕೊಟ್ಟಿದೆ. ●

ಕೆಜಿಎಫ್ ಸಮುದಾಯ ವಿಶ್ವ ರಂಗಭೂಮಿ ದಿನಾಚರಣೆ-2018

ದಿನಾಂಕ 27.03.2018 ರ ಸಮುದಾಯ ಕೆಜಿಎಫ್ ಘಟಕದಲ್ಲಿ "ವಿಶ್ವ ರಂಗಭೂಮಿ ದಿನಾಚರಣೆ"ಯನ್ನು ಬೆಮೆಲ್ ನಗರದಲ್ಲಿರುವ ನಾಟಕರತ್ನ ಗುಬ್ಬಿವೀರಣ್ಣ ರಂಗಮಂಟಪದಲ್ಲಿ ವಿಜೃಂಭಣೆಯಿಂದ ಆಚರಿಸಲಾಯಿತು. ಅಂತರ್ ರಾಷ್ಟ್ರೀಯ ರಂಗಭೂಮಿ ಸಂಸ್ಥೆಯ ಈ ಬಾರಿ ವಿಶ್ವದ ಐದು ರಂಗಕರ್ಮಿಗಳ ಸಂದೇಶಗಳನ್ನು, ಏಷಿಯಾ ಫೆಸಿಫಿಕ್(ಭಾರತ) ಶ್ರೀ ರಾಮ್ ಗೋಪಾಲ್ ಬಜಾಜ್, ಅರಬ್ ದೇಶಗಳ (ಲೆಬನಾನ್) ಮಾಯಾ ಝುಬೀಬ್, ಯೂರೋಪ್ (ಯು.ಕೆ.)ಸೈಮನ್ ಮ್ಯಾಕ್ ಬರ್ನಿ, ಅಮೇರಿಕ (ಮೆಕ್ಸಿಕೋ)ಸಬೀನ್ ಬರ್ಮನ್, ಹಾಗೂ ಆಫ್ರೀಕಾ (ಐವರಿಕೋಸ್ಟ್) ಲೈಕಿಂಗ್ ಇವರುಗಳು ನೀಡಿದ್ದರು. ಅದರಲ್ಲಿ ಲೆಬನಾನ್ ನ ಮಾಯಾ ಝುಬೀಬ್ ಅವರ ಮೂಲ ಸಂದೇಶವನ್ನು ಕನ್ನಡಕ್ಕೆ ಶ್ರೀ ಅಚ್ಯುತ ರವರು ಅನುವಾದಿಸಿದ್ದರು. ಇದನ್ನು ಶ್ರೀ ಆರ್.ಡಿ ಅಲಿಕ್ ರವರು ವಾಚಿಸಿದರು.

ಈ ಸಂದರ್ಭದಲ್ಲಿ ಸಮುದಾಯ ಘಟಕದ ಹಿರಿಯ ರಂಗಕಲಾವಿದರಾದ ಶ್ರೀ ಆರ್.ಡಿ.ಫಿಲಿಪ್ ಮತ್ತು ಸ್ಥಳೀಯ ಹಿರಿಯ ಯಕ್ಷಗಾನ ಕಲಾವಿದರಾದ ಶ್ರೀ ಕೆ.ಲಕ್ಷ್ಮಣ್ ಕುಮಾರ್ ರವರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು.

ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಪೂರ್ವ ಪ್ರಾಥಮಿಕ ಹಂತದಲ್ಲಿ ಓದುತ್ತಿರುವ ಪುಟಾಣಿ ಮಕ್ಕಳಿಂದ ಶ್ರೀಮತಿ ಭವ್ಯ ಶಶಿಧರ್ ರವರ ನಿರ್ದೇಶನದಲ್ಲಿ "ಚಂದಿರನೇತಕೆ ಓಡುವನಮ್ಮ" ಎಂಬ ಶಿಶುಗೀತೆಗೆ ನೃತ್ಯವನ್ನು ಪಸ್ತುತಪಡಿಸಿದರು. ಮಕ್ಕಳಲ್ಲಿ ಸಹಜವಾಗಿಯೇ ಎದ್ದು ಬರುವ ಕೂತೂಹಲ ಭರಿತ ಪ್ರಶ್ನೆಗಳ ಭಾವಾರ್ಥವನ್ನು ಹೊಂದಿದ್ದ ಈ ಗೀತೆ ಪುಟಾಣಿ ಮಕ್ಕಳಿಂದ ಹಿಡಿದು ಹಿರಿಯರು ಕೂಡ ಮೆಚ್ಚುಗೆಯ ಚಪ್ಪಾಳೆ ತಟ್ಟಿದರು.

ಸಂತ ಶಿಶುನಾಳ ಶರೀಫರ ರಚನೆಯಾದ "ಬಿದಿರು ನಾನಾರಿಗಲ್ಲದವಳು" ಎಂಬ ಗೀತೆಯ ರೂಪಕವನ್ನು ಶ್ರೀ ಜನಾರ್ಧನ ರವರ ನಿರ್ದೇಶನದಲ್ಲಿ ಪ್ರಸ್ತುತಪಡಿಸಿದರು. ಯಾವ ಮಕ್ಕಳೂ ಕೂಡ ಕೀಳರಿಮೆ ಬೆಳೆಸಿಕೊಳ್ಳದೆ, ತಾನು ಕೂಡ ಇತರರಂತೆ ಸಮಾಜದಲ್ಲಿ ಒಬ್ಬ ಮನುಷ್ಯನಾಗಿ ಬಾಳುತ್ತೇನೆ ಎಂದು ಆತ್ಮವಿಶ್ವಾಸದಿಂದ ಹೇಳುವ ರೂಪಕ, ಮತ್ತು ಪಂಚತಂತ್ರದ ಕಥೆಯನ್ನಾಧಾರಿಸಿದ "ಅಜ್ಜಿ ಕಥೆ" ಎಂಬ ಕಿರುನಾಟಕವನ್ನು ಶ್ರೀ ಜಗದೀಶ್ ನಾಯಕ್ ನಿರ್ದೇಶನದಲ್ಲಿ ಪ್ರದರ್ಶಿಸಲಾಯಿತು. ರಂಗಗೀತೆಗಳನ್ನು ಬಸವರಾಜ್, ಶರಣಪ್ಪ ಕಲ್ಯಾಣ್‌ಕರ್, ಜನಾರ್ಧನ ಪ್ರಸ್ತುತಪಡಿಸಿದರು.

– ಜನಾರ್ಧನ,



ಮಂಗಳೂರು (ಉಳ್ಳಾಲ) ಕ್ಷೇತ್ರದ ಸಿಪಿಐ(ಎಂ) ಅಭ್ಯರ್ಥಿ ನಿತಿನ್ ಕುತ್ತಾರ್...... ಪುಟ 5 ರಿಂದ

ಹೀಗೆ ಹಲವು ವಿದ್ಯಾರ್ಥಿ ಹೋರಾಟಗಳಿಗೆ ನೇತೃತ್ವ ನೀಡಿದವರು ನಿತಿನ್ ಕುತ್ತಾರ್.

ಖಾಸಗಿ ಶಾಲೆ ಕಾಲೇಜುಗಳಲ್ಲಿ ಶುಲ್ಕ ಪಟ್ಟಿ ಪ್ರಕಟಿಸದೆ ಬೇಕಾಬಿಟ್ಟಿ ಶುಲ್ಕ ವಸೂಲು ಮಾಡುತ್ತಿರುವುದರ ವಿರುದ್ಧ ಜಿಲ್ಲಾ ಶಿಕ್ಷಣ ರೆಗ್ಯುಲೇಟಿಂಗ್ ಪ್ರಾಧಿಕಾರದ ಸಭೆ ನಡೆಸಬೇಕೆಂದು ಆಗ್ರಹಿಸಿ ಪ್ರತಿಭಟನೆ ನಡೆಸಿದ ಪರಿಣಾಮ, ಜಿಲ್ಲಾಧಿಕಾರಿಗಳು ಪ್ರಾಧಿಕಾರದ ಸಭೆ ನಡೆಸುವಂತಾಯಿತು. ಶಾಲೆ ಕಾಲೇಜುಗಳು, ಸಂಸ್ಥೆಯ ಮುಂಭಾಗದಲ್ಲಿ ಫ್ಲೆಕ್ಸ್ ಮೇಲೆ ಶುಲ್ಕಪಟ್ಟಿ ಪ್ರಕಟಿಸುವಂತಾಯಿತು. ಅದಲ್ಲದೆ ಆ ಸಂದರ್ಭದಲ್ಲಿ ಶಿಕ್ಷಣ ಸಂಸ್ಥೆಗಳು ಶುಲ್ಕಪಟ್ಟಿ ಫ್ಲೆಕ್ಸ್ ಹಾಕಿದೆಯೋ ಇಲ್ಲವೋ ಎಂದು ಪರಿಶೀಲಿಸಲು ಆರ್‌ಟಿಐ ಕಾರ್ಯಕರ್ತರೊಂದಿಗೆ ಎಸ್‌ಎಫ್‌ಐ ತಂಡ ಶಿಕ್ಷ ಸಂಸ್ಥೆಗಳಿಗೆ ದಿಡೀರ್ ಭೇಟಿ ನೀಡುತ್ತಿದ್ದುದರಿಂದ, ಸಂಸ್ಥೆಗಳು ತಮ್ಮ ಕರ್ತವ್ಯ ಲೋಪದ ಬಗ್ಗೆ ಜಾಗೃತರಾಗುವಂತಾಯಿತು.

ಆರ್.ಟಿ.ಐ ಕಾಯ್ದೆಯ ಖಾಸಗಿ ಶಾಲೆಗಳವರು ಮಕ್ಕಳನ್ನು ಸೇರಿಸಿಕೊಳ್ಳುವಾಗ, ಮನೆ ಸಮೀಪವಿದ್ದರೂ ವಾರ್ಡು ವಿಂಗಡಣೆ ನಿಯಮ ಕಾಣಿಸಿ ಮಕ್ಕಳಿಗೆ ಸೀಟು ವಂಚಿಸುತ್ತಿದ್ದುದರ ವಿರುದ್ಧ ಎಸ್‌ಎಫ್‌ಐ ಪ್ರತಿಭಟನೆ ಮಾಡಿದ ಪರಿಣಾಮವಾಗಿ, ಸರಕಾರವೇ ನಿಯಮವನ್ನು ತಿದ್ದುಪಡಿ ಮಾಡಿತು. ಕಾಲೇಜುಗಳಿಗೆ ಅತಿಥಿ ಉಪನ್ಯಾಸಕರನ್ನು ಮರು ನೇಮಿಸಲು ಆಗ್ರಹಿಸಿ ಬೆಂಗಳೂರಿನಲ್ಲಿ ಎಸ್‌ಎಫ್‌ಐ ನಡೆಸಿದ ಹೋರಾಟಗಳಲ್ಲಿ ನಿತಿನ್ ಕುತ್ತಾರ ಬಂಧನಕ್ಕೂ ಒಳಗಾಗಿದ್ದರು. ಡಿಟಿಪಿ ಪರೀಕ್ಷೆಗಳ ಮೌಲ್ಯಮಾಪನದಲ್ಲಿ, ತಪ್ಪುಗಳಿಗಾಗಿ ಗಳಿಸಿದ ಅಂಕಗಳನ್ನು ಕಡಿತಗೊಳಿಸುವ ಕ್ರಮದ ವಿರುದ್ಧ ಎಸ್‌ಎಫ್‌ಐ ಪ್ರತಿಭಟನೆ ಪರಿಣಾಮ, ನಿಯಮಗಳು ಬದಲಾವಣೆ ಹೊಂದಿದವು.

ಇತ್ತೀಚೆಗೆ ಮೂಡಬಿದ್ರಿ ಆಳ್ವಾಸ್ ಕಾಲೇಜನಲ್ಲಿ ನಿಗೂಢ ಸಾವಿಗೊಳಗಾಗಿ ಪ್ರತಿಭಾವಂತ ಕ್ರೀಡಾಪಟು ವಿದ್ಯಾರ್ಥಿನಿ ಕಾವ್ಯಾಳ ಸಾವಿನ ತನಿಖೆಗಾಗಿ ಎಸ್‌ಎಫ್‌ಐ ನಡೆಸಿದ ಬೃಹತ್ ಹೋರಾಟಕ್ಕೆ ನಿತಿನ್ ಕುತ್ತಾರ್ ನೇತೃತ್ವ ನೀಡಿದ್ದರು. ಡಿವೈಎಫ್‌ಐ ನಡೆಸುತ್ತಿರುವ ಚಳುವಳಿಗಳಲ್ಲೂ ನಿತಿನ್ ಕುತ್ತಾರ್ ಸಕ್ರಿಯರಾಗಿಯೂ, ಉಳ್ಳಾಲ ಪ್ರದೇಶವನ್ನು ಗಾಂಜಾ ಹಾಗೂ ಮಾದಕ ದ್ರವ್ಯ ಮುಕ್ತಿ ಗೊಳಿಸುವ ಹೋರಾಟದಲ್ಲಿ ಈಗ ತೊಡಗಿಕೊಂಡಿದ್ದಾರೆ.

ಸಿಪಿಐ(ಎಂ) ಪಕ್ಷದ ಚಳುವಳಿಗಳಲ್ಲೂ ಭಾಗವಹಿಸುತ್ತಿರುವ, ಯುವ ನ್ಯಾಯವಾದಿ ನಿತಿನ್ ಕುತ್ತಾರ್ ಅವರನ್ನು, ಬರುವ ವಿಧಾನಸಭಾ ಚುನಾವಣೆಯಲ್ಲಿ ಸಿಪಿಐ(ಎಂ) ಪಕ್ಷದ ಮಂಗಳೂರು ವಿಧಾನಸಭಾ ಕ್ಷೇತ್ರದಿಂದ ಅಭ್ಯರ್ಥಿಯಾಗಿ ಆಯ್ಕೆ ಮಾಡಿರುತ್ತದೆ. ●

ಅಚ್ಛೇ ದಿನ್‌ಗಳಲ್ಲಿ 2.73 ಲಕ್ಷ ಕೋಟಿ ರೂ. ಕಾರ್ಪೋರೇಟ್ ಸಾಲ ಲೆಕ್ಕದಿಂದ ವಜಾ



ವೇದರಾಜ ಎನ್.ಕೆ.

ಮತ್ತೆ ಲೆಕ್ಕಕ್ಕೆ ಬಂದದ್ದು ಕೇವಲ 29 ಸಾವಿರ ಕೋಟಿ ರೂ.–ಆದರೂ ಕಾರ್ಪೋರೇಟ್ ಸಾಲಮನ್ನಾ ಎನ್ನಬೇಡಿ!

ದೇಶದ ಪ್ರಧಾನ ಸೇವಕರು ಸಂಸತ್ತಿನ ಮೆಟ್ಟಿಲಿಗೆ ತಲೆಮುಟ್ಟಿ ನಮಸ್ಕರಿಸಿ ಆರಂಭಿಸಿದ ಅಚ್ಛೇ ದಿನ್‌ಗಳಲ್ಲಿ ಡಿಸೆಂಬರ್ 2017ರ ವರೆಗಿನ ಮೂರೂವರೆ ವರ್ಷಗಳಲ್ಲಿ **21 ಸಾರ್ವಜನಿಕ ವಲಯದ ಬ್ಯಾಂಕುಗಳ ಒಟ್ಟು 2,72,558 ಕೋಟಿ ರೂ.**ಗಳ ಮರುಪಾವತಿಯಾಗದ ಸಾಲಗಳನ್ನು ಲೆಕ್ಕದಿಂದ ತೆಗೆದು ಹಾಕಲಾಗಿದೆ. ಈ ಅಚ್ಛೇ ದಿನ್ ಸರಕಾರದ ಹಣಕಾಸು ರಾಜ್ಯಮಂತ್ರಿಗಳು ಅದೇ ಸಂಸತ್ತಿನಲ್ಲಿ ಮಾರ್ಚ್ 27ರಂದು ಒಬ್ಬ ರಾಜ್ಯಸಭಾ ಸದಸ್ಯರ ಪ್ರಶ್ನೆಗೆ ಉತ್ತರಿಸುತ್ತ ಈ ಸಂಗತಿ ತಿಳಿಸಿದರು. ಇವು ಕಾರ್ಪೋರೇಟ್ ಮಹಾಕುಳಗಳು ಮರುಪಾವತಿ ಮಾಡದ ಮೊತ್ತ ಎಂದು ಬೇರೆ ಹೇಳಬೇಕಾಗಿಲ್ಲ.

ಈ ಅಚ್ಛೇದಿನ್ 'ಕೊಡುಗೆ'ಗಳ ವರ್ಷವಾರು ವಿವರಗಳು ಹೀಗಿವೆ:

2014–15	ರೂ.49,018 ಕೋಟಿ
2015–16	57,585 ಕೋಟಿ
2016–17	81,683 ಕೋಟಿ
2017 ಎ.1–ಡಿ.31	84,272 ಕೋಟಿ

ಆದರೆ ಇದು ಸಾಲಮನ್ನಾ ಅಲ್ಲ, ಇದನ್ನು ವಸೂಲಿ ಮಾಡಲಾಗುವುದು, ಆದರೆ ಸದ್ಯಕ್ಕೆ ಇದು ಬ್ಯಾಂಕುಗಳ ಲೆಕ್ಕದಲ್ಲಿ ಇರುವುದಿಲ್ಲ ಎಂದು ಮಂತ್ರಿಗಳು ಮತ್ತೊಮ್ಮೆ ಗಿಳಿಪಾಠ ಒಪ್ಪಿಸಿದರು. ಆದರೆ ಇದು ಎಷ್ಟು ನಿಜ, ಹೀಗೆ ಲೆಕ್ಕದಿಂದ ತೆಗೆದು ಹಾಕಿದ, ಅಥವ ಮನ್ನಾ ಆಗದ ಸಾಲಗಳಲ್ಲಿ ಎಷ್ಟು ವಸೂಲಿಯಾಗಿದೆ. ಅದೇ ಉತ್ತರದಲ್ಲಿನ ಎರಡನೇ ಕೋಷ್ಟಕವೇ ಇದಕ್ಕೆ ಉತ್ತರ ಕೊಡುತ್ತದೆ ಎನ್ನುತ್ತಾರೆ ಹಣಕಾಸು ವಿಶೇಷಜ್ಞ ವಿವೇಕ್ ಕೌಲ್.

ವರ್ಷ 2014–15	ಸಾಲ ವಸೂಲಾತಿ ರೂ.	5461 ಕೋಟಿ
2015–16		8096 ಕೋಟಿ
2016–17		8680 ಕೋಟಿ
2017 ಎ.1–ಡಿ.31		7106 ಕೋಟಿ

ಇದು ಒಟ್ಟು 29,343 ಕೋಟಿ ರೂ. ಆಗುತ್ತದೆ. ಅಂದರೆ ಡಿ.31 2017 ರ ವರೆಗೆ 'ಲೆಕ್ಕದಿಂದ ತೆಗೆದ' ಮೊತ್ತದ 10.8%. ಉಳಿದ 89.2% ವಸೂಲಾಗಿಲ್ಲ, ಆಗುವ ಲಕ್ಷಣಗಳೂ ಇಲ್ಲ–ಆದರೂ ಸಾಲಮನ್ನಾ ಅಲ್ಲ!

ಅದಕ್ಕಿಂತ ಐದು ದಿನಗಳ ಮೊದಲು ಸಂಸತ್ತಿಗೆ ನೀಡಿದ ಮಾರ್ಚ್ 31, 2017ರ ವೇಳೆಗೆ ಒಟ್ಟು ಕೆಟ್ಟ ಸಾಲಗಳ ವಲಯವಾರು ಅಂಕಿ–ಅಂಶಗಳನ್ನು ನೋಡಿ:

ಒಟ್ಟು ವಾಪಸು ಬಾರದ ಸಾಲಗಳು	ರೂ.6,41,057 ಕೋಟಿ	
ಉದ್ದಿಮೆ ವಲಯದಿಂದ	4,70,084	73.33%
ಕೃಷಿ ಮತ್ತು ಸಂಬಂಧಿತ ವಲಯ	57,021	8.89%
ಸೇವಾ ವಲಯ	84,686	13.21%
ಚಿಲ್ಲರೆ ಸಾಲಗಳು	23,795	3.71%
ಇತರೆ ಸಾಲಗಳು	5,470	0.85%

ಅಂದರೆ ಸುಮಾರು 80%ದಷ್ಟು ಕೆಟ್ಟಸಾಲಗಳಿಗೆ ದೊಡ್ಡ ಕಾರ್ಪೋರೇಟ್ ಕುಳಗಳೇ ಕಾರಣ. ಈ ಕುಳಗಳಿಗೆ ಅತ್ಯುತ್ತಮ ಲಾಯರುಗಳು ಸಿಗುತ್ತಾರೆ, ಆಳುವ ರಾಜಕಾರಣಿಗಳ ಕೃಪೆ ಇರುತ್ತದೆ, ಇದರಿಂದಾಗಿ ಸಾರ್ವಜನಿಕ ವಲಯದ ಬ್ಯಾಂಕುಗಳಿಗೆ ರೈತರು ಮತ್ತು ಇತರ ಸಾಮಾನ್ಯ ಸಾಲಗಾರರಿಂದ ವಸೂಲಿ ಮಾಡುವಷ್ಟು ಸುಲಭವಾಗಿ ಕಾರ್ಪೋರೇಟ್ ಕುಲಗಳಿಂದ ವಸೂಲಿ ಮಾಡಲಾಗುವುದಿಲ್ಲ ಎನ್ನುತ್ತಾರೆ ವಿವೇಕ್ ಕೌಲ್. ಇದು ಅಚ್ಛೇ ದಿನ್‌ಗಳದ್ದೇ ವಿಶೇಷ ಲಕ್ಷಣವೇನೂ ಅಲ್ಲದಿದ್ದರೂ, ಈ ದಿನಗಳಲ್ಲಿ ಈ ಪ್ರವೃತ್ತಿ ಬಹಳಷ್ಟು ಗಟ್ಟಿಗೊಂಡಿವೆ ಎನ್ನುವುದನ್ನು ಈ ಅಂಕಿ–ಅಂಶಗಳೇ ಹೇಳುತ್ತಿವೆ.

ಈ ನಡುವೆ ಸರಕಾರದ ಅಂಕಿ–ಅಂಶಗಳ ಪ್ರಕಾರವೇ 42 ಶೆಡ್ಯೂಲ್ಡ್ ಬ್ಯಾಂಕುಗಳ ಕೆಟ್ಟ ಸಾಲಗಳ ಮೊತ್ತ 8.85ಲಕ್ಷ ಕೋಟಿ ರೂ. ತಲುಪಿದೆ.

ಇತ್ತೀಚಿನ ದಿನಗಳ ಇನ್ನೊಂದು ವಿಶೇಷತೆಯೆಂದರೆ ಕಾರ್ಪೋರೇಟ್ ಕುಳಗಳಿಗೆ ಸಾಲ ಕೊಟ್ಟು ಕೈಸುಟ್ಟುಕೊಂಡ ಬ್ಯಾಂಕುಗಳಲ್ಲಿ ಖಾಸಗೀ ವಲಯದ ಬ್ಯಾಂಕುಗಳೂ ಸೇರಿವೆ ಎಂಬುದು– ಐಸಿಐಸಿಐ ಬ್ಯಾಂಕ್ ಮತ್ತು ಆಕ್ಸಿಸ್ ಬ್ಯಾಂಕ್ ಪ್ರಕರಣಗಳಿಂದ ಬೆಳಕಿಗೆ ಬಂದಿದೆ; ಕೇಂದ್ರೀಯ ಜಾಗೃತಾ ಆಯೋಗ(ಸಿವಿಸಿ) ಇದರತ್ತ ಪ್ರಧಾನ ಮಂತ್ರಿಗಳ ಕಚೇರಿಯ ಗಮನ ಸೆಳೆದಿದೆ. ಸಾರ್ವಜನಿಕ ವಲಯದ ಬ್ಯಾಂಕ್‌ಗಳನ್ನು ಖಾಸಗೀಕರಿಸುವುದೇ ಕೆಟ್ಟ ಸಾಲಕ್ಕೆ ಮದ್ದು ಎಂಬವರ ನಿಜಬುದ್ಧಿಯೂ ಇಲ್ಲಿ ಬಯಲಾಗುತ್ತಿದೆ.

650 ಕೋಟಿ ರೂ. ಕೆಟ್ಟ ಸಾಲವೂ, ಮತ್ತು ರೈಲ್ವೆ ಮಂತ್ರಿಗಳೂ

ಶಿರಡಿ ಇಂಡಸ್ಟ್ರೀಸ್ ಎಂಬುದು ಮುಂಬೈನ ಒಂದು ಕಂಪನಿ. ಅಗಾಧವಾಗಿ ಬೆಳೆಯುತ್ತಿರುವ ಕೆಟ್ಟ ಬ್ಯಾಂಕ್ ಸಾಲಗಳಿಗೆ ತನ್ನ ಕಡೆಯಿಂದ 650 ಕೋಟಿ ರೂ. 'ಕೊಡುಗೆ' ನೀಡಿರುವ ಕಂಪನಿ. ವಿಶೇಷವೆಂದರೆ 2010 ರ ವರೆಗೆ ಪ್ರಸ್ತುತ ರೈಲ್ವೆ ಮಂತ್ರಿಯಾಗಿರುವವರು ಅದರ ಅಧ್ಯಕ್ಷರಾಗಿದ್ದರು. ಈ ಸಾಲಗಳನ್ನು ಪಡೆದದ್ದು ಮತ್ತು ಸಾಲ ಸುಸ್ತಿ ಆರಂಭವಾದದ್ದು ಅವರು ಅಧ್ಯಕ್ಷರಾಗಿದ್ದಾಗಲೇ. ಈ ಕಂಪನಿಯ ವ್ಯವಹಾರಗಳ ಬಗ್ಗೆ ವೈರ್.ಇನ್ ವೆಬ್‌ಪತ್ರಿಕೆ ತನಿಖಾ ವರದಿ ಪ್ರಕಟಿಸಿದ್ದು, ಈಗ ಆ ಕಂಪನಿಗೂ ತನಗೂ ಏನೂ ಸಂಬಂಧವಿಲ್ಲ ಎಂದು ಮಂತ್ರಿಗಳು ಹೇಳಿಕೆ ನೀಡಿದ್ದಾರೆ.

ಆದರೆ ಈ ಕಂಪನಿಯ ಪ್ರಾಯೋಜಕರು ರೈಲ್ವೆ ಮಂತ್ರಿಗಳ ಪತ್ನಿಯ ಒಡೆತನದ ಇನ್ನೊಂದು ಕಂಪನಿಗೆ 1.5 ಕೋಟಿ ರೂ. ಸಾಲ ನೀಡಿದ್ದಾರೆ. ಆ ಸಾಲ ಇದುವರೆಗೂ ತೀರಿಸಿಲ್ಲ. ಈ ನಡುವೆ ಶಿರಡಿ ಇಂಡಸ್ಟ್ರಿ ತನ್ನ ನೌಕರರಿಗೆ ಕೊಡಬೇಕಾದ 4 ಕೋಟಿ ರೂ.ಗಳ ಭವಿಷ್ಯನಿಧಿಯನ್ನೂ ಬಾಕಿ ಮಾಡಿಕೊಂಡಿದೆ. ಬಹುಶಃ ರೈಲ್ವೆ ಮಂತ್ರಿಗಳ ಪತ್ನಿ ಸಾಲವನ್ನು ಹಿಂತಿರುಗಿಸಿದ್ದರೆ ಅಷ್ಟು ಮೊತ್ತವನ್ನು ಆ ಕಂಪನಿಯ ನೌಕರರ ಭವಿಷ್ಯ ನಿಧಿಗೆ ಕೊಡಬಹುದಾಗಿತ್ತು ಎನ್ನುತ್ತಾರೆ ಈ ತನಿಖಾ ವರದಿಯನ್ನು ಮಾಡಿದವರು.

ಅದಿರಲಿ. ಸಾಲ ಮರುಪಾವತಿ ಬಾಕಿ ಮಾಡಿಕೊಂಡು ಎನ್‌ಸಿಎಲ್‌ಟಿ(ರಾಷ್ಟ್ರೀಯ ಕಂಪನಿ ಕಾನೂನು ಟ್ರಿಬ್ಯುನಲ್) ಗೆ ಹೋಗಿರುವ ಈ ಕಂಪನಿ ಎಲ್ಲಕ್ಕೂ ಮೊದಲು ತನ್ನ ನೌಕರರಿಗೆ ಕೊಡಬೇಕಾದ್ದನ್ನು ಕೊಡಬೇಕು. ಆದರೆ ಈ ಕಂಪನಿ ಅದನ್ನು 2022–24 ರವರೆಗೆ ಮುಂದೂಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದೆಯಂತೆ. 'ವ್ಯಾಪಾರ ಸುಗಮತೆ' ಅಥವ 'ಉದ್ಯೋಗ ಸ್ನೇಹಿ' ಎಂದರೆ ಇದೇ ಇರಬಹುದೇ?

ಉದ್ಯಮಿ ಸ್ನೇಹಿ ಎನ್ನುವಾಗ ಅವರ ಸಂಪುಟ ಸಹೋದ್ಯೋಗಿ, ಯೋಜನಾ ಅನುಷ್ಠಾನ ಮಂತ್ರಿ ಮತ್ತು ರಾಜ್ಯದ ಒಬ್ಬ ಮಾಜೀ ಮುಖ್ಯಮಂತ್ರಿಗಳು ಎಪ್ರಿಲ್ 1ರಂದು ಬೆಂಗಳೂರಿನಲ್ಲಿ ನೀಡಿದ ಉದ್ಯಮ ಸ್ನೇಹಿ ಕಾನೂನು ರಚಿಸಲು ತಮ್ಮ ಸರಕಾರ ಪ್ರಯತ್ನಿಸುತ್ತಿದೆ ಎಂಬ ಹೇಳಿಕೆಯನ್ನು ಗಮನಿಸಬೇಕು. ಒಟ್ಟು 38 ಕಾರ್ಮಿಕ ಕಾನೂನುಗಳನ್ನು ಉದ್ಯಮಿಗಳ ಮೇಲೆ ಹೇರಲಾಗುತ್ತಿದೆ., ಇವನ್ನೆಲ್ಲ ಸಡಿಲಗೊಳಿಸಲು ಸರಕಾರ ಮುಂದಾಗಿದೆ, ಹೀಗೆ ಉದ್ಯಮಿಗಳಿಗೆ 'ಹೊರೆ'ಯಾಗಿದ್ದು 'ಸಡಿಲಗೊಳಿಸ' ಬೇಕಾದ ಕಾನೂನುಗಳಲ್ಲಿ ಕನಿಷ್ಟ ಕೂಲಿ ಕಾಯ್ದೆಯೂ ಸೇರಿದೆಯಂತೆ. ಇದನ್ನು ಅವರು 'ನವಕರ್ನಾಟಕ ಜನಪರ ಶಕ್ತಿ' ಕಾರ್ಯಕ್ರಮವನ್ನು ಉದ್ಘಾಟಿಸುತ್ತ ಹೇಳಿದ್ದಾರೆ! (ಪ್ರಜಾವಾಣಿ, ಎಪ್ರಿಲ್2)

ಹುಸಿ ಸುದ್ದಿ 'ಕಾನೂನು' ಮರುದಿನವೇ ಹುಸಿಯಾಯಿತೇಕೆ?

ಕರ್ನಾಟಕದಲ್ಲಿ ಸರಣಿ ಹುಸಿ ಸುದ್ದಿ ಉತ್ಪಾದಕ ಎನಿಸಿಕೊಂಡ 'ಪೋಸ್ಟ್ ಕಾರ್ಡ್ ನ್ಯೂಸ್'ನ ಮುಖ್ಯಸ್ಥನ ಬಂಧನವಾದಾಗ ಆಳುವ ಪಕ್ಷದ ಮಂತ್ರಿಗಳು, ಸಂಸದರುಗಳು, ಮುಖಂಡರುಗಳು ಆತನ ಬೆಂಬಲಕ್ಕೆ ಧಾವಿಸುತ್ತಿದ್ದಾಗಲೇ, ವಿಶೇಷವಾಗಿ ಮೂರ್ಖರ ದಿನದ ಮರುದಿನ ಅಚ್ಛೇ ದಿನ್ ಸುದ್ದಿ ಮಂತ್ರಿಗಳು ಪತ್ರಕರ್ತರ ಅಧಿಕೃತ ಮನ್ನಣೆ ಪತ್ರ ಕುರಿತ ನಿಯಮಾವಳಿಗಳಲ್ಲಿ ಬದಲಾವಣೆಗಳನ್ನು ಪ್ರಕಟಿಸಿದರು. ಸುಳ್ಳು ಸುದ್ದಿಗಳನ್ನು ಹರಡಿಸುವ ಪತ್ರಕರ್ತರ ಅಧಿಕೃತ ಮನ್ನಣೆಯನ್ನು ಆರು ತಿಂಗಳ ಕಾಲ ರದ್ದು ಮಾಡಲಾಗುವುದು, ಮತ್ತೆ ಅದೇ ಆಪಾದನೆ ಬಂದರೆ ಒಂದು ವರ್ಷ ರದ್ದು ಮಾಡಲಾಗುವುದು, ಮೂರನೇ ಬಾರಿಯೂ ಉಲ್ಲಂಘನೆಯಾದರೆ ಶಾಶ್ವತವಾಗಿ ಮನ್ನಣೆಯನ್ನು ರದ್ದು ಮಾಡಲಾಗುವುದು ಎಂದು ಮಾರ್ಗದರ್ಶಕ ಹೇಳಿಕೆ ಹೊರಡಿಸಿದರು.

ಆದರೆ, ಮರುದಿನವೇ "ಹುಸಿ ಸುದ್ದಿಯನ್ನು ನಿಯಂತ್ರಿಸಲು ಎಪ್ರಿಲ್ 2, 2018ರಂದು ಹೊರಡಿಸಿದ ಪತ್ರಕರ್ತರ ಅಧಿಕೃತ ಮನ್ನಣೆಯ ಮಾರ್ಗದರ್ಶನಗಳನ್ನು ಹಿಂತೆಗೆದುಕೊಳ್ಳಲಾಗಿದೆ" ಎಂಬ ಪತ್ರಿಕಾ ಹೇಳಿಕೆಯನ್ನು ಸುದ್ದಿ ಮಂತ್ರಾಲಯ ನೀಡಿತು.

ಈ ನಡುವೆ ಎಪ್ರಿಲ್2 ರ ಹೇಳಿಕೆಗೆ ವ್ಯಾಪಕ ಪ್ರತಿಕ್ರಿಯೆಗಳು ವ್ಯಕ್ತವಾಗಿದ್ದವು. 'ಹುಸಿ ಸುದ್ದಿ' ಎಂದರೆ ಏನು, ಅದನ್ನು ನಿರ್ಧರಿಸುವವರು ಯಾರು ಎಂಬುದುಪ್ರಮುಖ ಪ್ರಶ್ನೆಯಾಗಿತ್ತು. ಇದನ್ನು ಭಾರತೀಯ ಪತ್ರಿಕಾ ಮಂಡಳಿ(ಪಿಸಿಐ) ಮತ್ತು 'ರಾಷ್ಟ್ರೀಯ ಪ್ರಸಾರಕರ ಸಂಘ'(ಎನ್‌ಬಿಎ)



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ, ಸಿಫಿ.ಕಾಂ

ನಿರ್ಧರಿಸುತ್ತವೆ ಎನ್ನಲಾಯಿತು. ಇವೆರಡೂ ಸರಕಾರೀ ಸಂಸ್ಥೆಗಳಲ್ಲ, ಆದ್ದರಿಂದ ಸರಕಾರದ ಹೇರಿಕೆಗಳೇನೂ ಈ ವಿಷಯದಲ್ಲಿ ಇರುವುದಿಲ್ಲವೆಂದು ಸಮರ್ಥಿಸಿಕೊಳ್ಳುವ ಪ್ರಯತ್ನ ನಡೆಯಿತು.

ಆದರೆ ಇವೆರಡೂ ಸರಕಾರೀ ಕೃಪಾಪೋಷಣೆಯ ಸಂಸ್ಥೆಗಳಾಗಿರುವುದು ಪತ್ರಕರ್ತರಿಗೆ ತಿಳಿಯದ ವಿಷಯವೇನೂ ಅಲ್ಲದ್ದರಿಂದ ಇದು ಪತ್ರಿಕಾ ಸ್ವಾತಂತ್ರ್ಯದ ಕತ್ತು ಹಿಸುಕುವ ಪ್ರಯತ್ನ ಎಂಬ ಕಟು ಟೀಕೆಗಳು ವ್ಯಕ್ತವಾದ ಹಿನ್ನೆಲೆಯಲ್ಲಿ ಪ್ರಧಾನ ಮಂತ್ರಿಗಳು ಮಧ್ಯಪ್ರವೇಶಿಸಿದ್ದಾರೆ, ಈ ಫೇಕ್ ನ್ಯೂಸ್ ಅಥವ ಹುಸಿ ಸುದ್ದಿಯ ವಿಷಯವನ್ನು ಪತ್ರಿಕಾ ಮಂಡಳಿಗೇ ಬಿಡೋಣ, ಸರಕಾರ ಏನೂ ವಿಧಿಸುವುದು ಬೇಡ ಎಂದಿದ್ದಾರೆ ಎನ್ನಲಾಯಿತು.

ಪ್ರಧಾನ ಮಂತ್ರಿಗಳಿಂದಾಗಿ ಪತ್ರಿಕಾಸ್ವಾತಂತ್ರ್ಯ ಸುರಕ್ಷಿತವಾಗಿ ಉಳಿದಿದೆ ಎಂದು ಭಕ್ತ ಮಂಡಳಿ ಈಗ ಜೈಕಾರ ಹಾಕುತ್ತಿದ್ದರೂ, ಈ ಬಗ್ಗೆ 'ಮಾರ್ಗದರ್ಶನ' ಬದಲಿಸುವ ಯೋಚನೆಯಾದರೂ ಏಕೆ ಬಂತು ಎಂಬುದು ಅಷ್ಟೇನೂ ಭಕ್ತರಲ್ಲದವರನ್ನು ಸಹಜವಾಗಿಯೇ ಕಾಡುತ್ತಿದೆ. ಇದು ಮಾನವ ಸಂಪನ್ಮೂಲ ಮಂತ್ರಾಲಯದಿಂದ ಭಾರೀ ಸುದ್ದಿ ಮಾಡಿ, ಜವಳಿ ಮಂತ್ರಾಲಯದಲ್ಲೂ ಸುದ್ದಿ ಮಾಡಲು ಅವಕಾಶಗಳಿಲ್ಲದಿದ್ದರೂ ಪ್ರಯತ್ನಿಸಿದ ಮಂತ್ರಿವರ್ಯರು ಈಗ ಸುದ್ದಿ ಮಂತ್ರಿಯೇ ಆಗಿರುವಾಗ ಸುದ್ದಿ ಮಾಡದಿರುತ್ತಾರೆಯೇ ಎಂದು ಇನ್ನು ಕೆಲವರು ಪ್ರಧಾನ ಮಂತ್ರಿಗಳ 'ಮಧ್ಯಪ್ರವೇಶ'ವನ್ನು ಪರೋಕ್ಷವಾಗಿ ಪ್ರಶಂಸಿಸುತ್ತಿದ್ದಾರೆ.

ಆದರೆ 56 ಅಂಗುಲ ಮುಖಂಡತ್ವದ ಈ ದಿನಗಳಲ್ಲಿ ಅತ್ಯುಚ್ಚ ಮುಖಂಡನ ಆಣತಿಯಿಲ್ಲದೆ ಏನಾದರೂ ನಡೆಯುವುದು ಸಾಧ್ಯವೇ ಎಂದು ಆಳುವ ಪಕ್ಷದ ಕೆಲವು ಮಾಜೀ ಹಿರಿಯ ಮುಖಂಡರೇ ಕೇಳುತ್ತಿದ್ದಾರೆ. ದೇಶದ ಆಳ್ವಿಕೆಯಲ್ಲಿ ಏನು ನಡೆಯುತ್ತಿದೆ ಎಂಬ ನಿಜಚಿತ್ರವೇ ತಿಳಿಯದಂತೆ ಮಾಡಲು ಪತ್ರಕಾರಿತೆ ಪ್ರಜಾಪ್ರಭುತ್ವದ ನಾಲ್ಕನೇ ಕಂಬ ಎಂದು ಈಗಲೂ ನಂಬಿರುವ ಪತ್ರಕರ್ತರ ಅಧಿಕೃತ ಮನ್ನಣೆಯನ್ನೇ ರದ್ದು ಮಾಡಿದರೆ ಹೇಗೆ ಎಂದು ಕಾರ್ಪೋರೇಟ್ ಮಾಧ್ಯಮಗಳ ಪ್ರಾಬಲ್ಯದ ವಾತಾವರಣದಲ್ಲಿ ಪರೀಕ್ಷಿಸಲು ಹೊರಟ ಒಂದು ನಡೆ ಇದು ಎಂದು ಈ ಹಿಂದೆ ತುರ್ತು ಪರಿಸ್ಥಿತಿಯನ್ನು ಕಂಡಿರುವ, ಇತ್ತೀಚಿನ ದಿನಗಳಲ್ಲಿ ಮಾನನಷ್ಟ ಬೆದರಿಕೆ/ಮೊಕದ್ದಮೆಗಳನ್ನು ಎದುರಿಸಿರುವ ಕೆಲವು ಹಿರಿಯ ಪತ್ರಕರ್ತರು ಎಚ್ಚರಿಸಿದ್ದಾರೆ. ಸದ್ಯಕ್ಕೆ ಈ ಪರೀಕ್ಷೆ ನಿರೀಕ್ಷಿತ ಫಲಿತಾಂಶ ನೀಡಿಲ್ಲ ಅಷ್ಟೇ ಎನ್ನುತ್ತಾರೆ ಅವರು.

ಕಳೆದ ನಾಲ್ಕು ವರ್ಷಗಳಲ್ಲಿ ಉತ್ತಮ ಆಳ್ವಿಕೆಯ ಹುಸಿಗಳನ್ನು ನಿಜ ಎಂದು ನಂಬಿಸಲಾರದೆ ಸೋತಿರುವ ಮಂದಿ ಈಗ ಉಳಿದ ಒಂದು ವರ್ಷದಲ್ಲಿ ನಿಜ ಸುದ್ದಿಗಳಿಗೇ ಹುಸಿಯೆಂಬ ಲೇಬಲ್ ಹಚ್ಚಿ ತಮ್ಮ ಗುರಿ ಸಾಧಿಸಿಕೊಳ್ಳುವ ಹವಣಿಕೆಯೇ?–ಇದು ಒಬ್ಬ ಪತ್ರಕರ್ತರು ಕೇಳಿರುವ ಪ್ರಶ್ನೆ

ಅಚ್ಛೇದಿನ್‌ಗಳ ಹೊಸ ಶಿಖರದಲ್ಲಿ ಪೆಟ್ರೋಲ್–ಡೀಸೆಲ್ ಬೆಲೆಗಳು

ಈ ವರ್ಷದ ಮೂರ್ಖರ ದಿನದಂದು ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳು ಕಳೆದ ನಾಲ್ಕು ವರ್ಷಗಳಲ್ಲೇ ಅತ್ಯುನ್ನತ ಮಟ್ಟವನ್ನು ತಲುಪಿವೆ. ಈ ಮೂಲಕ ದಕ್ಷಿಣ ಏಶ್ಯಾದಲ್ಲೇ ಅತ್ಯುನ್ನತ ದರಗಳನ್ನು ಹೊಂದಿರುವ ದೇಶ ಎಂಬ ತನ್ನ 'ಸ್ಥಾನ'ವನ್ನು ಉಳಿಸಿಕೊಂಡಿದೆ.

ಹೀಗೆ ಇಂಧನ ದರಗಳು ಏರಿದಾಗಲೆಲ್ಲ ಈ ಅಚ್ಛೇ ದಿನ್‌ಗಳ ಮೊದಲೆರಡು ವರ್ಷಗಳಲ್ಲಿ ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲ ಬೆಲೆಗಳು ಇಳಿಯುತ್ತಿದ್ದಾಗ ಅಬಕಾರಿ ಸುಂಕಗಳನ್ನು ಒಂಭತ್ತು ಬಾರಿ ಏರಿಸಲಾಗಿದೆ ಎಂಬುದನ್ನು ಮತ್ತೆ–ಮತ್ತೆ ನೆನಪಿಸಿಕೊಡಬೇಕಾಗುತ್ತಿದೆ. ಆದರೆ ಜಾಣ ಕಿವುಡಿನ 'ಉತ್ತಮ ಆಳ್ವಿಕೆ' ಮಂದಿ ಈಗ ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಹೆಚ್ಚುತ್ತಿರುವುದರತ್ತವೇ ತೋರಿಸುತ್ತಿದ್ದಾರೆ.



ವ್ಯಂಗ್ಯಚಿತ್ರ: ಅಲೋಕ್ ನಿರಂತರ್

ಸರಕೀಕರಣವೂ ಮತ್ತು ಸಾರ್ವಜನಿಕ ಕಾರ್ಯಕ್ಷೇತ್ರವೂ



ಶಿಕ್ಷಣ, ಮಾಧ್ಯಮಗಳು, ರಾಜಕೀಯ–ಎಲ್ಲವೂ ವ್ಯಾಪಾರದ ಸರಕುಗಳಾಗುತ್ತಿವೆ ಏಕೆ?

ಪ್ರೊ. ಪ್ರಭಾತ್ ಪಟ್ನಾಯಕ್ **ಅನುವಾದ: ಕೆ.ಎಂ.ನಾಗರಾಜ್**

ಮಾರುಕಟ್ಟೆ ಅಥವ ಒಟ್ಟಾರೆಯಾಗಿ ಆರ್ಥಿಕತೆ, ಮತ್ತು ಸಾರ್ವಜನಿಕ ಸಂವಾದ ಈ ಎರಡು ಕಾರ್ಯಕ್ಷೇತ್ರಗಳ ನಡುವೆ ವ್ಯತ್ಯಾಸ ಉದಾರವಾದ ಎಂಬುದರ ವಿಶಿಷ್ಟತೆ. ಮಾರುಕಟ್ಟೆಯು ವ್ಯಕ್ತಿಗಳು ಮತ್ತು ಸಂಸ್ಥೆಗಳು ತಮ್ಮ ತಮ್ಮ ವಸ್ತುಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳಲು ಸೇರುವ ಕ್ಷೇತ್ರ ಹಾಗೂ ಒಂದು ರಾಜಕೀಯ ವ್ಯವಸ್ಥೆಯಲ್ಲಿ ವ್ಯಕ್ತಿಗಳು ನಾಗರಿಕರಾಗಿ ಪ್ರಭುತ್ವದ ಕ್ರಿಯೆಗಳನ್ನು ಚರ್ಚಿಸುವ ಮತ್ತು ನಿರ್ಧರಿಸುವ ಸಾರ್ವಜನಿಕ ಸಂವಾದದ ಕ್ಷೇತ್ರ. ಈ ಎರಡನೇ ಕಾರ್ಯಕ್ಷೇತ್ರಕ್ಕೆ ಉದಾರವಾದಿಗಳು ನೀಡುವ ಮಹತ್ವವನ್ನು 19ನೇ ಶತಮಾನದ ಉದಾರವಾದಿ ಚಿಂತಕ ವಾಲ್ಟರ್ ಬಾರ್ಘಟ್ ಒತ್ತಿ ಹೇಳಿದ್ದಾರೆ. ಅವರು ಪ್ರಜಾಪ್ರಭುತ್ವ ಎಂದರೆ 'ವಿಚಾರವಿನಿಮಯಗಳ ಮೂಲಕವೇ ಸರ್ಕಾರ' ನಡೆಯಬೇಕು ಎಂಬ ಅಂಶವನ್ನು ಪ್ರತಿಪಾದಿಸಿದ್ದರು. ಆ ಮೂಲಕವಾಗಿ, ಅವರು ಉದಾರ ರಾಜಕೀಯದ ಎರಡು ಮೂಲ ತತ್ವಗಳ ಮಹತ್ವವನ್ನು ಒತ್ತಿ ಹೇಳಿದ್ದರು. ಅವೆಂದರೆ, ಸಾರ್ವಜನಿಕ ಸಂವಾದದ ಪಾತ್ರ ಮತ್ತು ಅದಕ್ಕೆ ಪ್ರಭುತ್ವದ ಸ್ಪಂದನೆ.

ಉದಾರವಾದದ ಎಲ್ಲ ಧಾರೆಗಳಲ್ಲೂ ಈ ವ್ಯತ್ಯಾಸವು ಬಹಳ ಮುಖ್ಯವಾಗಿ ಉಳಿಯುತ್ತದೆ. ಉದಾಹರಣೆಗೆ ಹೇಳುವುದಾದರೆ, ಆರ್ಥಿಕ ವಿಷಯಗಳಿಗೆ ಸಂಬಂಧಿಸಿದಂತೆ, ಉದಾರವಾದದ ಎರಡು ವಿಭಿನ್ನ ಧಾರೆಗಳನ್ನು ಗಮನಿಸಬಹುದು. ಜಾನ್ ಮೆನಾರ್ಡ್ ಕೀನ್ಸ್ ಮತ್ತು ಅವರ ಪೂರ್ವಜರಾದ ಆಲ್ಫ್ರೆಡ್ ಮಾರ್ಷಲ್ ಮತ್ತು ಎ.ಸಿ.ಪಿಗೂ (ಇವರೆಲ್ಲರನ್ನೂ ಕೆಂಬ್ರಿಜ್ ಪಂಥದವರು ಎನ್ನುತ್ತಾರೆ)ಇವರ ಗುಂಪಿದ್ದು ಮತ್ತು ಫ್ರೆಡ್ರಿಕ್ ಅಗಸ್ಟ್ ವಾನ್ ಹಯೆಕ್ ಅವರಂತಹ ಉದಾರವಾದಿಗಳದ್ದು.

ಸರ್ಕಾರವು ಅರ್ಥವ್ಯವಸ್ಥೆಯೊಳಗೆ ತಲೆ ಹಾಕಬಾರದು ಏಕೆಂದರೆ ಅದರ ಪಾಡಿಗೆ ಅದನ್ನು ಬಿಟ್ಟರೆ ಅದು ಚೆನ್ನಾಗಿಯೆ ಕಾರ್ಯನಿರ್ವಹಿಸುತ್ತದೆ ಎಂಬುದು ಹಯೆಕ್ ಪಂಥದವರ ನಂಬಿಕೆ. ಇನ್ನು, ಕೀನ್ಸ್ ಪಂಥದವರ ಪ್ರಕಾರ ಮಾರುಕಟ್ಟೆಯಲ್ಲಿ ಲೋಪ ದೋಷಗಳಿವೆ. ಆದ್ದರಿಂದ, ಅದನ್ನು ಸರಿದಾರಿಗೆ ತರಲು ಸರ್ಕಾರವು ಅದರ ಕಾರ್ಯನಿರ್ವಹಣೆಯಲ್ಲಿ ಪ್ರಭುತ್ವ ಮಧ್ಯ ಪ್ರವೇಶಮಾಡಬೇಕಾತ್ತದೆ. ಆದರೆ ಹೀಗೆ ಮಧ್ಯಪ್ರವೇಶಿಸುವಾಗ, ಪ್ರಭುತ್ವ ಮಾರುಕಟ್ಟೆಯಿಂದ ಹೊರತಾದ ಒಂದು "ಸಾಮಾಜಿಕ ವಿಚಾರಶೀಲತೆ" ಎಂದು ಅವರು ನಂಬಿದ್ದರು. ಈ ವಿಚಾರಶೀಲತೆ ಸಾರ್ವಜನಿಕ ಸಂವಾದದ ಮೂಲಕ ಮಾತ್ರ ಬರುತ್ತದೆ ಎಂಬ ಭಾವನೆ ಅದರಲ್ಲಿ ಅಡಕವಾಗಿತ್ತು.

ಸಾರ್ವಜನಿಕ ಸಂವಾದದ ಅಗತ್ಯವನ್ನು ಹಯೆಕಿ ಉದಾರವಾದಿಗಳೂ ನಂಬುತ್ತಿದ್ದರು, ಆದರೆ ಅವರಿಗೆ ಅದು ಸುಸೂತ್ರವಾಗಿ ಕಾರ್ಯನಿರ್ವಹಿಸುವ ಮಾರುಕಟ್ಟೆಗಳಲ್ಲಿ ಸರ್ಕಾರದ ಮಧ್ಯ ಪ್ರವೇಶವನ್ನು ತಡೆಯುವ ಸಾಧನವಾಗಿತ್ತು.

ಒಂದು ಮಾರುಕಟ್ಟೆ ಅರ್ಥವ್ಯವಸ್ಥೆ ಇರಬೇಕು ಮತ್ತು ಒಂದು ಸಾರ್ವಜನಿಕ ಸಂವಾದದ ಕಾರ್ಯಕ್ಷೇತ್ರ ಇರಬೇಕು ಎಂದು ಉದಾರವಾದದ ಎಲ್ಲ ಧಾರೆಗಳೂ ಒತ್ತಿ ಹೇಳಿದ್ದವು; ಅದು ಮಾರುಕಟ್ಟೆಯ ಲೋಪ–ದೋಷಗಳನ್ನು ಸರಿಪಡಿಸುವುದಕ್ಕಾಗಿಯೋ ಅಥವಾ ಅದರಲ್ಲಿ ಪ್ರಭುತ್ವ ಕೈಯಾಡಿಸುವುದನ್ನು ತಡೆಯುವುದಕ್ಕಾಗಿಯೋ ಎಂಬುದು ಬೇರೆ ವಿಚಾರ.

ಒಂದು ಮಾರುಕಟ್ಟೆ ಅರ್ಥವ್ಯವಸ್ಥೆ ಮತ್ತು ಸಾರ್ವಜನಿಕ ಸಂವಾದ ಇರುವ ಸಮಾಜ ವ್ಯವಸ್ಥೆ ಕುರಿತಂತೆ ಉದಾರವಾದಿಗಳ ಕಣ್ಣೋಟವನ್ನು ಮಾರ್ಕ್ಸ್‌ವಾದಿ ದೃಷ್ಟಿಕೋನದ ಮೂಲಕ ಎರಡು ವಿಭಿನ್ನ ನೆಲೆಗಳಲ್ಲಿ ವಿಮರ್ಶಿಸಬಹುದು. ಮೊದಲನೆಯದು, ಇದು ಚಿರಪರಿಚಿತವಾಗಿದೆ, ಅದೆಂದರೆ ಪ್ರಭುತ್ವದ ವರ್ಗ ಲಕ್ಷಣಗಳ ಬಗ್ಗೆ ಗಮನ ಹರಿಸುವುದು. ಪ್ರಭುತ್ವವು ಕೀನ್ಸ್ ಅಂದುಕೊಂಡಿದ್ದಂತೆ "ಸಾಮಾಜಿಕ ವಿಚಾರಶೀಲತೆ"ಯ ಒಂದು ಪ್ರತೀಕವಾಗಿರುವುದರ ಬದಲು, ಒಂದೋ ಅದು ಮನ:ಪೂರ್ವಕವಾಗಿ ಬಂಡವಾಳಿಗರ ಹಿತಾಸಕ್ತಿಯನ್ನು ಪ್ರತಿನಿಧಿಸುತ್ತದೆ, ಇಲ್ಲವೆ(ಒಂದು 'ಸುಧಾರಣಾವಾದಿ' ಸರಕಾರ ಬಂದಾಗ) ಆ ಹಿತಾಸಕ್ತಿಯ ಮಿತಿಯೊಳಗಿರುತ್ತದೆ. ಇನ್ನು, ಮಾರುಕಟ್ಟೆ ಆರ್ಥವ್ಯವಸ್ತೆಯ ಬಗ್ಗೆ ಹಯೆಕಿ ಕಣ್ಣೋಟ ನಮಗೆ ಬೇಕಿಲ್ಲ. ಏಕೆಂದರೆ ಅದು ತಪ್ಪು ಕಣ್ಣೋಟ. ಕೀನ್ಸ್ ಪರಂಪರೆಯೇ ಹೇಳುವಂತೆ ಅದು ಮಾರುಕಟ್ಟೆಯ ಅರಾಜಕತೆಯನ್ನು ಉಪೇಕ್ಷಿಸುತ್ತದೆ.

ಕೀನ್ಸ್ ಅತಿ ಮುಖ್ಯ ಕರ್ತವ್ಯವೆಂದು ಪರಿಗಣಿಸಿದ್ದ ನಿರುದ್ಯೋಗ ನಿವಾರಣೆಗಾಗಿ ಅಗತ್ಯ ರೀತಿಯಲ್ಲಿ ಕೆಲಸ ಮಾಡಲು ಪ್ರಭುತ್ವವು ಅಸಮರ್ಥವಾಗಿದೆ. ಇತ್ತೀಚೆಗೆ ಅದು ಸ್ಪಷ್ಟವಾಗಿ ಪ್ರದರ್ಶನಗೊಂಡಿದೆ. ಬಿಕ್ಕಟ್ಟು ದೀರ್ಘವಾಗಿ ಮುಂದುವರೆಯುತ್ತಿರುವಾಗಲೂ ಪ್ರಭುತ್ವವು ನಿಷ್ಪ್ರಯೋಜಕ ಮತ್ತು ಬಲಹೀನ ಬಡ್ಡಿ ದರಗಳನ್ನು ಏರಿಳಿಸುವ ಚರ್ವಿತಚರ್ವಣ ಕ್ರಮಗಳನ್ನೇ ನೆಚ್ಚುತ್ತಿದೆ, ಹೊರತು ದೊಡ್ಡ ಪ್ರಮಾಣದಲ್ಲಿ ಪ್ರಭುತ್ವದ ವೆಚ್ಚ ವನ್ನು ಹೆಚ್ಚಿಸುವ ಅಥವಾ ವರಮಾನಗಳನ್ನು ಹೆಚ್ಚು ಸಮತ್ವದಿಂದ ಹಂಚಿಕೆ ಮಾಡುವ ಯಾವುದೇ ವಿತ್ತೀಯ ಕ್ರಮಗಳನ್ನು ಅನುಸರಿಸಲಾರದಷ್ಟು ಅದು ಅಸಹಾಯಕವಾಗಿರುವಂತೆ ಕಾಣ ಬರುತ್ತಿದೆ.

ಉದಾರವಾದಿಗಳ ಕಣ್ಣೋಟದ ಎರಡನೇ ಮಾರ್ಕ್ಸ್‌ವಾದಿ ದೃಷ್ಟಿಕೋನ ಈಗ ನಮ್ಮ ಕಣ್ಣ ಮುಂದೆಯೇ ಸಾಬೀತಾಗುತ್ತಿದೆ. ಬಂಡವಾಳಶಾಹಿಯ ಕಾರ್ಯವೈಖರಿಯ ಬಗ್ಗೆ ಮಾರ್ಕ್ಸ್‌ವಾದವು ಹೊಂದಿರುವ ಅತ್ಯಂತ ಗಹನವಾದ ಒಳನೋಟವೆಂದರೆ, ಅದೊಂದು ತನ್ನೊಳಗೇ ಅಡಕವಾಗಿರುವ ಪ್ರವೃತ್ತಿಗಳಿಂದ ಚಾಲನೆಗೊಳ್ಳುವ 'ಸ್ವಯಂಸ್ಫೂರ್ತ' ವ್ಯವಸ್ಥೆ ಎಂಬುದು. ಅಂತಹ ಒಂದು ಪ್ರಮುಖ 'ಸ್ವಯಂಸ್ಫೂರ್ತ' ಪ್ರವೃತ್ತಿಯೆಂದರೆ, ಬಂಡವಾಳಶಾಹಿಯ ಅಡಿಯಲ್ಲಿ ಬದುಕಿನ ಎಲ್ಲ ಕ್ಷೇತ್ರಗಳೂ ಹಂತ ಹಂತವಾಗಿ ಸರಕುಗಳಾಗುವುದು. ನಾವೀಗ ಅದರೊಳಗೆ ಅಡಕವಾಗಿರುವ ಈ ಸರಕೀಕರಣದ ಪ್ರವೃತ್ತಿ ಹರಡುತ್ತ ಸಾರ್ವಜನಿಕ ಸಂವಾದದ ಕ್ಷೇತ್ರವನ್ನೇ ನಾಶಮಾಡುತ್ತಿರುವುದನ್ನು ಕಾಣುತ್ತಿದ್ದೇವೆ.

ಸಾರ್ವಜನಿಕ ಸಂವಾದದ ಕಾರ್ಯಕ್ಷೇತ್ರಕ್ಕೆ ಹಲವು ಅಂಶಗಳು ಆವಶ್ಯಕವಾಗಿವೆ. ಅವುಗಳಲ್ಲಿ ಎರಡು ಮಹತ್ವದ ಅಗತ್ಯಗಳೆಂದರೆ, ಮೊದಲನೆಯದು, ತನ್ನ ವಿದ್ಯಾರ್ಥಿಗಳನ್ನು ವಿವಿಧ ಗ್ರಹಿಕೆಗಳಿಗೆ ತೆರೆದಿಟ್ಟು ಸಾಮಾಜಿಕ ಪ್ರಶ್ನೆಗಳ ಬಗ್ಗೆ ಪ್ರಜ್ಞಾಶೀಲರನ್ನಾಗಿಸುವ ಒಂದು ಶಿಕ್ಷಣ ವ್ಯವಸ್ಥೆ. ಇನ್ನೊಂದು, ಸರಿಯಾದ ಮಾಹಿತಿ ಹಾಗೂ ಅಭಿಪ್ರಾಯಗಳ ಒಂದು ವಿಶಾಲ ನೋಟವನ್ನು ನಿಷ್ಠೆಯಿಂದ ಒದಗಿಸುವ ಮುದ್ರಣ ಮತ್ತು ಇಲೆಕ್ಟ್ರಾನಿಕ್ ಮಾಧ್ಯಮ. ಸರಕೀಕರಣ, ಅಂದರೆ ಈ ಎರಡೂ ಸಂಸ್ಥೆಗಳನ್ನು ವ್ಯಾಪಾರದ ಸರಕನ್ನಾಗಿಸುವ ಪ್ರಕ್ರಿಯೆಯ ಮೂಲಕ ಅವುಗಳನ್ನು ಹಾಳುಗೆಡವಲಾಗುತ್ತಿದೆ.

ಮಾಧ್ಯಮಗಳ ಕಾರ್ಪೊರೇಟ್ ಒಡೆತನ ಮತ್ತು ನಿಯಂತ್ರಣವು ಸಾರ್ವಜನಿಕ ಸಂವಾದಕ್ಕೆ ವಿಶ್ವಾಸಾರ್ಹ ಮಾಹಿತಿ ಒದಗಿಸುವ ಅವುಗಳ ಪಾತ್ರವನ್ನು ಬುಡಮೇಲು ಮಾಡುವತ್ತ ಬಹುದೂರ ತಳ್ಳಿದೆ. ಈಗ ಅವು ಕಾರ್ಪೊರೇಟ್ ಬಂಡವಾಳದ ತುತ್ತೂರಿಗಳಾಗುತ್ತಿವೆ. ಅದರ ಜೊತೆಯಲ್ಲಿ, ನಾನಾ ರೀತಿಗಳಲ್ಲಿ ಅವುಗಳ ವ್ಯಾಪಾರೀಕರಣ ಅವನ್ನು ಈ ದಿಕ್ಕಿನಲ್ಲಿ ಮತ್ತಷ್ಟು ದೂರಕ್ಕೆ ತಳ್ಳಿವೆ.

ಸರ್ಕಾರ ನೀಡುವ ಜಾಹಿರಾತುಗಳ ಮೇಲೆ ಮಾಧ್ಯಮಗಳ ಆದಾಯದ ಅವಲಂಬನೆ ಪತ್ರಿಕಾ ಸ್ವಾತಂತ್ರ್ಯವನ್ನು ಕುಂದಿಸಿದೆ ಅದರಿಂದಾಗಿ, ಅವುಗಳ ಸರಕೀಕರಣ ಸದ್ದಿಲ್ಲದೆ ಸಾಗಿದೆ. ಈ ಪ್ರಕ್ರಿಯೆಯು ಈಗ ಇನ್ನೂ ಬಹಳ ಮುಂದೆ ಹೋಗಿದೆ. ಈಗ ಒಂದು ನಿರ್ದಿಷ್ಟ ಮೊತ್ತದ ಹಣ ಕೊಟ್ಟು "ಸುದ್ದಿ"ಯನ್ನು ಮಾಧ್ಯಮಗಳಲ್ಲಿ ನೆಡಬಹುದು, ಮತ್ತು ಒಂದು ನಿರ್ದಿಷ್ಟ ಅಜೆಂಡಾವನ್ನು ಆ ಮೂಲಕ ಕಾರ್ಯಗತ ಗೊಳಿಸಬಹುದೆಂಬಂತೆ ಕಾಣುತ್ತದೆ. ಈ ಮಾತಿಗೆ ಪುರಾವೆಯ ಅವಶ್ಯಕತೆ ಇದ್ದರೆ, ಅದನ್ನು ಇತ್ತೀಚೆಗೆ ಕೋಬ್ರಾಪೋಸ್ಟ್ ಎಂಬ ವೆಬ್ ಪೋರ್ಟಲ್, ದೇಶದ ಪ್ರಮುಖ ದಿನ ಪತ್ರಿಕೆಗಳು ಮತ್ತು ಟಿ.ವಿ, ಚಾನೆಲ್‌ಗಳ ಮೇಲೆ ನಡೆಸಿದ ಕುಟುಕು ಕಾರ್ಯಾಚರಣೆ ಅದನ್ನು ಒದಗಿಸಿದೆ.

ಅದೇ ರೀತಿಯಲ್ಲಿ, ನವ–ಉದಾರಿ ಆಳ್ವಿಕೆಯಲ್ಲಿ, ಶಿಕ್ಷಣವನ್ನು ಮಾರಾಟದ ಒಂದು ಸರಕಾಗಿ ಮಾಡಿರುವ ಈ ಸರಕೀಕರಣ ಪ್ರಕ್ರಿಯೆ ವೇಗವಾಗಿ ಸಾಗಿದೆ. ಇದರಿಂದ ಶಿಕ್ಷಣಕ್ಕೆ ವಿದ್ಯಾರ್ಥಿಗಳಲ್ಲಿ ಸಾರ್ವಜನಿಕ ಸಂವಾದಗಳಲ್ಲಿ ಸಾರ್ಥಕವಾಗಿ ತೊಡಗುವ ಪರಿಕರಗಳನ್ನು, ಸಾಮರ್ಥ್ಯವನ್ನು ಬೆಳೆಸುವುದು ಅಸಾಧ್ಯವಾಗುತ್ತಿದೆ.

ಇತ್ತೀಚೆಗೆ ಕೇಂದ್ರ ಸರ್ಕಾರವು ದೇಶದ 60 ಉತ್ತಮ ಯೂನಿವರ್ಸಿಟಿ ಮತ್ತು ಕಾಲೇಜುಗಳಿಗೆ ಹಣಕಾಸಿನ ವಿಷಯದಲ್ಲಿ "ಸ್ವಾಯತ್ತತೆ" ಕೊಡುವ ತೀರ್ಮಾನ ತೆಗೆದುಕೊಂಡಿದೆ. ಅದರಲ್ಲಿ, ದೇಶದ 5 ಹೆಸರಾಂತ ಶಿಕ್ಷಣ ಸಂಸ್ಥೆಗಳಾದ, ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯ, ಹೈದರಾಬಾದ್ ವಿಶ್ವವಿದ್ಯಾಲಯ, ಅಲಿಘರ್ ಮುಸ್ಲಿಂ ವಿಶ್ವವಿದ್ಯಾಲಯ, ಬನಾರಸ್ ಹಿಂದೂ ವಿಶ್ವವಿದ್ಯಾಲಯ ಮತ್ತು ಇಂಗ್ಲಿಷ್ ಮತ್ತು ವಿದೇಶಿ ಭಾಷೆಗಳ ವಿಶ್ವವಿದ್ಯಾಲಯ ಸೇರಿವೆ. ಈ ತೀರ್ಮಾನವು ಸರಕೀಕರಣ ಪ್ರಕ್ರಿಯೆಗೆ ಅಗಾಧ ಉತ್ತೇಜನೆ ತುಂಬುತ್ತದೆ.

ಈ ವಿಶ್ವವಿದ್ಯಾಲಯಗಳು ಇನ್ನುಮುಂದೆ ತಮಗೆ ಬೇಕಾಗುವ ಹಣಕಾಸು ಸಂಪನ್ಮೂಲಗಳನ್ನು ಮಾರುಕಟ್ಟೆಯಿಂದ ಕ್ರೋಢೀಕರಿಸಿಕೊಳ್ಳಬೇಕಾಗುತ್ತದೆ . ಅದಕ್ಕಾಗಿ ಅವು ಮಾರುಕಟ್ಟೆಯ ಅವಶ್ಯಕತೆಗಳನ್ನು ಅವಲಂಬಿಸಿದ ಕೋರ್ಸ್ ಆರಂಭಿಸಿ ಭಾರೀ ಮೊತ್ತದ ಶುಲ್ಕ ಕೊಡಲು ಸಮ್ಮತಿಸುವ ವಿದ್ಯಾರ್ಥಿಗಳನ್ನು ಆಕರ್ಷಿಸಬೇಕಾಗುತ್ತದೆ. ಹಾಗಾಗಿ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ವಂಚಿತ ಸಮುದಾಯ ಹಿನ್ನೆಲೆಯ ವಿದ್ಯಾರ್ಥಿಗಳಿಗೆ ಈ ಅವಕಾಶಗಳು ದೊರೆಯುವುದಿಲ್ಲ. ಅಷ್ಟೇ ಅಲ್ಲದೆ, ಇಂತಹ ಹೊಸ ಶಿಕ್ಷಣ ಪದ್ಧತಿಯು ತಯಾರು ಮಾಡುವ ವಿದ್ಯಾರ್ಥಿಗಳು(ಉತ್ಪನ್ನಗಳು) ಆತ್ಮಪರಾಯಣರೂ, ಸದಾ ತಮ್ಮ ಸ್ವಂತ ಹಿತದಲ್ಲೇ ಮುಳುಗಿರುವವರೂ ಹಾಗೂ ಮಾರುಕಟ್ಟೆಯಲ್ಲಿ ಎಷ್ಟು ಹಣ ಸಂಪಾದಿಸಬಹುದೆಂದು ಹಾತೊರೆಯುವವರೂ ಮತ್ತು ತಮ್ಮ ಸುತ್ತಲಿನ ಸಾಮಾಜಿಕ ವಾಸ್ತವಗಳ ಮತ್ತು ಜಗತ್ತಿನ ಜ್ಞಾನ ಭಂಡಾರದ ಭವ್ಯತೆಯ ಬಗ್ಗೆಯೂ ಅರಿವಿಲ್ಲದವರೂ ಆಗುತ್ತಾರೆ.

ಹೀಗೆ ಸರಕೀಕರಣವು, ಪ್ರಭುತ್ವದ ಧೋರಣೆಗಳಿಗೆ ಗ್ರಾಸವಾಗಬೇಕಿರುವ ಸಾರ್ವಜನಿಕ ಸಂವಾದಕ್ಕೆ ಬೇಕಾದ ಪರಿಕರಗಳನ್ನು ವಂಚಿಸಿ ಆ ಕಾರ್ಯಕ್ಷೇತ್ರವನ್ನು ನಾಶಮಾಡುತ್ತದೆ. ಆದರೆ ಅದಕ್ಕಿಂತಲೂ ಮಿಗಿಲಾಗಿ, ಸರಕೀಕರಣವು ನೇರವಾಗಿಯೇ ರಾಜಕೀಯ ರಂಗ ಪ್ರವೇಶವನ್ನೂ ಮಾಡಿದೆ. ಚುನಾವಣೆಗಳಲ್ಲಿ ಗೆಲ್ಲಲು ಮಾಡಬೇಕಾದ ಅಗಾಧ ವೆಚ್ಚಗಳಿಂದಾಗಿ ಪ್ರಾತಿನಿಧಿಕ ರಾಜಕೀಯ ಸಂಸ್ಥೆಗಳು ದುಡ್ಡಿದ್ದವರ ಪ್ರಾಬಲ್ಯಕ್ಕೆ ಒಳಗಾಗುತ್ತವೆ, ಮತ್ತು ಅವರು ಮಾಡಿರುವ ಹೂಡಿಕೆಗಳನ್ನು "ಮರಳಿ ತುಂಬಿಸಿಕೊಳ್ಳುವ" ಸಾಧನಗಳೂ ಆಗಿ ಬಿಡುತ್ತಿವೆ.

ಚುಟುಕಾಗಿ ಹೇಳುವುದಾದರೆ, ಜನ ಪ್ರತಿನಿಧಿಯ ಸ್ಥಾನವು ಒಂದು ಸರಕು ಆಗುತ್ತದೆ. ಅದು ಬಲು ದುಬಾರಿಯ ಸರಕೂ ಆಗಿದೆ. ಹಾಗಾಗಿ, ಕೊಳ್ಳುವ ಸಾಮರ್ಥ್ಯ ಉಳ್ಳವರಿಗೆ ಮಾತ್ರ ಅದು ಲಭ್ಯ. ವೈಯಕ್ತಿವಾಗಿ ಕೊಳ್ಳಲಾಗದ ಕೆಲವರಿಗೆ ಇನ್ನೊಂದು ದಾರಿ ಇದೆ. ಅಂತಹ ವ್ಯಕ್ತಿಗಳು, ತಮ್ಮ ಇಡೀ ಚುನಾವಣೆಯ ವೆಚ್ಚವನ್ನು ಕಾರ್ಪೊರೇಟ್ ಕುಟುಂಬಗಳಿಂದ ಹೊಂದಿಸಿಕೊಳ್ಳುತ್ತಾರೆ. ನಂತರ ತಮ್ಮ ಸ್ಥಾನವನ್ನು ಬಳಸಿಕೊಂಡು ತಮಗೆ ನೆರವಾದ ದಾತರು ತಾವು ಮಾಡಿದ ಹೂಡಿಕೆಗೆ "ಪ್ರತಿಫಲ" ಪಡೆಯುವಂತೆ ಮಾಡುತ್ತಾರೆ.

ಪರಿಸ್ಥಿತಿ ಇಷ್ಟಕ್ಕೇ ನಿಂತಿಲ್ಲ, ಅದು ಇನ್ನೂ ಮುಂದೆ ಹೋಗಿದೆ ಎಂಬುದನ್ನು ಇತ್ತೀಚಿನ ಕೆಂಬ್ರಿಜ್ ಅನಲಿಟಿಕಾ ಪ್ರಕರಣವು ಸೂಚಿಸುತ್ತದೆ. ಮೇಲ್ನೋಟಕ್ಕೆ ಅದನ್ನು ತನ್ನ ಗಿರಾಕಿಗೆ ಚುನಾವಣೆ ಗೆಲ್ಲಲು ಮಾಹಿತಿ ಕಲೆ ಹಾಕಿ ಕೊಡಲೆಂದು ಹಣಕೊಟ್ಟು ನೇಮಿಸಿಕೊಳ್ಳಲಾಗಿತ್ತು. ಚುನಾವಣೆಯಲ್ಲಿ ಕಾದಾಡಲು ಇಂತಹ ದತ್ತಾಂಶಗಳು ಎಷ್ಟರಮಟ್ಟಿಗೆ ಉಪಯೋಗವಾಗಬಲ್ಲವು ಎಂಬ ಅಂಶವನ್ನು ಬದಿಗಿಟ್ಟು ನೋಡಿದಾಗ, ಇಂತಹ ಕಂಪನಿಗಳ ಪಾತ್ರ, ಒಂದು ಸೂಕ್ತ ಮೊತ್ತಕ್ಕೆ ಪ್ರತಿಯಾಗಿ ತನ್ನ ಗಿರಾಕಿಯ ಪರವಾಗಿ ಕೆಲಸ ಮಾಡುವ 'ಹೊಲಸು ತಂತ್ರ'ಗಳನ್ನು ನಿರ್ವಹಿಸುವುದೇ ಆಗಿದೆ ಎಂಬುದು ಸ್ಪಷ್ಟವಾಗುತ್ತದೆ. ಇದೂ ಸಹ ರಾಜಕೀಯದ ಸರಕೀಕರಣವೇ ಹೊರತು ಬೇರೇನೂ ಅಲ್ಲ.

ಆದ್ದರಿಂದ, ಮಾರುಕಟ್ಟೆಯ ಕಾರ್ಯಕ್ಷೇತ್ರವು, ಸಾರ್ವಜನಿಕ ಸಂವಾದದ ಕಾರ್ಯಕ್ಷೇತ್ರಕ್ಕಿಂತ ಭಿನ್ನವಾಗಿದ್ದು, ಅದರೊಡನೇ ಸಹ–ಅಸಿತ್ವ ಹೊಂದಿರುವಂತಹ, ಮತ್ತು ಇಂತಹ ಸಾರ್ವಜನಿಕ ಸಂವಾದ ಮಾರುಕಟ್ಟೆಯ ದೋಷಗಳನ್ನು ಸರಿಪಡಿಸುವ ಪ್ರಭುತ್ವದ ಧೋರಣೆಗೆ ಗ್ರಾಸ ಒದಗಿಸುವಂತಹ ಒಂದು ಬಂಡವಾಳಶಾಹಿ ಸಮಾಜ ಕುರಿತ ಉದಾರವಾದಿ ಕಣ್ಣೋಟವು ಮೂಲಭೂತವಾಗಿಯೇ ತರ್ಕಸಂಗತವಾಗಿಲ್ಲ. ಹಾಗೆ ಅತಾರ್ಕಿಕವಾಗಿರುವುದು ಪ್ರಭುತ್ವವು ಕೈಗೊಳ್ಳುವ ಕ್ರಮಗಳ ಮೇಲೆ ಆಸ್ತಿ–ಪಾಸ್ತಿ ಸಂಬಂಧಗಳು ಮಿತಿ ಹಾಕುತ್ತವೆ ಎಂಬ ಕಾರಣದಿಂದಷ್ಟೇ ಅಲ್ಲ. ಈ ಎರಡು ಕಾರ್ಯಕ್ಷೇತ್ರಗಳಲ್ಲಿ ಒಂದು, ಅಂದರೆ ಮಾರುಕಟ್ಟೆಯು, ತನ್ನಲ್ಲಿ ಅಡಕವಾಗಿರುವ ಸರಕೀಕರಣದ ಪ್ರವೃತ್ತಿಯ ಮೂಲಕ ಇನ್ನೊಂದು ಕಾರ್ಯಕ್ಷೇತ್ರವಾದ ಸಾರ್ವಜನಿಕ ಸಂವಾದದ ಕ್ಷೇತ್ರವನ್ನು ಅತಿಕ್ರಮಿಸುವುದರಿಂದಲೂ ಈ ಕಣ್ಣೋಟ ಅತಾರ್ಕಿಕವಾಗುತ್ತದೆ.

ಖಚಿತವಾಗಿ ಹೇಳುವುದಾದರೆ, ಬಲ ಪಂಥವು ಪ್ರವರ್ಧಮಾನಕ್ಕೆ ಬರುವುದರೊಂದಿಗೆ, ಸಾರ್ವಜನಿಕ ಸಂವಾದದ ಕಾರ್ಯಕ್ಷೇತ್ರದ ಈ ನಾಶಪ್ರಕ್ರಿಯೆ ಭಾರತವೂ ಸೇರಿದಂತೆ ವಿಶ್ವದ ಎಲ್ಲೆಡೆಯಲ್ಲೂ ನಾಗಾಲೋಟದಿಂದ ಸಾಗಿದೆ. ಆದರೆ ಹಾಗಾಗಲು ಕಾರಣ, ಬಲ ಪಂಥವು ಸರಕೀಕರಣ ಪ್ರಕ್ರಿಯೆಯನ್ನು ಹಿಂದೆಂದಿಗಿಂತಲೂ ಹೆಚ್ಚಿನ ಹುರುಪಿನಿಂದ ಪೋತ್ಸಾಹಿಸಿರುವುದು. ಆದರೆ ಇದರ ಲಕ್ಷಣಗಳು ಅದಕ್ಕೂ ಮೊದಲೇ ಸ್ಪಷ್ಟವಾಗಿಯೇ ಕಾಣಿಸಿದ್ದವು.

ಉದಾರವಾದವು, ಆರ್ಥಿಕ ವ್ಯವಸ್ಥೆಯಲ್ಲಿ ಅಂತರ್ಗತವಾಗಿರುವ ಪ್ರವೃತ್ತಿಗಳನ್ನು, ಮತ್ತು ಒಟ್ಟಾರೆಯಾಗಿ ಒಂದು ಸಮಾಜದಲ್ಲಿನ ರಾಜಕೀಯ ಜೀವನದಲ್ಲಿ ಆರ್ಥಿಕ ಅಂಶದ ಪಾತ್ರವನ್ನು ಗ್ರಹಿಸದಿರುವ ಕಾರಣದಿಂದ ತನ್ನ ಕಣ್ಣೋಟಕ್ಕೆ ತಾಳಿಕೆಯಿಲ್ಲ ಎಂಬುದನ್ನು ಅರಿಯಲು ಅಸಮರ್ಥವಾಗಿದೆ. ತನ್ನ ಕಣ್ಣೋಟ ಹೀಗೆ ದುರಂತದಲ್ಲಿ ಕೊನೆಗೊಳ್ಳುತ್ತಿರುವುದನ್ನು ಕಾಣುವಾಗ ಅದು ಅದಕ್ಕೆ ವಿವರಣೆಗಳನ್ನು ಕೊಡಲು ಮುಂದಾಗುತ್ತದೆ. ಆದರೆ ಇದು ಹೆಚ್ಚೆಂದರೆ ಸಮಸ್ಯೆಯನ್ನು ಬೇರೊಂದು ರೀತಿಯಲ್ಲಿ ಮತ್ತೆ ಹೇಳುತ್ತದೆಯೇ ಹೊರತು, ಅವು ವಿವರಣೆಗಳಾಗುವುದಿಲ್ಲ.

ಆದ್ದರಿಂದ, ಒಂದು ವಿಶ್ವಾಸಾರ್ಹವಾದ ಸಾರ್ವಜನಿಕ ಸಂವಾದದ ಕಾರ್ಯಕ್ಷೇತ್ರವು ಅಸ್ತಿತ್ವದಲ್ಲಿರಬೇಕಾದರೆ, ಬಂಡವಾಳಶಾಹಿಯಲ್ಲಿ ಅಂತರ್ಗತವಾಗಿರುವ ಪ್ರವೃತ್ತಿಗಳನ್ನು ಮೀರಬೇಕಾಗುತ್ತದೆ. ಅಂದರೆ, ಬಂಡವಾಳಶಾಹಿಯನ್ನು ದಾಟಿ ಹೋಗಬೇಕಾಗುತ್ತದೆ. ಪ್ರಜಾಪ್ರಭುತ್ವ ಮತ್ತು ಒಂದು ಸಾರ್ವಜನಿಕ ಕಾರ್ಯಕ್ಷೇತ್ರದ ವ್ಯವಸ್ಥೆ ಸಮಾಜವಾದ ಅಡಿಯಲ್ಲಿ ಮಾತ್ರವೇ ಸಾಕಾರಗೊಳ್ಳಬಲ್ಲದು .ಆದರೆ ಅದರ ಅರ್ಥ, ನಾವೀಗ ಅದಕ್ಕಾಗಿ ಹೋರಾಡುವುದಿಲ್ಲ ಎಂದಲ್ಲ. ಬದಲಾಗಿ, ಈ ಹೋರಾಟವೇ ಸಮಾಜವಾದಕ್ಕಾಗಿ ಮಾಡುವ ಹೋರಾಟವನ್ನು ಮುನ್ನಡೆಸುವ ಒಂದು ಸಾಧನವಾಗಿದೆ.

ಪಂಚಾಯತು ಚುನಾವಣೆ ಘೋಷಣೆಯಾಗುತ್ತಿದ್ದಂತೆ ರಣರಂಗವಾಗುತ್ತಿದೆ ಗ್ರಾಮೀಣ ಬಂಗಾಲ


ಪಶ್ಚಿಮ ಬಂಗಾಲದಲ್ಲಿ ಮೇ 1, 3 ಮತ್ತು 5ರಂದು ಮೂರು ಹಂತಗಳಲ್ಲಿ ಪಂಚಾಯುತು ಚುನಾವಣೆಗಳ ಘೋಷಣೆಯಾಗಿದೆ. ಆದರೆ ಪ್ರತಿಪಕ್ಷಗಳು ನಾಮಪತ್ರಗಳನ್ನೇ ಸಲ್ಲಿಸದಂತೆ ಮಾಡಲು ಆಳುವ ಪಕ್ಷದ ಹಿಂಸಾಚಾರ ಆಗಲೇ ಆರಂಭವಾಗಿದೆ– ನಾಮಪತ್ರಗಳನ್ನು ಸಲ್ಲಿಸಬೇಕಾದ ಬಿಡಿಒ ಕಚೇರಿಗಳನ್ನು ಸುತ್ತುವರಿಯುವುದು, ಸಿಡಿಮದ್ದುಗಳ ವ್ಯಾಪಕ ಬಳಕೆ ಇತ್ಯಾದಿ.

ಬೀರ್‌ಬೂಮ್ ಜಿಲ್ಲೆಯಲ್ಲಿ ಎಪ್ರಿಲ್ 4ರಂದು ಒಬ್ಬ ವಿಕಲಾಂಗ ಸಿಪಿಐ(ಎಂ) ಅಭ್ಯರ್ಥಿಯನ್ನು ಕೂಡ ಬಿಡಲಿಲ್ಲ. ಆತನೀಗ ಆಸ್ಪತ್ರೆಯಲ್ಲಿ ಇದ್ದಾರೆ. ಬಾಂಕುರದಲ್ಲಿ ಜನವಾದಿ ಮಹಿಳಾ ಸಮಿತಿಯ ಕಾರ್ಯಕರ್ತೆ ಎಡ ಅಭ್ಯರ್ಥಿಯಾಗಿ ತನ್ನ ನಾಮಪತ್ರ ಸಲ್ಲಿಸಲು ಹೋದಾಗ ಬಿಡಿಒ ಕಚೇರಿಯಲ್ಲಿ ಟಿಎಂಸಿ ಗೂಂಡಾಗಳು ಆಕೆಯ ಕೂದಲು ಹಿಡಿದೆಳೆದು ಹೊರಗೆಸೆದರು.

ವಿಶೇಷವಾಗಿ ಕಠಿಣ ಸ್ಪರ್ಧೆಯಿರುವಲ್ಲಿ ಮದ್ದುಗುಂಡುಗಳನ್ನು ಬಳಸಿ ಹಿಂಸಾಚಾರ ನಡೆಸಿಯಾದರೂ ಎದುರಾಳಿಗಳು ನಾಮಪತ್ರವನ್ನೇ ಸಲ್ಲಿಸದಂತೆ ಮಾಡುವುದು ಟಿಎಂಸಿ ಮುಖಂಡರು ರೂಪಿಸಿರುವ ತಂತ್ರ. ಟಿಎಂಸಿ ಬೀರ್‌ಬೂಮ್ ಜಿಲ್ಲಾ ಅಧ್ಯಕ್ಷ ಮತ್ತು ಮಂತ್ರಿ ಶುಬೇಂದು ಅಧಿಕಾರಿ ಎಡ ಅಭ್ಯಥಿಗಳು ನಾಮಪತ್ರ ಸಲ್ಲಿಸದಂತೆ ಮಾಡಿದರೆ ಬಹುಮಾನ ನೀಡುವುದಾಗಿ ತಮ್ಮ ಕಾರ್ಯಕರ್ತರಿಗೆ ಬಹಿರಂಗವಾಗಿಯೇ ಕರೆ ಕೊಟ್ಟಿದ್ದಾರೆ.

ರಾಜ್ಯ ಮುಖ್ಯ ಚುನಾವಣಾ ಆಯುಕ್ತರನ್ನು ಭೇಟಿ ಮಾಡಿ ಈ ಪರಿಸ್ಥಿತಿಯ ಬಗ್ಗೆ ಹೇಳಿದಾಗ ಅವರು ತನ್ನ ಅಸಹಾಯಕತೆಯನ್ನು ವ್ಯಕ್ತಪಡಿಸಿದ್ದಾರೆ ಎಂದು ವರದಿಯಾಗಿದೆ. ಈ ಬಗ್ಗೆ ಒಂದು ಪತ್ರಿಕಾ ಸಮ್ಮೇಳನವನ್ನು ನಡೆಸಿದ ಎಡರಂಗದ ಅಧ್ಯಕ್ಷ ಬಿಮನ್ ಬಸು ಪ್ರಜಾಪ್ರಭುತ್ವವನ್ನು ಒಂದು ಪ್ರಹಸನದ ಮಟ್ಟಕ್ಕೆ ಇಳಿಸಲಾಗುತ್ತಿದೆ ಎಂದರು. ಆದರೆ ಎಡರಂಗ ಇದನ್ನು ಪ್ರತಿರೋಧಿಸುತ್ತದೆ, ಏನೇ ಆಗಲಿ ಟಿಎಂಸಿ ಮತ್ತು ಬಿಜೆಪಿಯನ್ನು ಸೋಲಿಸುವುದು ನಮ್ಮ ಗುರಿ, ಅದಕ್ಕೆ ಸಾಧ್ಯವಾದುದನ್ನೆಲ್ಲ ಮಾಡಲಾಗುವುದು ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಸೂರ್ಯಕಾಂತ್ ಮಿಶ್ರ ಹೇಳಿದ್ದಾರೆ.

ಈ ನಡುವೆ ಎಪ್ರಿಲ್ 5ರಂದು ನಲ್ಹಾಟಿ ಬ್ಲಾಕ್‌ನಲ್ಲಿ ಎಡರಂಗದ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಲು ಸಿಪಿಐ(ಎಂ) ಬೀರ್‌ಬೂಮ್ ಜಿಲ್ಲಾ ಕಾರ್ಯದರ್ಶಿ ರಾಮಚಂದ್ರ ಡೋಮ್ ಅವರ ನೇತೃತ್ವದಲ್ಲಿ ಟಿಎಂಸಿ ಗೂಂಡಾಗಳ ಬಾಂಬ್ ದಾಳಿಗಳನ್ನು ಲೆಕ್ಕಿಸದೆ ಬಿಡಿಒ ಕಚೇರಿ ತಲುಪಿಯೇ ಬಿಟ್ಟರು. ಈ ಸಂದರ್ಭದಲ್ಲಿ ರಾಮಚಂದ್ರ ಡೋಮ್ ತಲೆಗೆ ತೀವ್ರ ಗಾಯಗಳಾಗಿವೆ, ಇನ್ನೊಬ್ಬ ಎಡರಂಗದ ಕಾರ್ಯಕರ್ತರು ಆಸ್ಪತ್ರೆಯಲ್ಲಿ ಗಂಭೀರ ಸ್ಥಿತಿಯಲ್ಲಿದ್ದಾರೆ. ಇದರ ನಡುವೆಯೇ ಎಡರಂಗದ ಅಭ್ಯರ್ಥಿಗಳು ತಮ್ಮ ನಾಮಪತ್ರಗಳನ್ನು ಸಲ್ಲಿಸಿದ್ದಾರೆ.



ರಾಮಚಂದ್ರ ಡೋಮ್ ಮಾಜಿ ಲೋಕಸಭಾ ಸದಸ್ಯರೂ, ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯರೂ ಮತ್ತು ದಲಿತ್‌ಶೋಷಣ್ ಮುಕ್ತಿ ಮಂಚ್(ಡಿಎಸ್‌ಎಂಎಂ)ನ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿಯೂ ಆಗಿದ್ದಾರೆ.

ಈ ಹಿನ್ನೆಲೆಯಲ್ಲಿ ಎಡರಂಗ ರಾಜ್ಯ ಚುನಾವಣಾ ಆಯೋಗದ ಕಚೇರಿಯನ್ನು ಸುತ್ತುವರೆದು ಧರಣಿ ನಡೆಸುತ್ತದೆ, ರಾಜ್ಯದಲ್ಲಿ ಪ್ರಜಾಪ್ರಭುತ್ವವನ್ನು ಎತ್ತಿ ಹಿಡಿಯುವಂತೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸುತ್ತದೆ ಎಂದು ಎಡರಂಗದ ಅಧ್ಯಕ್ಷ ಬಿಮನ್ ಬಸು ಪ್ರಕಟಿಸಿದ್ದಾರೆ.

ರಾಜ್ಯಗಳ ಸುತ್ತ


ರಾಜಸ್ತಾನದಲ್ಲಿ ಮತ್ತೆ ರೈತರ ಮೇಲೆ ದಮನ

ಎಪ್ರಿಲ್ 1ರಂದು ರಾಜಸ್ತಾನದ ಬಿಜೆಪಿ ಸರಕಾರ ಮತ್ತೆ ರೈತರ ಮೇಲೆ ದಮನಚಕ್ರ ನಡೆಸಿದೆ. ಪೋಲೀಸ್ ಕಾರ್ಯಾಚರಣೆಯಲ್ಲಿ ಒಬ್ಬ ರೈತನ ಸಾವುಂಟಾಗಿದೆ. ಇದನ್ನು ಅಖಿಲ ಭಾರತ ಕಿಸಾನ್ ಸಭಾ ಮತ್ತು ಅಖಿಲ ಭಾರತ ಕೃಷಿಕೂಲಿಕಾರರ ಸಂಘ ಬಲವಾಗಿ ಖಂಡಿಸಿವೆ, ಮೃತ ರೈತನ ಕುಟುಂಬಕ್ಕೆ 1 ಕೋಟಿ ರೂ.ಗಳ ಪರಿಹಾರ ನೀಡಬೇಕು ಎಂದು ಆಗ್ರಹಿಸಿವೆ.

ಕಳೆದ ತಿಂಗಳು ರೈತರ ಬೃಹತ್ ಪ್ರತಿಭಟನೆಯ ನಂತರ ರಾಜ್ಯ ಸರಕಾರ ಎಲ್ಲ ಟೋಲ್‌ಗಳನ್ನು ರದ್ದು ಮಾಡುವುದಾಗಿ ಹೇಳಿತ್ತು. ಆದರೂ ಒಬ್ಬ ಬಿಜೆಪಿ ಶಾಸಕನ ಮಂದಿ ಜೈಪುರದ ಚೋಮು ಚಂದ್ವಾಜಿ ಟೋಲ್ ಗೇಟ್‌ನಲ್ಲಿ ಸುಂಕ ಸಂಗ್ರಹ ಮಾಡುತ್ತಿರುವುದನ್ನು ಪ್ರತಿಭಟಿಸಿ ರೈತರು 22 ದಿನಗಳಿಂದ ಪ್ರತಿಭಟನೆ ನಡೆಸುತ್ತಿದ್ದರು. ಈ ಶಾಸಕನ ಟೋಲ್ ಪರ್ಮಿಟ್ ಕೂಡ ಎರಡು ವರ್ಷಗಳ ಹಿಂದೆಯೇ ಮುಗಿದು ಹೋಗಿತ್ತು. ಆದರೂ ಟೋಲ್ ಸಂಗ್ರಹವನ್ನು ಮುಂದುವರೆಸುವುದನ್ನು ವಿರೋಧಿಸುತ್ತಿರುವ ರೈತರ ಮೇಲೆ ಆತನ ಗೂಂಡಾಗಳು ಕಲ್ಲೆಸೆತ ನಡೆಸಿದರು, ನಂತರ ಅವರೊಂದಿಗೆ ಶಾಮೀಲಾಗಿದ್ದ ಪೋಲಿಸರು ಅಶ್ರುವಾಯು ಪ್ರಯೋಗಿಸಿದರು, ಗೋಲೀಬಾರ್ ಕೂಡ ನಡೆಸಿದರು. ಎಐಕೆಎಸ್ ಉಪಾಧ್ಯಕ್ಷ ಆಮ್ರ ರಾಮ್ ಅವರನ್ನು ಬಂಧಿಸಿದರು.

ಶಿಮ್ಲಾದಲ್ಲೂ ಕೆಂಬಾವುಟಗಳ ರೈತರ ರ‍್ಯಾಲಿ

ಎಪ್ರಿಲ್ 3ರಂದು ಹಿಮಾಚಲ ಪ್ರದೇಶದ ರಾಜಧಾನಿ ಶಿಮ್ಲಾ ಕೂಡ ಕೆಂಬಾವುಟಗಳಿಂದ ತುಂಬಿತು. ಎಐಕೆಎಸ್‌ಗೆ ಸೇರಿದ ಹಿಮಾಚಲ ಕಿಸಾನ್ ಸಭಾದ ನೇತೃತ್ವದಲ್ಲಿ ರಾಜ್ಯದ ಎಲ್ಲೆಡೆಗಳಿಂದ ಬಂದ ಸಾವಿರಾರು ರೈತರು ಒಂದು ದೊಡ್ಡ ಪ್ರತಿಭಟನಾ ರ‍್ಯಾಲಿ ನಡೆಸಿದರು. ಭೂಹೀನ ರೈತರಿಗೆ ಐದು ಬೀಘಾ ಜಮೀನು, ಮನರೇಗ ಜಾರಿ ಮತ್ತು ಸರಕಾರದ ಇತರ ಯೋಜನೆಗಳ ಜಾರಿ ರೈತರ ಪ್ರಮುಖ ಬೇಡಿಕೆಗಳಾಗಿದ್ದವು. ರಾಜ್ಯ ವಿಧಾನಸಭೆಯಲ್ಲಿ ಸಿಪಿಐ(ಎಂ) ಸದಸ್ಯ ರಾಕೇಶ್ ಸಿಂಘ, ಹಿಮಾಚಲ್ ಕಿಸಾನ್ ಸಭಾದ ಕುಲದೀಪ್ ಸಿಂಗ್ ತನ್ವರ್ ಮತ್ತು ಎಐಕೆಎಸ್ ಜಂಟಿ ಕಾರ್ಯದರ್ಶಿ ವಿಜೂಕೃಷ್ಣನ್ ರ‍್ಯಾಲಿಯನ್ನುದ್ದೇಶಿಸಿ ಮಾತಾಡಿದರು.



ತ್ರಿಪುರಾ:ಒಂದೆಡೆ ಕಬ್ರಿಸ್ತಾನ್ ಸ್ವಾಧೀನ–ಮತ್ತೊಂದೆಡೆ ಪ್ರತ್ಯೇಕತಾವಾದಿ ಕೂಗು

ತ್ರಿಪುರಾದಲ್ಲಿ ಬಿಜೆಪಿ ಸರಕಾರ ರಚನೆಯಾಗುತ್ತಿದ್ದಂತೆಯೇ ಅಲ್ಪಸಂಖ್ಯಾತರ ಧಾರ್ಮಿಕ ಹಕ್ಕುಗಳ ಮೇಲೆ ಪ್ರಹಾರ ಆರಂಭವಾಗಿದೆ. ಇದಕ್ಕೆ ಇತ್ತೀಚಿನ ಉದಾಹರಣೆಯೆಂದರೆ ರಾಜಧಾನಿ ಅಗರ್ತಲಾದಲ್ಲಿ ಅಲ್ಪಸಂಖ್ಯಾತ ಸಮುದಾಯದ ನೋಂದಾಯಿತ ಕಬ್ರಿಸ್ತಾನದ ಜಮೀನಿನಲ್ಲಿ ಬಿಜೆಪಿ ಮುಖಂಡರು ಎಪ್ರಿಲ್ 1ರಂದು ತಮ್ಮ ಪಕ್ಷದ ಬಾವುಟಗಳನ್ನು ನೆಟ್ಟಿರುವ 'ಪ್ರಕರಣ.

ಇದಲ್ಲದೆ, ಅಲ್ಪಸಂಖ್ಯಾತ ಸಮುದಾಯದವರಿಗೆ ಭಾರತ್ ಮಾತಾಕೀ ಜೈ ಹೇಳುವಂತೆ ಬಲವಂತ ಮಾಡುವುದು, ಹೇಳದಿದ್ದರೆ ಬಡಿಯುವುದು, ಬಿಜೆಪಿ ಮುಖಂಡರು ಭೇಟಿ ನೀಡುವಾಗ ಗೋಮಾಂಸದ ಅಡಿಗೆ ಮಾಡಬಾರದು, ಅಲ್ಪಸಂಖ್ಯಾತರು ಹಸುಸಾಕಣೆ ಮಾಡಬಾರದು ಇತ್ಯಾದಿ ಆದೇಶಗಳನ್ನು ಹೊರಡಿಸುವುದು, ತಾವು ಭಾರತದ ನಾಗರಿಕರು ಎಂದು ಸಾಬೀತು ಮಾಡಿ ಎನ್ನುವುದು ಇತ್ಯಾದಿ ಕಿರುಕುಳಗಳು ನಡೆಯುತ್ತಿವೆ ಎಂದು ತ್ರಿಪುರಾ ರಾಜ್ಯ ಸಿಪಿಐ(ಎಂ) ಕಾರ್ಯದರ್ಶಿ ಬಿಜನ್ ಧರ್ ಹೇಳಿದ್ದಾರೆ. ಇದು ಈ ರಾಜ್ಯದಲ್ಲಿ ಹಿಂದೆಂದೂ ಕಂಡು ಕೇಳರಿಯದ ಸಂಗತಿ ಎಂದು ಅವರು ಹೇಳಿದ್ದಾರೆ.

ಅತ್ತ ಬಿಜೆಪಿ ಅಧಿಕಾರ ವಶಪಡಿಸಿಕೊಳ್ಳಲಿಕ್ಕಾಗಿ ಮಾಡಿಕೊಂಡ ನೀತಿಬಾಹಿರ ಮೈತ್ರಿಯ ದುಷ್ಪರಿಣಾಮಗಳು ಕಾಣಬರಲಾರಂಭಿಸಿವೆ.

ಮಾರ್ಚ್ 30ರಂದು ಆಳುವ ಕೂಟದಲ್ಲಿನ ಐಪಿಎಫ್‌ಟಿಯ ಯುವಜನ ವಿಭಾಗ ಪ್ರತ್ಯೇಕ ಬುಡಕಟ್ಟು ರಾಜ್ಯದ ರಚನೆಯ ಬೇಡಿಕೆಯ ಮೇಲೆ ಧರಣಿ ಮತ್ತು ಉಪವಾಸ ಸತ್ಯಾಗ್ರಹ ನಡೆಸಿತು. "ಅವರು ಆಶ್ವಾಸನೆ ಕೊಟ್ಟಿದ್ದಾರೆ. ಅದನ್ನು ಈಡೇರಿಸಲು ಸಮಿತಿ ರಚನೆ ಯಾವಾಗ ಎಂಬ ಬಗ್ಗೆ ಒಂದು ಸಮಯ ಚೌಕಟ್ಟನ್ನಾದರೂ ಪ್ರಕಟಿಸಬೇಕು" ಎಂದು ಇದರ ಪ್ರಧಾನ ಕಾರ್ಯದರ್ಶಿ ಚರಣ್ ನೊವಾಟಿಯಾ ಆಗ್ರಹಿಸಿರುವುದಾಗಿ ವರದಿಯಾಗಿದೆ.

ಕಳೆದ ಜನವರಿಯಲ್ಲಿ ಕೇಂದ್ರ ಗೃಹಮಂತ್ರಿ ರಾಜ್ನಾಥ್ ಸಿಂಗ್ ಐಪಿಎಫ್‌ಟಿ ಮುಖ್ಯಸ್ಥ ಎನ್‌ಸಿ ಬೇಬಬರ್ಮ ಅವರಿಗೆ ಟ್ರಿಪ್ರಲ್ಯಾಂಡ್ ಬಗ್ಗೆ ಸಮಿತಿಯೊಂದನ್ನು ರಚಿಸುವುದಾಗಿ ಭರವಸೆ ನೀಡಿದ ನಂತರ ಐಪಿಎಫ್‌ಟಿಯೊಂದಿಗೆ ಮೈತ್ರಿಯನ್ನು ಬಿಜೆಪಿ ಪ್ರಕಟಿಸಿತು. ಆದರೆ ಚುನಾವಣಾ ಪ್ರಚಾರದ ವೇಳೆಯಲ್ಲಿ ಬಿಜೆಪಿ ಈ ಬಗ್ಗೆ ಚಕಾರವೆತ್ತದೆ ಅದನ್ನು ಬದಿಗೆ ತಳ್ಳಿತು. ಈಗ ಅಧಿಕಾರಕ್ಕೆ ಬಂದ ಮೇಲೆ ಈ ಸಮಯಸಾಧಕತನ ಸಹಜವಾಗಿಯೇ ಅದನ್ನು ಕಾಡಲಾರಂಭಿಸಿದೆ. ಐಪಿಎಫ್‌ಟಿಯ ವಿದ್ಯಾರ್ಥಿ ಸಂಘಟನೆಯ ಉಪಾಧ್ಯಕ್ಷರೂ "ಒಂದು ಸಮಿತಿಯನ್ನು ರಚಿಸದಿದ್ದರೆ ನಮ್ಮೆಲ್ಲ ಸಂಘಟನೆಗಳು ಬಂಡೇಳುತ್ತವೆ, ಸಾಮೂಹಿಕ ಪ್ರಹಾರಗಳನ್ನು ಮಾಡುತ್ತವೆ" ಎಂದು ಎಚ್ಚರಿಸಿದ್ದಾರಂತೆ.ನಮ್ಮ ಏಕೈಕ ತತ್ವ ಟ್ವಿಪ್ರಲ್ಯಾಂಡ್, ಅದಕ್ಕಾಗಿ ನಮ್ಮ ಮುಖಂಡರು ಮಂತ್ರಿ ಪದವಿಯನ್ನೂ ಬಿಡುತ್ತಾರೆ ಎಂದು ಆತ ಹೇಳಿರುವುದಾಗಿ ವರದಿಯಾಗಿದೆ.

ಆದರೆ ಎಲ್ಲವನ್ನೂ ಚುನಾವಣಾ 'ಜುಮ್ಲಾ'ವಾಗಿ (ಬೊಗಳೆಯಾಗಿ) ಕಾಣುವ ಆಳುವ ಪಕ್ಷದ ಮುಖಂಡರು ಇದನ್ನು ಗಂಭೀರವಾಗಿ ತಗೊಳ್ಳಬೇಕಿಲ್ಲ ಎಂದಿದ್ದಾರೆ. ಐಪಿಎಫ್‌ಟಿ ಉನ್ನತ ಮುಖಂಡರಿಗೆ ಅಧಿಕಾರ ಬೇಕಿತ್ತು, ಅದು ಸಿಕ್ಕಿದೆ, ಪ್ರತ್ಯೇಕ ರಾಜ್ಯದ ಬೇಡಿಕೆ ಕಾರ್ಯಸಾಧ್ಯವಲ್ಲ ಎಂದು ಅವರಿಗೆ ಗೊತ್ತಿದೆ, ತಾವು ಅಯೋಧ್ಯೆಯಲ್ಲಿ ರಾಮಮಂದಿರದ ಬೇಡಿಕೆ ಎತ್ತುತ್ತ ಇರುವಂತೆ ಅವರೂ ಪ್ರತ್ಯೇಕ ರಾಜ್ಯದ ಬೇಡಿಕೆ ಎತ್ತುತ್ತಿರುತ್ತಾರೆ ಎಂದು ಬಿಜೆಪಿಯ ರಾಜ್ಯ ವಕ್ತಾರರು ಪತ್ರಕರ್ತರೊಬ್ಬರಿಗೆ ಹೇಳಿರುವುದಾಗಿ ವರದಿಯಾಗಿದೆ.

'ನಿಗದಿತ ಅವಧಿ ಉದ್ಯೋಗ' ಅಧಿಸೂಚನೆ ವಿರುದ್ಧ ಕೇರಳದಲ್ಲಿ ಐಕ್ಯ ಮುಷ್ಕರ

ಕೇರಳದಲ್ಲಿ 16 ಕಾರ್ಮಿಕ ಸಂಘಟನೆಗಳು ಒಟ್ಟು ಸೇರಿ ಎಪ್ರಿಲ್ 2ರಂದು ರಾಜ್ಯವ್ಯಾಪಿ ಮುಷ್ಕರವನ್ನು ಯಶಸ್ವಿಯಾಗಿ ನಡೆಸಿದವು. ಮೋದಿ ಸರಕಾರ ಇತ್ತೀಚೆಗೆ ಹೊರಡಿಸಿರುವ 'ನಿಗದಿತ ಅವಧಿಯ ಉದ್ಯೋಗ' ದುಡಿಯುವ ಜನಗಳ ಮೇಲೆ ಗುಲಾಮಿಕೆಯನ್ನು ಹೇರುವ,ಅವರನ್ನು ಕಾರ್ಪೊರೇಟ್ ಬಂಡವಾಳಶಾಹಿ ವರ್ಗದ ವಿಧೇಯ ತೊತ್ತುಗಳಾಗಿ ಮಾಡುವ ಕ್ರಮ ಇದು ಎಂದು ಪ್ರತಿಭಟಿಸಿ ಈ ಮುಷ್ಕರವನ್ನು ಕೇರಳದ ಕಾರ್ಮಿಕರು ನಡೆಸಿದ್ದಾರೆ. ಸಂಘ ಪರಿವಾರಕ್ಕೆ ಸೇರಿದ ಬಿಎಂಎಸ್ ಕೂಡ ಈ ಅಧಿಸೂಚನೆಯನ್ನು ಕಟುವಾಗಿ ವಿರೋಧಿಸಿದ್ದರೂ, ರಾಜ್ಯದಲ್ಲಿ ಬಿಎಂಎಸ್ ಮಾತ್ರವೇ ಈ ಮುಷ್ಕರದಲ್ಲಿ ಭಾಗವಹಿಸಲಿಲ್ಲ. ಆದರೆ ಬಿಎಂಎಸ್‌ಗೆ ಸೇರಿದ ಕಾರ್ಮಿಕರೂ ಇದರಲ್ಲಿ ಭಾಗ ವಹಿಸಿದರು ಎಂದಿರುವ ಸಿಐಟಿಯು ದೇಶದ ಇತರೆಡೆಗಳಲ್ಲಿಯೂ ಸೌಹಾರ್ದ ಪ್ರತಿಭಟನಾ ಕಾರ್ಯಾಚರಣೆಗಳನ್ನು ನಡೆಸಿರುವ ಕಾರ್ಮಿಕರನ್ನು ಅಭಿನಂದಿಸಿದೆ.



ಎಸ್‌ಸಿ / ಎಸ್‌ಟಿ ದೌರ್ಜನ್ಯ ತಡೆ ತೀರ್ಪು ಮರು ಪರಿಶೀಲನೆ ಒತ್ತಾಯಿಸಿ ಪ್ರತಿಭಟನಾ ಪ್ರದರ್ಶನ



ಎಸ್‌ಸಿ/ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆಯನ್ನು ಬಲಹೀನಗೊಳಿಸುವ ಸುಪ್ರೀಂ ಕೋರ್ಟಿನ ತೀರ್ಪನ್ನು ವಿರೋಧಿಸಿ ಏಪ್ರಿಲ್ 5 ರಂದು, ಬೆಂಗಳೂರು ನಗರದ ಮೈಸೂರು ಬ್ಯಾಂಕ್ ವೃತ್ತದಲ್ಲಿ ಕರ್ನಾಟಕ ದಲಿತ ಹಕ್ಕುಗಳ ಸಮಿತಿ ಪ್ರತಿಭಟನಾ ಪ್ರದರ್ಶನವನ್ನು ನಡೆಸಿತು.

ದಲಿತ್ ಶೋಷಣ್ ಮುಕ್ತಿ ಮಂಚದ ಕೇಂದ್ರ ಸಮಿತಿ ಹಾಗೂ ದಲಿತ ಹಕ್ಕುಗಳ ಸಮಿತಿ ಕರ್ನಾಟಕ ರಾಜ್ಯ ಸಮಿತಿಗಳ ಕರೆಯಂತೆ ನಡೆದ ಪ್ರತಿಭಟನಾ ಪ್ರದರ್ಶನವು ರಾಜ್ಯದ ವಿವಿಧ ದಲಿತ ಸಂಘಟನೆಗಳ ಜಂಟಿ ಹೋರಾಟವಾಗಿ ಏರ್ಪಟ್ಟಿತು. ರಾಜ್ಯ ಸಂಚಾಲಕ ಗೋಪಾಲಕೃಷ್ಣ ಅರಳಹಳ್ಳಿ, ಸಹ ಸಂಚಾಲಕರಾದ ನಿತ್ಯಾನಂದಸ್ವಾಮಿ, ಎನ್. ನಾಗರಾಜ, ಎನ್. ರಾಜಣ್ಣ, ಹೆಚ್.ಜಿ. ನಾಗಣ್ಣರವರು ಪ್ರತಿಭಟನಾ ಪ್ರದರ್ಶನದಲ್ಲಿ ಪಾಲ್ಗೊಂಡು ಮಾತನಾಡಿದರು.

ರಾಜ್ಯ ದಲಿತ ಮುಖಂಡರಾದ ಮಾವಳ್ಳಿ ಶಂಕರ್, ಮೋಹನ್‌ರಾಜ್, ಎಂ. ವೆಂಕಟೇಟಸ್ವಾಮಿ, ಮುನಿಸ್ವಾಮಿ, ಲಕ್ಷ್ಮಿ ನಾರಾಯಣ ನಾಗವಾರ, ಎನ್. ಮೂರ್ತಿ, ಮುನಿ ಆಂಜನಪ್ಪ ರಾಜ್ಯ ಸರ್ಕಾರಿ ಎಸ್‌ಸಿ/ಎಸ್‌ಟಿ ನೌಕರರ ಸಂಘದ ಅಧ್ಯಕ್ಷ ಡಿ. ಶಿವಶಂಕರ್ ನೌಕರರ ಕೇಂದ್ರದ ಮಾಯುಶ್ರೀ ಮುಂತಾದವರು ಮಾತನಾಡಿ. ಹಲ್ಲೆ ದೌರ್ಜನ್ಯ ನಡೆಸುವವರು ಅಮಾಯಕರು ಮುಗ್ಧರು ಎಂಬ ತೀರ್ಪಿನ ಹಿಂದಿರುವ ತೀರ್ಮಾನ ದಲಿತ ಜನಾಂಗಕ್ಕೆ ಮಾರಕವಾಗಲಿದೆ. ರಾಜ್ಯದಲ್ಲಿ ಕಂಬಾಲಪಲ್ಲಿಯಲ್ಲಿ ಜೀವಂತ ಸುಟ್ಟ ಪ್ರಕರಣದಲ್ಲಿ ಸಾಕ್ಷಿಗಳು ನ್ಯಾಯಾಲಯಕ್ಕೆ ಹಾಜರಾಗಲು ಬಿಡದ ಕ್ರೂರತನಕ್ಕೆ ಸಾಕ್ಷಿಯಾಗಿದ್ದು ಈ ರೀತಿಯ ಸಾವಿರಾರು ಘಟನೆಗಳಲ್ಲಿ ಯಾವೊಬ್ಬ ವ್ಯಕ್ತಿಗೂ ಶಿಕ್ಷೆಯಾಗದಿರುವುದು ನಿದರ್ಶನ. ಮರುಪರಿಶೀಲನೆಗೆ ನಿರಾಕರಿಸುವ ಮೂಲಕ ನ್ಯಾಯಾಧೀಶರು ಮೋದಿ ಸರ್ಕಾರದ ಅಣತಿಯಂತೆ ನಡೆಯುತ್ತಿರುವುದನ್ನು ಎಲ್ಲಾ ಮುಖಂಡರು ಖಂಡಿಸಿದರು.

ಪ್ರತಿಭಟನಾ ಪ್ರದರ್ಶನದ ನಂತರ ಬೆಂಗಳೂರು ಜಿಲ್ಲಾಧಿಕಾರಿಯವರ ಬಳಿ ನಿಯೋಗ ತೆರಳಿ ಕೇಂದ್ರ ಸರ್ಕಾರವು ಮನವಿಯೊಂದನ್ನು ಅರ್ಪಿಸಿತು.

ದಲಿತ ಹಕ್ಕುಗಳ ಸಮಿತಿಯ ನೇತೃತ್ವದಲ್ಲಿ ಹಾಸನ, ಹೊಸಪೇಟೆ, ವಿಜಯಪುರ ಸೇರಿದಂತೆ ರಾಜ್ಯದ ಹಲವು ಭಾಗಗಳಿಂದ ಇಂತಹ ಪ್ರತಿಭಟನೆಗಳೂ ನಡೆದ ವರದಿಗಳು ಬಂದಿವೆ.



ದಲಿತ ಚಳುವಳಿ ಒಕ್ಕೂಟದಿಂದ ರಾಜ್ಯದಲ್ಲಿ ಹೋರಾಟಕ್ಕೆ ಕರೆ



ಪರಿಶಿಷ್ಟ ಜಾತಿ – ಪಂಗಡ ದೌರ್ಜನ್ಯ ತಡೆ ಮಸೂದೆ ದುರ್ಬಲಗೊಳಿಸಿ ಸುಪ್ರಿಂ ಕೋಟು ವಿವಾದಾತ್ಮಕ ತೀರ್ಪು ಪ್ರಕಟಿಸಿದೆ. ಬೆಂಗಳೂರು ವಕೀಲರ ಸಂಘದ ವತಿಯಿಂದ ತೀರ್ಪಿನ ಪರಿಣಾಮಗಳು ಹಾಗೂ ರಾಜ್ಯದಾದ್ಯಂತ ಚಳುವಳಿ ಮುಂದಿನ ನಡೆ ಬಗ್ಗೆ ಚರ್ಚಿಸಿ ನಿರ್ಧಾರ ಕೈಗೊಳ್ಳಲು ಬೆಂಗಳೂರಿನ ಕೆ.ಆರ್. ವೃತ್ತದಲ್ಲಿರುವ ಸಭಾಂಗಣದಲ್ಲಿ ಸಭೆಯೊಂದನ್ನು ಏರ್ಪಡಿಸಲಾಗಿತ್ತು.

ಎನ್ರಿ ಫಾನ್ಸಿ ರವರು ಈ ತೀರ್ಪಿನ ಬಗ್ಗೆ ವಿಶ್ಲೇಷಣಾತ್ಮಕವಾಗಿ ತಮ್ಮ ಅಭಿಪ್ರಾಯ ಮಂಡಿಸಿದರು. ರಾಜ್ಯದ ಹಲವು ವಕೀಲರುಗಳಾದ ಬಾಲನ್. ನಾರಾಯಣಸಾಮಿ. ಮುಂತಾದವರು ಕಾಯ್ದೆಯ ವಿವಿಧ ಆಯಾಮಗಳನ್ನು ಮತ್ತು ಈ ತೀರ್ಪಿನ ಹಿಂದಿನ ಕೇಂದ್ರ ಸರ್ಕಾರದ ಧೋರಣೆಯನ್ನು ವಿವರಿಸಿದರು. ದಲಿತ ಸಂಘಟನೆಯ ಮುಖಂಡರಾದ ಗೋಪಾಲಕೃಷ್ಣ ಅರಳಹಳ್ಳಿ, ಎನ್. ಮುನಿಸ್ವಾಮಿ, ಲಕ್ಷ್ಮಿ ನಾರಾಯಣ ನಾಗವಾರ, ಮಾವಳ್ಳಿ ಶಂಕರ್, ಮೋಹನ್ ರಾಜ್, ಎಸ್‌ಸಿ/ಎಸ್‌ಟಿ ಸರ್ಕಾರಿ ನೌಕರ ಸಂಘದ ಅಧ್ಯಕ್ಷ ಡಿ. ಶಿವಶಂಕರ್ ಪಾಲ್ಗೊಂಡಿದ್ದರು. ರಾಜ್ಯದಾದ್ಯಂತ ಈ ಕುರಿತು ಮುಂದಿನ ಹೋರಾಟದ ರೂಪರೇಷೆಯೊಂದನ್ನು ದಲಿತ ಸಂಘಟನೆಗಳ ಒಕ್ಕೂಟ ಕಾರ್ಯಕ್ರಮ ರೂಪಿಸಲು ಹಾಗೂ ಮುಂದಿನ ಚುನಾವಣೆಯಲ್ಲಿ ದಲಿತ ವಿರೋಧಿ ಬಿಜೆಪಿ ಪಕ್ಷ ಕರ್ನಾಟಕ ರಾಜ್ಯದಲ್ಲಿ ಅಧಿಕಾರಕ್ಕೆ ಬರದಂತೆ ತಡೆಯುವ ಎಲ್ಲಾ ಪ್ರಯತ್ನವನ್ನು ಮಾಡಲು ನಿರ್ಧಾರ ಕೈಗೊಳ್ಳಲಾಯಿತು.

–ಎನ್. ರಾಜಣ್ಣ

ಖಾಯಂ ಕೆಲಸ ಖತಂ ಮಾಡುವ ಕಾನೂನು

ಕಾರ್ಮಿಕರನ್ನು ನೇಮಕ ಮಾಡಿಕೊಳ್ಳಲು ಮಾಲೀಕರಿಗೆ ಮುಕ್ತ ಅವಕಾಶ ನೀಡುವ ಹೊಸ ಕಾಯ್ದೆ ಜಾರಿ ಮಾಡಿದೆ ವಿಶ್ವಗುರು ಮೋದಿ ಸರ್ಕಾರ. ಅಂದರೆ ಇನ್ನು ಮುಂದೆ ಈ ಕಾಯ್ದೆ ಪ್ರಕಾರ ಖಾಯಂ ಕೆಲಸ ಎನ್ನುವುದು ಖತಂ.

16.03.2018ರಂದು ಕೇಂದ್ರದ ಬಜೆಟ್ ಅನುಮೋದನೆಯ ಭಾಗವಾಗಿ ಎಲ್ಲಾ ಕೈಗಾರಿಕೆಗಳ ಮಾಲೀಕರಿಗೆ

"ನಿಗದಿತ ಅವಧಿ"ಯ (ಫಿಕ್ಸಡ್ ಟರ್ಮ) ಕಾರ್ಮಿಕರನ್ನು ನೇಮಕ ಮಾಡಲು ಮುಕ್ತ ಅವಕಾಶ ನೀಡುವ ದೇಶ ದ್ರೋಹಿ ಆದೇಶ ಕೇಂದ್ರ ಸರ್ಕಾರದಿಂದ ಹೊರ ಬಿದ್ದಿದೆ.

ಮುಕ್ತವಾಗಿ ವ್ಯಾಪಾರ ಮಾಡುವ ಹಕ್ಕನ್ನು ಬಂಡವಾಳಗಾರರಿಗೆ ಖಾತರಿಗೊಳಿಸುವ ಸಲುವಾಗಿ ಈ ಕಾರ್ಮಿಕ ವಿರೋಧಿ ತೀರ್ಮಾನವನ್ನು ಸರ್ಕಾರ ಮಾಡಿದೆ.


'Industrial Employment Standing Orders Act'ಗೆ ತರಲಾಗಿರುವ ಈ ತಿದ್ದುಪಡಿಯಿಂದ 'ಖಾಯಂ ಕೆಲಸ' ಎಂಬ ವ್ಯವಸ್ಥೆ ಭಾರತದಲ್ಲಿ ಇರುವುದಿಲ್ಲ. ನಿರುದ್ಯೋಗದಿಂದ ನರಳುತ್ತಿರುವ ಭಾರತೀಯ ಯುವಜನರಿಗೆ ಯೋಗ್ಯ ಉದ್ಯೋಗದ ಅವಕಾಶ ಎಂಬುದು ಮರೀಚಿಕೆ ಆಗಲಿದೆ. ಅತಿ ಕಡಿಮೆ ವೇತನ ಹಾಗು ನೇಮಕಾವಧಿ ಮುಗಿದ ಕೂಡಲೇ ಯಾವುದೆ ಪರಿಹಾರವಿಲ್ಲದೆ ಕೆಲಸ ಕಳೆದು ಕೊಳ್ಳಬೇಕಾಗುತ್ತದೆ.

ಯಾವುದೇ ಕಾನೂನು ಬದ್ಧ ಸೌಲಭ್ಯಗಳನ್ನು ಈ ಕಾರ್ಮಿಕರು ಕೇಳುವಂತಿಲ್ಲ.ಹಾಗೆಯೇ ಮಾಲೀಕರು ಮಾಡುವ ಈ **"ಫಿಕ್ಸಡ್ ಟರ್ಮ"** ಒಪ್ಪಂದದ ಕರಾರು ಮಾತ್ರವೇ ಕಾನೂನಾಗುತ್ತದೆ. ಈ ಕಾನೂನು ತಿದ್ದುಪಡಿಯಿಂದ ಉದ್ಯೋಗ ಅವಕಾಶಗಳು ದೇಶದಲ್ಲಿ ಹೆಚ್ಚಾಗಲಿದೆ ಎಂದು ಸರ್ಕಾರ ಹಸಿ ಹಸಿ ಸುಳ್ಳನ್ನು ಹೇಳುತ್ತಿದೆ.

ಕೇಂದ್ರ ಸರ್ಕಾರದ ಕಾರ್ಮಿಕ ಮತ್ತು ಯುವಜನರ ವಿರೋಧಿ ಆದ ಈ ಕರಾಳ ಕಾಯ್ದೆ ವಿರುದ್ಧ ಸಿಐಟಿಯು ನೇತೃತ್ವದಲ್ಲಿ ತುಮಕೂರು, ಹಾಸನ, ಮಂಡ್ಯ ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಪ್ರತಿಭಟನೆ ನಡೆಸಲಾಗಿದೆ. ಬೆಂಗಳೂರಿನ ಟೌನ್ ಹಾಲ್ ಮುಂದೆ ಏಪ್ರಿಲ್ 2ರಂದು ಮುಖ್ಯ ಪ್ರತಿಭಟನೆ ನಡೆಯಿತು.



ಬಂಡಾಯ ಕವಿ ಸಂಗಾತಿ ಶೇಷಗಿರಿ ಹವಾಲ್ದಾರ್ ಇನ್ನಿಲ್ಲ !



ಬಂಡಾಯ ಕವಿ ಸಂಗಾತಿ ಶೇಷಗಿರಿ ಹವಾಲ್ದಾರ್ ಏ.5 ರಂದು ಹೂವಿನಹಡಗಲಿಯಲ್ಲಿ ಬೆಳಗಿನ ಜಾವ ಸುಮಾರು 3 ಗಂಟೆಗೆ ತೀವ್ರ ಹೃದಯಾಘಾತದಿಂದ ಅಗಲಿದ ಸುದ್ದಿ ಬಂದಿದೆ.

ಶೇಷಗಿರಿ ಯವರು 2010 ಜುಲೈ 26 ರಂದು ಕಿಡ್ನಿ ಕಸಿಯ ಶಸ್ತ್ರಚಿಕಿತ್ಸೆ ಗೆ ಒಳಗಾಗಿದ್ದರು. ವಿದ್ಯಾರ್ಥಿ ದೆಸೆಯಿಂದಲೇ ಸಾಮಾಜಿಕ ಬದ್ಧತೆ, ಜನಪರವಾಗಿ ಯೋಚಿಸುತ್ತಾ, ಪ್ರಗತಿಪರ ಚಳುವಳಿಯಲ್ಲಿ ತೊಡಗಿ ಅದೇ ಹಾದಿಯಲ್ಲಿ ನಡೆದು ಬಂದ ಅವರು ತಮ್ಮ ದೇಹವನ್ನು ವೈದ್ಯಕೀಯ ಸಂಶೋಧನೆಗೆ ಕೊಡಲು ನಿರ್ಧರಿಸಿದ್ದರು.

ಸಂಗಾತಿ ಶೇಷಗಿರಿ ಹೊಸಪೇಟೆ ವಿಜಯನಗರ ಕಾಲೇಜಿನ ವಿದ್ಯಾರ್ಥಿಯಾಗಿರುವಾಗಲೇ ಸಾಹಿತ್ಯಿಕ ಚಟುವಟಿಕೆಗಳಲ್ಲಿ ತೊಡಗಿದ ಅವರು 1980 ರ ಸುಮಾರಿನಲ್ಲಿ ಬಂಡಾಯ, ಸಮುದಾಯ ಸಾಂಸ್ಕೃತಿಕ ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿದರು. ವಿಶೇಷವೆಂದರೆ ನೂರಾರು ಸದಸ್ಯರನ್ನು ಹೊಂದಿರುವ ಇಡೀ 'ಹವಲ್ದಾರ್ ಫ್ಯಾಮಿಲಿ'ಯನ್ನು ಪ್ರಗತಿಪರ ಚಿಂತನೆಯತ್ತ ಸೆಳೆಯುವಲ್ಲಿ ಮಹತ್ವದ ಪಾತ್ರ ವಹಿಸಿದ್ದು, ಹಾಗೆಯೇ ಎಡ ಹಾಗೂ ಪ್ರಜಾಸತ್ತಾತ್ಮಕ ಜನಾಂದೋಲನಕ್ಕೆ ಅವರ ಕೊಡುಗೆ ಸ್ಮರಣೀಯ.

ಸಂಗಾತಿ ಶೇಷಗಿರಿಯವರ ಅನಿರೀಕ್ಷಿತ, ಅಕಾಲಿಕ ಅಗಲಿಕೆ ಅಘಾತಕಾರಿ. ಅಪಾರ ಹಾನಿ.

ಅವರ ದೇಹದಾನವನ್ನು ಬಳ್ಳಾರಿ ಮೆಡಿಕಲ್ ಕಾಲೇಜಿಗೆ ಮಾಡಲಾಗಿದೆ.

– ಎಸ್. ವೈ. ಗುರುಶಾಂತ್

JANASHAKTHI KANNADA VARA PATRIKE APRIL 9-15, 2018 Price: Rs. 10/- Date of Publication: 6 APRIL 2018 RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

ಕೃಷ್ಣರಾಜಪುರ : ಕಾರ್ಮಿಕ ಕ್ಷೇತ್ರ

ಕ್ಷೇತ್ರ ಸಮೀಕ್ಷೆ



ಕರ್ನಾಟಕ ವಿಧಾನ ಸಭೆಯ 224 ವಿಧಾನಸಭಾ ಕ್ಷೇತ್ರಗಳಲ್ಲಿ ರಾಜಧಾನಿ ಬೆಂಗಳೂರು ನಗರದಲ್ಲಿ 28 ವಿಧಾನಸಭಾ ಕ್ಷೇತ್ರಗಳಿವೆ. ಇದರಲ್ಲಿ ಕೃಷ್ಣರಾಜಪುರ ಕ್ಷೇತ್ರವು ಒಂದೆಂದು ಸಾಧಾರಣವಾಗಿ ಹೇಳಬಹುದಾದರೂ, ಈ ಕ್ಷೇತ್ರಕ್ಕೆ ವಿಭಿನ್ನ ರೀತಿಯ ಚರಿತ್ರೆಯಿದೆ. ಏನು ಈ ಚರಿತ್ರೆ?

ನಾಗರಾಜ ನಂಜುಂಡಯ್ಯ



ಕೃಷ್ಣರಾಜಪುರ ಹೆಸರಿನಲ್ಲಿಯ 'ಕೃಷ್ಣರಾಜ' ಎಂಬ ಮೈಸೂರಿನ ಸಂಸ್ಥಾಪನಾ ಕುಟುಂಬ 24ನೇ ಮಹಾರಾಜರಾದ ನಾಲ್ವಡಿ ಕೃಷ್ಣರಾಜರಿಂದ ಬಂದಿದ್ದು. ಅಂದಿನ ಬೆಂದಕಾಳೂರಿನ ಹಲವು ಪ್ರದೇಶಗಳ ಪ್ರಗತಿಯನ್ನು ಪರಿಶೀಲಿಸಲು ನಾಲ್ವಡಿಯವರು ಆಗಾಗ ಈ ಸ್ಥಳಕ್ಕೆ ಬಂದು ಹೋಗುತ್ತಿದ್ದರಂತೆ, ಆದ್ದರಿಂದ ಅವರ ಹೆಸರನ್ನೇ 'ಕೃಷ್ಣರಾಜ'ಪುರ ವೆಂದು ನಾಮಾಂಕಿತವಾಯಿತೆಂದು ಇಲ್ಲಿನ ಚರಿತ್ರೆ ತಿಳಿಸುತ್ತದೆ. ಈ ಪ್ರದೇಶದಲ್ಲಿ ಒಂದು ಪ್ರಸಿದ್ಧ ಮಾರುಕಟ್ಟೆಯೂ ಇದೆ. ಇದು ಕೃಷ್ಣರಾಜಪುರ ಮಾರುಕಟ್ಟೆ ಎಂದೇ ಹೆಸರು ಹೊಂದಿದೆ. ಈ ಮಾರುಕಟ್ಟೆಗೆ 160 ವರುಷಕ್ಕೂ ಹೆಚ್ಚು ಇತಿಹಾಸವಿದೆ. ಬೆಂಗಳೂರಿನಲ್ಲಿರುವ "ಸಿಟಿ ಮಾರ್ಕೆಟ್ಟ್"ನ ಅಧಿಕೃತ ಹೆಸರು ಸಹ ಕೃಷ್ಣರಾಜೇಂದ್ರ ಮಾರುಕಟ್ಟೆ ಎಂದೇ. ಇಂದು ಇದೊಂದು ವಿಧಾನಸಭಾ ಕ್ಷೇತ್ರವಾಗಿದೆ. ಹೆಸರಿನ ಮಹತ್ವವಿದಾದರೆ ರಾಜಕೀಯವಾಗಿ ವಿಧಾನಸಭಾ ಕ್ಷೇತ್ರವಾಗುವ ಮುನ್ನಾ, ಇದು ವರ್ತೂರು ವಿಧಾನಸಭಾ ಕ್ಷೇತ್ರದಲ್ಲಿ ಬೆರೆತು ಹೋಗಿತ್ತು. 2008 ರಲ್ಲಿ ವರ್ತೂರಿನಿಂದ ಬೇರ್ಪಟ್ಟು ಪ್ರತ್ಯೇಕವಾದ ಕೃಷ್ಣರಾಜಪುರ ಕ್ಷೇತ್ರವಾಗಿ ನಾಮಾಂಕಿತವಾಯಿತು. ಅಂದಿನ ವರ್ತೂರು ವಿಧಾನಸಭಾ ಕ್ಷೇತ್ರದಲ್ಲಿ ಇಂದಿನ ಮಹಾದೇವಪುರ ಸ್ವಲ್ಪ ಹೊಸಕೋಟೆ ಹಾಗೂ ಸಿ.ವಿ. ರಾಮನ್ ನಗರ ಕ್ಷೇತ್ರಗಳ ಹಲವು ಪ್ರದೇಶಗಳು ಸೇರಿಕೊಂಡಿದ್ದವು.



1983 ರ ವರೆಗೂ ವರ್ತೂರು ಕ್ಷೇತ್ರ ಕಾಂಗ್ರೆಸಿನ ಭದ್ರಕೋಟೆಯಾಗಿತ್ತು. ಈ ಕ್ಷೇತ್ರದಿಂದ ಹಲವು ಬಾರಿ ಎ. ಕೃಷ್ಣಪ್ಪ (ದಿವಂಗತರಾಗಿದ್ದಾರೆ) ನವರು ಎಂ.ಎಲ್.ಎ. ಆಗಿ ಆಯ್ಕೆಗೊಂಡು, ಸಚಿವರು ಸಹ ಆಗಿದ್ದರು. ಆಗ ದೇವರಾಜ ಅರಸು ರವರ ಕಾಲ ಮುಗಿದಾಗಿತ್ತು. ಗುಂಡೂರಾವ್‌ರವರ ದರ್ಬಾರು ಮಿತಿ ಮೀರಿದ್ದ ಕಾಲವಾಗಿತ್ತು. (ಬೆಂಗಳೂರು ರೌಡಿಗಳ ತಾಣವಾಗಿತ್ತು ಎಂಬುದನ್ನು ಯಾರು ಅಲ್ಲಗಳೆಯಲಾರರು ಕೂಡ.) ಮುಖ್ಯಮಂತ್ರಿ ಗುಂಡೂರಾಯರ ಆಡಳಿತವು ರೈತ ವಿರೋಧಿ ಮತ್ತು ಕಾರ್ಮಿಕ ವಿರೋಧಿಯಾದ್ದರಿಂದ, ಹತ್ತು ಹಲವು ಹೋರಾಟಗಳು ಬೆಳೆದು ಬಂದವು. ನರಗುಂದ – ನವಲಗುಂದ ರೈತ ಚಳುವಳಿ ಒಂದೆಡೆಯಾದರೆ, ಮತ್ತೊಂದೆಡೆ ಸಾರ್ವಜನಿಕ ಉದ್ಯಮಗಳ ಚಳುವಳಿಗಳ ತಾಣವಾಗಿ ಬೆಂಗಳೂರು ಪರಿವರ್ತನೆಗೊಂಡಿತ್ತು. ಈ ಹೋರಾಟಗಳ ಇತಿಹಾಸವನ್ನೂ ಯಾರು ಮರೆಯಲು ಸಾಧ್ಯವೇ ಇಲ್ಲ ಎಂದು ಹಲವು ಹಿರಿಯರು ಈಗಲೂ ಹೇಳುವುದುಂಟು.

ದೇಶದಲ್ಲಿಯೇ ಬೆಂಗಳೂರು ಬೃಹತ್ ಸಾರ್ವಜನಿಕ ಉದ್ಯಮಗಳ ತಾಣವಾಗಿತ್ತು. ಐ.ಟಿ.ಐ., ಹೆಚ್.ಎ.ಎಲ್., ಬಿ.ಇ.ಎಲ್., ಬಿ.ಇ.ಎಂ.ಎಲ್., ಬಿ.ಎಚ್.ಇ.ಎಲ್., ಹೆಚ್.ಎಂ.ಟಿ., ಎನ್.ಜಿ.ಇ.ಎಫ್, ಇನ್ನಿತರೆ, ಜೊತೆಗೆ ಬಹುರಾಷ್ಟ್ರೀಯ ಕಂಪನಿಗಳಾದ ಮೈಕೋ, ಐಟಿಸಿ ಯಂತಹ ಭಾರೀ ಕೈಗಾರಿಕೆಗಳು ಇವುಗಳೊಂದಿಗೆ ರಾಜಾಮಿಲ್ಸ್, ಬಿನ್ನಿಮಿಲ್ ಹಾಗೂ ಮಿನರ್ವ ಮಿಲ್‌ಗಳು ಬರೆದುಕೊಂಡು ಹೋದರೆ ಮತ್ತಷ್ಟು ಸಿಗುತ್ತವೆ. ಕ್ಷೇತ್ರದ ಪ್ರದೇಶದಲ್ಲಿ ಪ್ರಮುಖವಾಗಿ ಹೆಚ್.ಎ.ಎಲ್., ಬಿ.ಇ.ಎಲ್., ಎನ್.ಜಿ.ಇ.ಎಫ್. ಕಾರ್ಮಿಕರು ದೊಡ್ಡ ಸಂಖ್ಯೆಯಲ್ಲಿ ವಾಸವಾಗಿದ್ದು ಕಾರ್ಮಿಕ ಕೇಂದ್ರವೆನಿಸಿತ್ತು. ಒಟ್ಟಾರೆಯಾಗಿ ಬೆಂಗಳೂರು ಸಾರ್ವಜನಿಕ ಉದ್ಯಮಗಳ ಕಾರ್ಮಿಕರಿಂದ ತುಂಬಿ ಹೋಗಿದ್ದ ಕಾಲ ಅದಾಗಿತ್ತು. ಇನ್ನು ಸಾರ್ವಜನಿಕ ಕಾರ್ಮಿಕರ ಮುಷ್ಕರವೆಂದರೆ ಬೆಂಗಳೂರೆ 'ಬಿಕೋ.. ಬಿಕೋ.. ಬಂದು'. ಈ ಹಿನ್ನೆಲೆಯಲ್ಲಿ 1983 ರಲ್ಲಿ ಗುಂಡೂರಾವ್ ನೇತೃತ್ವದ ಸರ್ಕಾರದ ವಿರುದ್ಧ ಎದ್ದಿದ ಆಡಳಿತ ವಿರೋಧಿ ಅಲೆಯಲ್ಲಿ ಕರ್ನಾಟಕದ ಕಾಂಗ್ರೆಸ್ ಕೊಚ್ಚಿ ಹೋಯಿತು. ವರ್ತೂರು ವಿಧಾನಸಭಾ ಕ್ಷೇತ್ರದಿಂದ ಸಿಪಿಐ(ಎಂ) ಪಕ್ಷದಿಂದ ಕಾರ್ಮಿಕ ಮುಖಂಡರಾಗಿದ್ದ ಕಾ. ಎಸ್. ಸೂರ್ಯನಾರಾಯಣ ರಾವ್ ರವರು ಕಾಂಗ್ರೇಸ್ ನ ಎ. ಕೃಷ್ಣಪ್ಪರವರ ವಿರುದ್ಧ ಜಯಗಳಿಸಿ ಇತಿಹಾಸ ಸೃಷ್ಟಿಸಿದ್ದರು. 1985 ರಲ್ಲಿ ನಡೆದ ಚುನಾವಣೆಯಲ್ಲಿ ಕಾ. ಸೂರಿಯವರು ಸೋತರು. 1999 ರಲ್ಲಿ ಮತ್ತೆ ಸಿಪಿಐ(ಎಂ)ನಿಂದ ಕಾಂ. ಗೋಪಾಲಗೌಡರು ಸಿಪಿಐ(ಎಂ) ನಿಂದ ವರ್ತೂರಿನಿಂದ ಸ್ಪರ್ಧಿಸಿದ್ದರು. ಆ ನಂತರ 2008 ರಲ್ಲಿ ಎ. ಕೃಷ್ಣಪ್ಪರವರ ವಿರುದ್ಧ, ಬಿಜೆಪಿಯ ಎನ್.ಎಸ್. ನಂದೀಶ್‌ರೆಡ್ಡಿ ಗೆದ್ದರು. 2013 ರಲ್ಲಿ ಕಾಂಗ್ರೆಸ್‌ನ ಬೈರತಿ ಬಸವರಾಜು ರವರು ಬಿಜೆಪಿಯ ವಿರುದ್ಧ ಗೆದ್ದು, ಮತ್ತೆ 2018 ರ ಪ್ರಸ್ತುತ ಚುನಾವಣೆಯಲ್ಲಿ ಮರು ಆಯ್ಕೆಗೆ ಸ್ಪರ್ಧಿಸಲಿದ್ದಾರೆ. ಸಿಪಿಐ(ಎಂ)ನಿಂದ ಹೆಚ್.ಎನ್. ಗೋಪಾಲಗೌಡರು, ಬಿಜೆಪಿಯಿಂದ ಮತ್ತೆ ನಂದೀಶ್‌ರೆಡ್ಡಿಯವರೆ ಸ್ಪರ್ಧಿಸುವ ಸಾಧ್ಯತೆ ಇದೆ. ಚುನಾವಣೆಗೆ ಕಣ ಸಿದ್ದವಾಗಿದೆ. ಬೆಂ. ಉತ್ತರ ಲೋಕಸಭೆ ಈ ಕ್ಷೇತ್ರವನ್ನು ಒಳಗೊಂಡಿದೆ. ಸದಾನಂದಗೌಡರು ಲೋಕಸಭಾ ಸದಸ್ಯರಾಗಿದ್ದಾರೆ.

ಕೆ.ಆರ್.ಪುರಂ–ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿ

ಕೃಷ್ಣರಾಜಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯೊಳಗೆ 4.75 ಲಕ್ಷ ಜನ ಸಂಖ್ಯೆಯಿದೆ. ಇದರಲ್ಲಿ ಶೇ.58 ರಷ್ಟು ಮದ್ಯಮ ವರ್ಗದವರಿದ್ದಾರೆ. ಶೇ. 22 ರಷ್ಟು ಜನಸಂಖ್ಯೆ ಪ್ರತಿ ವರ್ಷ ವಲಸೆಗಾರರಿದ್ದಾರೆ. ಕನ್ನಡ ಭಾಷೆ ಮಾತನಾಡುವವರ ಸಂಖ್ಯೆ ಶೇ. 82 ರಷ್ಟು ಇದೆ. ಉಳಿದವರು ತಮಿಳು, ತೆಲಗು, ಹಿಂದಿ, ಬಂಗಾಳಿ, ಮಲೆಯಾಳಂ ಕೂಡ ಮಾತನಾಡುವವರಿದ್ದಾರೆ. ಬೇರೆ ಭಾಷಿಕರಲ್ಲಿ ಬಹುದೊಡ್ಡ ಸಂಖ್ಯೆಯಲ್ಲಿ ಕನ್ನಡ ಮಾತನಾಡುತ್ತಾರೆ. ಒಟ್ಟಾರೆಯ ಜನ ಸಂಖ್ಯೆಯಲ್ಲಿ ಶೇ. 52 ರಷ್ಟು ಪುರುಷರು, ಶೇ. 48 ರಷ್ಟು ಮಹಿಳೆಯರಿದ್ದಾರೆ. ಶೇ. 78 ರಷ್ಟು ಅಕ್ಷರಸ್ಥರಿದ್ದಾರೆ. ರಾಷ್ಟ್ರೀಯ ಸರಾಸರಿ ಶೇ. 60 ಕ್ಕಿಂತ ಹೆಚ್ಚು. ಪುರುಷರಲ್ಲಿ ಶೇ. 83 ರಷ್ಟು ಅಕ್ಷರಸ್ಥರಿದ್ದಾರೆ. ಮಹಿಳೆಯರಲ್ಲಿ ಶೇ. 71 ರಷ್ಟಿದೆ. ಶೇ. 11 ರಷ್ಟು ಜನ 17 ವರ್ಷಕ್ಕಿಂತ ಕೆಳಗಿನವರು. ಶೇ. 30 ರಷ್ಟು ಜನ 40 ವರ್ಷಕ್ಕಿಂತ ಹೆಚ್ಚಿನವರಿದ್ದಾರೆ.

ಕೆ.ಆರ್. ಪುರಂ ಸಂತೆಗೆ 160 ವರ್ಷದ ಇತಿಹಾಸವಿದೆ. ಹಿಂದಿನ ಕಾಲದಲ್ಲಿ ಸುತ್ತ–ಮುತ್ತ ಇರುವ ಹಳ್ಳಿಗಳಿಂದ ತರಕಾರಿ–ಹಣ್ಣು ಹಂಪಲು ತಂದು ರೈತರು ವಾರಕ್ಕೊಮ್ಮೆ ಇಲ್ಲಿ ಸಂತೆಯಲ್ಲಿ ತಂದು ಮಾರುತ್ತಿದ್ದರು. ಈಗಲೂ ಪ್ರತಿ ಮಂಗಳವಾರ ಇಲ್ಲಿ, ಸಂತೆ ಪ್ರಮುಖ ವಾಣಿಜ್ಯ ಮಳಿಗೆಯಾಗಿಯೇ ಮುಂದುವರಿಯುತ್ತಿದೆ. ಇಲ್ಲಿ ನಮ್ಮ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಬ್ರಿಡ್ಜ್ ಇಂಜಿನಿಯರ್ಸ್ ರವರು, ಕಟ್ಟಿದ ಕೇಬಲ್ ಬ್ರಿಡ್ಜ್ – ಹಳೇ ಮದ್ರಾಸ್ ರಸ್ತೆ ಮತ್ತು ರಿಂಗ್ ರಸ್ತೆಗೆ ಸಂಪರ್ಕ ಕಲ್ಪಿಸುವ – ತೂಗು ಸೇತುವೆ ಈ ಪ್ರದೇಶದಲ್ಲಿದೆ. ಇದೀಗ ಬೆಂಗಳೂರು ಸಿಲಿಕಾನ್ ಸಿಟಿಯಾಗಿದೆ. ಸಾಫ್ಟ್‌ವೇರ್ ಕಂಪನಿಗಳು ತಲೆ ಎತ್ತಿ ನೂರಾರು ಬಹುರಾಷ್ಟ್ರೀಯ ಕಂಪನಿಗಳಿಗೆ ತವರೂರಾಗಿದೆ. ಕೆ.ಆರ್.ಪುರಂ ಕ್ಷೇತ್ರವು ಹೊಂದಿಕೊಂಡಿದೆಯಾದರೂ, ಸ್ಥಳಿಯರಿಗೆ ಹೆಚ್ಚಿನ ಉದ್ಯೋಗ ಇಲ್ಲಿ ಸಿಗುತ್ತಿಲ್ಲ. ಸಾರ್ವಜನಿಕ ಉದ್ಯಮಗಳಾದ, ಹೆಚ್.ಎ.ಎಲ್. ಮತ್ತು ಬಿ.ಇ.ಎಂ.ಎಲ್. ಹೊರತು ಪಡಿಸಿದರೆ, ಎನ್.ಜಿ.ಇ.ಎಫ್. ಹಾಗೂ ಐಟಿಐ ಗತಕಾಲಕ್ಕೆ ತಳಲ್ಪಟ್ಟಿವೆ. ಸಾಫ್ಟ್‌ವೇರ್ ನ ಇನ್ಫೋಸಿಸ್, ಬಾಗ್‌ಮನೆ ಪಕ್ಕದ ಮಹದೇವಪುರದಲ್ಲಿದ್ದರೂ ಸಹ ಕೆ.ಆರ್. ಪುರಂ ಕ್ಷೇತ್ರದ ಯುವಕ–ಯುವತಿಯರಿಗೆ ಇಲ್ಲಿ ಅವಕಾಶಗಳು ಹೆಚ್ಚಾಗಿಲ್ಲ.



ಈ ಕ್ಷೇತ್ರದ ವ್ಯಾಪ್ತಿಯೊಳಗೆ ಬರುವ 9 ಬಿಬಿಎಂಪಿ ವಾರ್ಡ್‌ಗಳು – ಹೊರಮಾವು (ವಾರ್ಡ್ ನಂ. 25) ರಾಮಮೂರ್ತಿ ನಗರ (26), ವಿಜಿನಾಪುರ (51), ಕೆ.ಆರ್. ಪುರಂ (52), ಬಸವನಪುರ (53), ಎ. ನಾರಾಯಣಪುರ (56), ವಿಜ್ಞಾನನಗರ (81), ಹೆಚ್.ಎ.ಎಲ್. ಏರ್ ಪೋರ್ಟ್(87), ದೇವಸಂದ್ರ (55).

ಆರು ವಾರ್ಡ್‌ಗಳಲ್ಲಿ ಕಾಂಗ್ರೆಸ್ ಹಾಗೂ 3 ವಾರ್ಡ್‌ಗಳಲ್ಲಿ ಬಿಜೆಪಿಯ ಕಾರ್ಪೋರೇಟರುಗಳು ಇದ್ದಾರೆ. ಭೌಗೋಳಿಕವಾಗಿ ವಿಶಾಲವಾದ ಕ್ಷೇತ್ರವಾಗಿದೆ. ಆಯೋಗದ ಪ್ರಕಾರ 3.70 ಲಕ್ಷ ಮತದಾರರಿದ್ದಾರೆ. ಶೇ. 60 ರಷ್ಟು ಪುರುಷರು, ಶೇ. 40 ರಷ್ಟು ಮಹಿಳಾ ಮತದಾರರಿದ್ದಾರೆ. ಈ ಹಿಂದೆ ನಗರ ಮುನ್ಸಿಪಾಲಿಟಿ ಕೌನ್ಸಿಲ್‌ನಲ್ಲಿದ್ದಾಗ ಆನೇಕ ಊರುಗಳು, ಹಳ್ಳಿಗಳು ಮತ್ತು ಪಾಳ್ಯಗಳಿದ್ದವು. ಈಗಲೂ ಈ ಪ್ರದೇಶಗಳಿಂದಲೇ ಹೆಚ್ಚಿಗೆ ಮತಗಳು ಚಲಾವಣೆಯಾಗುವುದು. ಅವುಗಳಲ್ಲಿ ಪ್ರಮುಖವಾಗಿ ಸಣ್ಣ ತಿಮ್ಮನಹಳ್ಳಿ, ಮೇಡಹಳ್ಳಿ, ಬಟ್ಟರಹಳ್ಳಿ, ದೇವಸಂದ್ರ, ವಿಜಿನಾಪುರ ಎ. ನಾರಾಯಣಪುರ, ಸಿಂಗಯ್ಯನ ಪಾಳ್ಯ, ಅಣ್ಣಪ್ಪನ ಪಾಳ್ಯ, ವಿಭೂತಿಪುರ, ವಿಮಾನಪುರ, ನೇಗೇನಾ ಹಳ್ಳಿ, ಕ್ಯಾಲಸನ ಹಳ್ಳಿ, ಗೆದ್ದಲ ಹಳ್ಳಿ, ಹೊರಮಾವು ಅಗರ, ಕೆ. ಚನ್ನಸಂದ್ರ, ಕಲ್ಕರೆ, ಟಿ.ಸಿ. ಪಾಳ್ಯ, ಬಸವನಪುರ ಮತ್ತು ಚಲ್ಕರೆ – ಇವೆಲ್ಲಾ ಹೆಚ್ಚಿಗೆ ಮತದಾನ ನಡೆಯುವ ಪ್ರದೇಶಗಳು. ಬೆಂಗಳೂರು ಮಹಾನಗರ ಪಾಲಿಕೆಯಾದ ನಂತರ ಹಾಗೂ ಇವೆಲ್ಲಾ ಬೆಂಗಳೂರಿನ ಹೊರವಲಯದ ಪ್ರದೇಶಗಳಾಗಿರುವುದರಿಂದ ರಿಯಲ್ ಎಸ್ಟೇಟ್ ವಾಣಿಜ್ಯ ವ್ಯವಹಾರಗಳಿಂದಾಗಿ, ಭೂಮಿಯ ಬೆಲೆ ಗಗನಕ್ಕೆ ಏರಿದ ಪರಿಣಾಮದಿಂದಾಗಿ, ಹಲವು ಹಳ್ಳಿಗಳೂ ಪಾಳ್ಯಗಳೂ ನೂರಾರು ದೊಡ್ಡ ದೊಡ್ಡ ಅಪಾರ್ಟ್‌ಮೆಂಟ್‌ಗಳಾಗಿ ಪರಿವರ್ತನೆಗೊಂಡಿವೆ. ಒಟ್ಟಾರೆಯಾಗಿ ಈ ಹೊರವಲಯ ಪ್ರದೇಶದ ಗುಣ–ಲಕ್ಷಣಗಳಲ್ಲಿ ಬದಲಾವಣೆಗಳಾಗಿವೆ. ಸಾಕಷ್ಟು ಖಾಸಗೀ ಮಾಲ್‌ಗಳು ತಲೆ ಎತ್ತಿವೆ.

ಆದಾಗ್ಯೂ, ಸರ್ಕಾರಿ ಆಸ್ಪತ್ರೆಗಳ ಸಂಖ್ಯೆ ವಿರಳ ಮಾತ್ರವಲ್ಲ ಕೆ.ಆರ್. ಪುರಂ ನಲ್ಲಿ ಮಾತ್ರ ಒಂದು ಹಾಗೆ ಇದೆ. ಆದರೆ, ಖಾಸಗೀ ಆಸ್ಪತ್ರೆಗಳ ಸಂಖ್ಯೆಗೆ ಲೆಕ್ಕವೇ ಇಲ್ಲ, ಸರ್ಕಾರಿ ಆಸ್ಪತ್ರೆಯಲ್ಲಿ ಮೂಲ ಸೌಕರ್ಯಗಳ ಕೊರತೆ ಸಾಕಷ್ಟಿವೆ. ಬಡ ರೋಗಿಗಳು ಆಸ್ಪತ್ರೆಗೆ ಬೇಟಿ ಕೊಟ್ಟಾಗ ಸೌಕರ್ಯಗಳಿಲ್ಲದೆ ತೊಂದರೆಗಳಿಗೆ ತುತ್ತಾಗುತ್ತಾರೆ. ಡಾಕ್ಟರ್ ಮತ್ತು ಸಿಬ್ಬಂದಿಗಳ ಬೇಜಾವಾಬ್ದಾರಿತನ ಎದ್ದು ಕಾಣುತ್ತದೆ.

ಸರ್ಕಾರಿ ಶಾಲಾ–ಕಾಲೇಜುಗಳು ಮರೆಯಾಗುತ್ತಿವೆ. ಖಾಸಗೀ ನರ್ಸರಿ, ಶಾಲೆಗಳು ನಾಯಿಕೊಡೆಗಳ ರೀತಿ ಬೆಳೆಯುತ್ತಿವೆ. ಇನ್ನೂ 40 ಕ್ಕೂ ಹೆಚ್ಚು ಸ್ಲಂ ಗಳಿವೆ. ಇಲ್ಲಿ ವಾಸ ಮಾಡುವವರು ಮೂಲ ಸೌಕರ್ಯಗಳ ಕೊರತೆಯಿಂದ ಬಳಲುತ್ತಿದ್ದಾರೆ. ಕುಡಿಯುವ ನೀರು, ಒಳಚರಂಡಿ ವ್ಯವಸ್ಥೆ ಹೇಳ ತೀರದಷ್ಟು ಹದಗೆಟ್ಟಿದೆ. ಬೇಸಿಗೆ ಕಾಲದಲ್ಲಿ ಕುಡಿಯುವ ನೀರಿಗಾಗಿ ವಿಪರೀತ ತೊಂದರೆ ಇದೆ. ರಸ್ತೆಗಳ ದುರಸ್ತಿ, ಟ್ರಾಫಿಕ್ ಒತ್ತಡ ರಾಮಮೂರ್ತಿನಗರ, ಟಿನ್ ಫ್ಯಾಕ್ಟರಿ ಬಳಿ ವಿಪರೀತವಾಗಿದೆ. ಇನ್ನು ಕಸವಿಲೇವಾರಿ ವ್ಯವಸ್ಥೆ ಹದಗೆಟ್ಟು, ಮಳೆ ಬಂದರೆ ಹಲವು ತಗ್ಗು ಪ್ರದೇಶಗಳಿಗೆ ಈಗಲೂ ನೀರು ಹರಿದು ವಾಸ ಮಾಡಲು ಕಷ್ಟ ಸಾಧ್ಯವಾಗಿದೆ. ಇವೆಲ್ಲಾ ಮೂಲ ಸೌಕರ್ಯಗಳ ಕೊರತೆಗಳನ್ನು ಪರಿಹರಿಸುವಲ್ಲಿ ಹಾಲಿ ಶಾಸಕರು ಪ್ರಯತ್ನ ಪಟ್ಟಿದ್ದರೂ, ಶಾಶ್ವತ ಪರಿಹಾರಕ್ಕೆ ಮುತುವರ್ಜಿ ವಹಿಸಿದಂತೆ ಕಾಣುತ್ತಿಲ್ಲ. ಹಲವು ವಾರ್ಡ್‌ಗಳಲ್ಲಿ 'ಇದೀಗ ಇಂದಿರಾ ಕ್ಯಾಂಟೀನ್' ಆರಂಭಿಸಿ, ನಡೆಸುತ್ತಿರುವಂತಿದೆ.

JANASHAKTHIKANNADAVARAPATRIKE: Printed, Published by **G.V.SRIRAMAREDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**